

# ನಂಬಿಕೆ ಪುರಾಣತ್‌ರ ನಡುಲ್ ಕೊಡವಡ ಸಾಂಸ್ಕೃತಿಕ ಬದ್‌ಕ್

ಕರೋಟಿರ ಶಶಿ ಸುಬ್ರಮಣಿ

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.

# ನಂಬಿಕೆ ಪುರಾಣತ್‌ರ ನಡುಲ್ ಕೊಡವಡ ಸಾಂಸ್ಕೃತಿಕ ಬದ್‌ಕ್

(ಸಂಶೋಧನೆ ಮಾಡಿತೆಳ್‌ದ್‌ನ ಪ್ರಬಂಧ)


ಕರೋಟಿರ ಶಶಿ ಸುಬ್ರಮಣಿ
ತಾಮನೆ ಕೋಟ್ರಮಾಡ

"Nambike Puraanathra Nadul Kodavada Saamskruthika badhk" Researched and documented by Karotira Shashi Subramani, Virajpet. Published by the Karnataka Kodava Sahithya Academy, Madikeri.

ಆದ್ಯ ಮುದ್ರಣ : 2014

ಪ್ರತಿ : 500

All Rights Reserved

ಎಲ್ಲಾ ಹಕ್ಕ್‌ನ ಕಾತ್ ಬೆಚ್ಚಿತ್.

ಕ್ರಯ : 85 ಉರ್‌ಪಿಯ

Price : Eighty Five Rupees

ಪ್ರಕಟಣಾ ಸಮಿತಿ :

ಅಧ್ಯಕ್ಷ : ಶ್ರೀ ಬಿದ್ದಾಟಂಡ ಎಸ್. ತಮ್ಮಯ್ಯ

ರಿಜಿಸ್ಟ್ರಾರ್ : ಮಂಗಲಾ ವೆಂ. ನಾಯ್ಕ

ಸದಸ್ಯಂಗ : ಡಾ. ತೀತಿರ ರೇಖಾ ವಸಂತ್

ಡಾ॥ ಮೇಚಿರ ಸುಭಾಷ್ ನಾಣಯ್ಯ

ಶ್ರೀಮತಿ ಮುಲ್ಲೇಂಗಡ ಬೇಬಿ ಚೋಂದಮ್ಮ

ಕು॥ ಚೀರಮ್ಮನ ವಾಣಿ ಚಂಗುಮ್ಮಯ್ಯ

ಬೊಳಿ ಪಡ್‌ತ್‌ನವು :

ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.

ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ – 571 201

ಫೋನ್ : 08272 – 229074

ಅಚ್ಚ್‌ಕಾರ :

ಶಕ್ತಿ ಪ್ರಿಂಟರ್ಸ್, ಮಡಿಕೇರಿ

# ಮುಂಜೊಲ್ಲ್

ಪ್ರತಿಯೋರ್ ಸಂಸ್ಕೃತಿರೊಳ್‌ಲೂ ನಂಬಿಕೆ – ಪುರಾಣ ಎಣ್ಣುವದ್ ಬಣ್ಣಂಡ ಬಲೆರನಕೆ ನೆಜ್ಜಿ ಪೋಯಿತಿಪ್ಪ. ಕೊಡವ ಸಂಸ್ಕೃತಿಯೂ ಇದಂಗಿಂಜ ಬೋರೆ ಅಲ್ಲ. ಉದಿಪ ತಾರುವ ಸೂರ್ಯ – ಚಣ್ಣೂರಂಗಳ ದೇವಾಂದೆಣ್ಣಿ ತೊತ್ತಿತ್, ಕೂಳ್ ತಪ್ಪನ್ನತ ಭೂಮಿತಾಯಿನ ಅವ್ವೊಂದ್ ತುದ್‌ಚಂಡ್ ಕಾವೇರಮ್ಮೆರ ಕೊದಿರ ಕುಂಞಿಯಳಾಯಿತ್ ಪಲತರ ನಂಬಿಕೆ, ಆಚಾರ – ವಿಚಾರ, ಕೊಡವ ಭಾಷಿಕ ಸಮುದಾಯತ್‌ರೊಳ್‌ಲ್ ಎಡೆಮೇಂಗಿತುಳ್ಳಾನ ನಂಗ ಕಾಂಗೊಲು. ಈ ನ್‌ಟ್ಟ್‌ಲ್ ಶ್ರೀಮತಿ ಕರೋಟಿರ ಶಶಿ ಸುಬ್ರಮಣಿ ಅಯಿಂಗ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಕ್ ಕನ್ನಡ ಸಂಸ್ಕೃತಿ ಇಲಾಖೆಂಜ ಬಂದ ಫೆಲೋಶಿಪ್ ಯೋಜನೆಲ್ "ನಂಬಿಕೆ ಪುರಾಣತ್‌ರ ನಡುಲ್ ಕೊಡವಡ ಸಾಂಸ್ಕೃತಿಕ ಬದ್‌ಕ್" ಎಣ್ಣುವ ವಿಷಯತ್ ಸಂಶೋಧನೆ ಮಾಡಿತ್ ಪುಸ್ತಕ ಎಳ್‌ದಿತ್.

ಕಯಿಂಜ ಅವಧಿಲೇ ಫೆಲೋಶಿಫ್‌ರ ಈ ಪುಸ್ತಕ ಬೊಳಿಕಾಂಗಂಡಿಂಜತ್. ಅನ್ನನಾಯಿತ್ ಈ ಯೋಜನೆರ ಏದ್ ಜವಾಬ್ದಾರಿಯೂ ಅಕಾಡೆಮಿರ ಇಕ್ಕತ ಕಾರ್ಯಕಾರಿ ಸಮಿತಿರದಲ್ಲ. ಇದ್‌ನ ಪ್ರಕಟಪಡ್‌ತಿಯಂಡುಳ್ಳ ಪೆರ್ಮೆ ಮಾತ್ರ ನಂಗಡದ್. ಫೆಲೋಶಿಪ್‌ಲ್ ಪಣಸಹಾಯ ಮಾಡಿತ್ ಸಂಶೋಧನೆಕ್ ಅವಕಾಶ ಮಾಡಿತಂದ ಕನ್ನಡ ಸಂಸ್ಕೃತಿ ಇಲಾಖೆಕೂ, ಚಾಯೋಡೆ ಪುಸ್ತಕ ಎಳ್‌ದ್‌ನ ಶ್ರೀಮತಿ ಶಶಿ ಸುಬ್ರಮಣಿ ಅಯಿಂಗಕೂ, ಈ ಪುಸ್ತಕತ್‌ನ ಎಡ್ತಿತ್ ಓದಿಯಂಡುಳ್ಳ ನಿಂಗಕೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿರ ಪರವಾಯಿತ್ ಅಭಿನಂದನೆ, ಧನ್ಯವಾದ.

ಕೊಡವ ಸಂಸ್ಕೃತಿನ ಉಳ್‌ತಿ ಬೊಳ್‌ತನ.

ಬಿದ್ದಾಟಂಡ ಎಸ್ ತಮ್ಮಯ್ಯ
ಅಧ್ಯಕ್ಷ
ಪಿಂಞ ಪ್ರಕಟಣಾ ಸಮಿತಿ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,

ಮಡಿಕೇರಿ
ತಾ : 26/10/2014

# ಎಳ್ತ್‌ಕರ್ತಿರ ಮೊಳಿ ತಕ್ಕ್

ನೀಲಕೊಡಿ ಮೋಳ್ ರಂಗ್‌ಡ ಜರಿಯುಳ್ಳ ಪಚ್ಚೆ ಪಟ್ಟ್ ಪೊಡಿಯ ಉಡ್ತ್, ಮೊಲ್‌ಕಟ್ಟ್ ಕಟ್ಟ್‌ನ ಕಾವೇರಿ ಮಾತೆರನಕೆ ಪಡ್‌ಂಞಾರ್ ಕುಂದ್ ಸಾಲ್, ಮಾಣಿಕ ಮಲೆನಾಡ್‌ಲುಳ್ಳ ಪಡಿಞಾರ್ ಮಾಕಡತ್‌ನ ನೋಟಿಯಂಡ್, ಬಯ್ಯಬರಿ ನೆರಿ ಬೆಚ್ಚ ಕಾವೇರಿ ತಾಯಿರ ನೆರಿರ ಮಡ್‌ಕ್ ಇಕ್ಕ ಬೂಮಿನ ಮುಟ್ಟುವೀಂದೆಣ್ಣುವನಕೆ, ಎತ್ತರತಿಂಜ ಇಂಞೂ ಎತ್ತರಕ್, ಬಾನತ್‌ನ ಇಕ್ಕ ತೊಡುವಿಂದೆಣ್ಣುವ ಕುಂದ್ ಸಾಲ್, ನೀಲಗಿರಿಲ್ ತಲೆ ಮುಟ್ಟಿಟೇಂದ್ ಎಣ್ಣುವಾಂಗ್ ಮುಪ್ಪಡೇ, ವಾಯವ್ಯತ್‌ರ ಪುಷ್ಪಗಿರಿಂಜ ನಾಡ ತಾಮನೆಯಾನ ತಾವಳಗೇರಿ ಮೂಂದ್ ನಾಡ್ ಬ್ರಹ್ಮಗಿರಿ ಕುಂದ್‌ಕೆತ್ತಣೆ ಉಳ್ಳ ಪೊಮ್ಮಾಲೆ ಕೊಡವುಂದೆಣ್ಣುವ ಪೊನ್ನಾಡ್‌ಲ್, ಕುಂದ್ ಸಾಲ್ ಅಲ್ಲಿ ಪತ್ತಿಯಂಡ್ ಇಲ್ಲಿ ಇಳ್‌ಂಜಂಡ್, ಜಲದೇವಿ ಆಟ್ ಆಡಿಯಂಡ್ ಪರಿಂಜಿ ಪೋಪದ್ ನೋಟುವಕ ಪಕ್ಷಿಯಾಯಿ ಪಾರಿತೊಮ್ಮ ಕುಂದ್ ಸ್ಸಾಲ್‌ನ ಅಳ್‌ಪದೆಕ್ಕಾ? ಅಳ್‌ಂದಿತ್ ಕವಿಯಾಯಿ ಪಾಡುವದೆಕ್ಕಾ?

ಷಡ್ಋತುರ ಕೊರವು, ಕುಂದ್ ಸಾಲ್‌ಲ್ ಕಾಲಕ್ ಸೆರಿಯಾಯಿತ್ ಕಾಂಗೊಲು. ಬಾಣಕ್ಕ್ ನೆಬ್ಬುವನೆಕೆ ಉಳ್ಳ ಕುಂದ್ ಸಾಲ್‌ಲ್, ಬೀಜುವಳ ಚುಳಿಕಾತ್ ಉಸ್‌ರ್ ಎಡ್‌ತಂಡ್, ಈ ಪುಣ್ಯ ಕೊಡವುಲುಳ್ಳ ಮಾನವಂಗ ಮಾತ್ರ ಅಲ್ಲ, ಪ್ರಾಣಿ-ಪಕ್ಷಿಯ, ಕ್ರಿಮಿಯೂ ಪುಣ್ಯಮಾಡಿತ್‌ಂದ್ ಎಣ್ಣೊಲು.

ಪಡ್‌ಂಞಾರ್ ದಿಕ್ಕ್‌ಡ ಬ್ರಹ್ಮಗಿರಿಕತ್ತಟಿ ಚೆನ್ನ ಪೊಂಜತ್, ಕೊಡವತಿಯ ಚುಡುವ ಪೊಕ್ಕಳ ಬಂದ ಒಟ್ಟಿರನಕೆ ಉಳ್ಳ ಕೊಡವು ನಾಡ್‌ನ, ಜಿ. ರಿಕ್ಟರಂದೆಣ್ಣುವ ಇಂಗ್ಲೀಷ್ ವಿದ್ವಾಂಸ, 'ಭಾರತ ಎಣ್ಣುವ ಬಲ್ಯೆ ಪರ್ಯಾಯ ದ್ವೀಪತ್‌ರ ಭೂಪಟತ್, ತೊಟ್ಟ್ ಕುಂಞಿರಚ್ಚಕೆ ಉಳ್ಳ ಕೊಡವು ನಾಡ್‌ರ-ಭೂಪಟ ನೋಟ್‌ಚೆಂಗಿ ತೊಟ್ಟ್ ಕುಂಞಿರ ಸಾಕ್ (Baby's Sock) ರನಕೆ ಕಾಂಬ'ಂದೆಣ್ಣುವ.

ಕರ್ನಾಟಕತ್‌ರ ನೈರುತ್ಯ ದಿಕ್ಕ್‌ಲ್ ಉಳ್ಳ ಚೆರಿಯ ಜಿಲ್ಲೆ ಕೊಡವು, ತೆಕ್ಕ್-ಬಡ್‌ಕ್‌ಕ್ (North-South) 96 ಕಿ.ಮೀ ಉದ್ದ, ಕೇಕ್ ಪಡಿಂಞಾರ್‌ಕ್ (East-west) 64 ಕಿ.ಮೀ ಅಗಲ ಉಂಡ್. ಕೊಡವು ಜಿಲ್ಲೆರ ವಿಸ್ತೀರ್ಣ 4102.3 ಸ್ಕ್ವಯರ್ ಕಿ.ಮೀ (4102.3 Square km) ಬಡಕ್ ಅಕ್ಷಾಂಶ (North Latitude) 11º.50' – 12º.50', ಕೇಕ್ ರೇಖಾಂಶ (East Langitude)75º.25' – 76º.15' ಒಳ್‌ಲ್ ಉಂಡ್.

ನಾಡ್ ಚೆರಿಯದಾಚೆಂಗಿಯೂ ಕೇಳಿ ಬಲ್ಯೆದಾಯಿತುಳ್ಳ ಕೊಡವುರ ಮೂಲ ನಿವಾಸಿಯಳಾನ ಕೊಡವಡ ಪದ್ಧತಿ, ನಂಬಿಕೆ, ಸಂಸ್ಕೃತಿ, ಬೋರೆ ಎಲ್ಲಾ ಜನಾಂಗಕಿಂಜ ಓರ್ ವೈಶಿಷ್ಟ್ಯ ಉಳ್ಳಂದ್‌ಂದ್ ಎಣ್ಣಲು. ಪಂಡ್ ಇಂಗ್ಲೀಷ್‌ಕಾರ ಶಕ್ತಿ ಇಲ್ಲತ ಬ್ರೀಟಿಷ್ ಮಕ್ಕಕ್ ಕಾರ್ಡ್‌ಲಿವರ್‌ಆಯಿಲ್ ಕೊಡ್‌ತಕ, ಕೊಡವಡ ಮಕ್ಕಕ್ ಬಾವುಲಿ ಬರ್‌ತದ್!

ಕಾವೇರಿ ಮಾತೆ ಪುಟ್ಟ್‌ನ ಈ ಪುಣ್ಯನೆಲೆ, ಇಂತ ಪುಣ್ಯನೆಲೆರ, ಮೂಲ ನಿವಾಸಿಯಳಾನ ಕೊಡವಡ **"ನಂಬಿಕೆ ಪುರಾಣತ್‌ರ ನಡುಲ್ ಕೊಡವಡ ಸಾಂಸ್ಕೃತಿಕ ಬದ್‌ಕ್"** ಎಣ್ಣುವ ಎಳ್ತ್ ಪುಟ್ಟಕ್ ಕಾರಣಕರ್ತಂಗಳಾನ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿರ ಅಧ್ಯಕ್ಷಿಣಿಯಾಯಿತಿಂಞ ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ, ರಿಜಿಸ್ಟ್ರಾರ್ ಶ್ರೀ ವಿನೋದ್ ಚಂದ್ರ, ಕನ್ನಡ-ಸಂಸ್ಕೃತಿ ಇಲಾಖೆರ ಜಂಟಿ ನಿರ್ದೇಶಕಂಗಳಾನ ಶ್ರೀ ಕಾ.ತ. ಚಿಕ್ಕಣ್ಣ ಅಯಿಂಗಕು (2010-12), ಈ ಸಂಶೋದನೆ ಮಾಡ್‌ನ ಪ್ರಬಂದತ್‌ನ ಬೊಳಿ ಪಡ್‌ತಿಯಂಡುಳ್ಳ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿರ ಅದ್ಯಕ್ಷ ಬಿದ್ದಾಟಂಡ ತಮ್ಮಯ್ಯ ಪಿಂಞ ಅಕಾಡೆಮಿರ ಎಲ್ಲಾ ಪದಾಧಿಕಾರಿಯಕು ನಾಡ ವಂದನೆ. ಓದ್‌ಗ ಮಾಜನ ನಾಡ ತಪ್ಪು ನೆಪ್ಪುನ ವಿಮರ್ಶೆ ಮಾಡಿತ್ ನಾಕ್ ಅರಿಚಿಟ್ಟಿತ್ ನಾನ್ ಇಂಞಿ ಮಿಂಞಕ್ ಎಳ್‌ದುವ ಎಳ್ತ್‌ಕ್ ಬಟ್ಟೆ ಬೊಳಿ ಕಾಟೊಂಡೂಂದ್ ಕೇಟವಿ.

**ಕರೋಟಿರ ಶಶಿ ಸುಬ್ರಮಣಿ**
ತಾಮನೆ : ಕೋಟ್ರಮಡ
ಯವಕಪಾಡಿ, ಕಕ್ಕಬೆ.

ನಾಳಂಕೆ : 9/7/2012

# ವಿಷಯ ಸೂಚಿ


| | | |
|---|---|---|
| 1. | ಕೊಂಬ್ (ಅಧ್ಯಾಯ) ಒಂದ್<br>ಮುಂಬೆಳ್ತ್ | 1 |
| 2. | ಕೊಂಬ್ ದಂಡ್<br>ಚೂರಿಯ ಚಣ್ಣೂರ ಜ್ಯೋತಿ ಮಂಡಲವೇ ದೇವಾಂದ್<br>ನಂಬ್‌ನವು ಕೊಡವ<br>ಎ) ಕೊಡವಕ್ ಕಣ್ಣ್‌ಗೊಂಡ್ ಕಾಂಬಳ ಚೂರಿಯನೇ ದೇವ<br>ಬಿ) ಕೊಡವಕ್ ಚೂರಿಯಂಡ ಕೂಡ ಚಣ್ಣೂರನು ದೇವ. | 30 |
| 3. | ಕೊಂಬ್ ಮೂಂದ್<br>ಮಣ್ಣ್-ತೀರ್ಥವೇ ಕೊಡವಡ ಪ್ರಾಣ<br>ಎ) ಮಣ್ಣ್ (ಭೂಮಿ)<br>ಬಿ) ತೀರ್ಥರೂಪಿಣಿಯಾನ ಕಾವೇರಿಯಮ್ಮೆ ಕೊಡವಡ ಕುಲದೇವ | 37 |
| 4. | ಕೊಂಬ್ ನಾಲ್<br>ಕೊಡವಡ ದೇವಕಾಡ್ | 68 |
| 5. | ಕೊಂಬ್ ಅಂಜಿ<br>ಕೊಡವ ಪುಟ್ಟ್‌ನಲ್ಲಿ | 76 |
| 6. | ಕೊಂಬ್ ಆರ್<br>ಕೊಡವಡ ಕೈಮಡ | 80 |
| 7. | ಕೊಂಬ್ ಏಳ್<br>ಕೊಡವಡ ಮಂಗಲ | 82 |
| 8. | ಕೊಂಬ್ ಎಟ್ಟ್<br>ಕೊಡವಡ ಪೋಳ್ದ್<br>ಎ) ಕೈಲ್ ಪೋಳ್ದ್<br>ಬಿ) ಪುತ್ತರಿ ಪೋಳ್ದ್ | 104 |
| 9. | ಕೊಂಬ್ ಒಯಿಂಬದ್<br>ಕೊಡವ ಚತ್ತಲ್ಲಿ | 109 |
| 10. | ಗ್ರಂಥ ವಿವರ | 123 |

# ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

## 2014–2015ನೇ ಕಾಲತ್‌ರ ಸಮಿತಿ ಸದಸ್ಯಂಗ

| | |
|---|---|
| ಬಿದ್ದಾಟಂಡ ಎಸ್. ತಮ್ಮಯ್ಯ | ಅಧ್ಯಕ್ಷ |
| ಡಾ॥ ಮೇಚಿರ ಸುಭಾಷ್ ನಾಣಯ್ಯ | ಸದಸ್ಯ |
| ಪಡಿಞಾರಂಡ ಜಿ. ಅಯ್ಯಪ್ಪ | ಸದಸ್ಯ |
| ಚೇರಮ್ಮನ ವಾಣಿ ಚಂಗುಮ್ಮಯ್ಯ | ಸದಸ್ಯೆ |
| ಮುಲ್ಲೇಂಗಡ ಬೇಬಿ ಚೋಂದಮ್ಮ | ಸದಸ್ಯೆ |
| ಮದ್ರೀರ ಸಂಜು ಬೆಳ್ಯಪ್ಪ | ಸದಸ್ಯ |
| ಐಮಂಡ ಭಾಸ್ಕರ | ಸದಸ್ಯ |
| ಡಾ. ತೀತಿರ  ರೇಖಾ ವಸಂತ್ | ಸದಸ್ಯೆ |
| ಮೇದರ ರಾಣಿ | ಸದಸ್ಯ |
| ಆಪಾಡಂಡ ರಘು | ಸದಸ್ಯ |
| ಕುಡಿಯಡ ಬೋಪಯ್ಯ | ಸದಸ್ಯ |
| ಚೋವಂಡ ಎಸ್. ಬೋಪಯ್ಯ | ಸದಸ್ಯ |
| ಕಾಳಚಂಡ ಜಿ. ಕಾರ್ಯಪ್ಪ | ಸದಸ್ಯ |
| ಅಣ್ಣೀರ ಹರೀಶ್ ಮಾದಪ್ಪ | ಸದಸ್ಯ |
| ಮಂಗಲಾ ಪೆಂ. ನಾಯ್ಕ | ರಿಜಿಸ್ಟ್ರಾರ್ |

# ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,
# ಮಡಿಕೇರಿ
# 2012–2013 ನೇ ಕಾಲತ್‌ರ ಸಮಿತಿ ಸದಸ್ಯಂಗ

| | |
|---|---|
| ಶ್ರೀ ಅಡ್ಡಂಡ ಸಿ. ಕಾರ್ಯಪ್ಪ | ಅಧ್ಯಕ್ಷ |
| ಪ್ರೊ. ಇಟ್ಟೀರ ಕೆ. ಬಿದ್ದಪ್ಪ | ಸದಸ್ಯ |
| ಶ್ರೀಮತಿ ಚೇಂದಿರ ನಿರ್ಮಲಾ ಬೋಪಣ್ಣ | ಸದಸ್ಯೆ |
| ಶ್ರೀ ಮಾಳೇಟಿರ ಅಭಿಮನ್ಯುಕುಮಾರ್ | ಸದಸ್ಯ |
| ಶ್ರೀ ಬೊಟ್ಟೋಳಂಡ ಮಿಟ್ಟು ಪೂಣಚ್ಚ | ಸದಸ್ಯ |
| ಶ್ರೀ ಚರ್ಮಂಡ ಪೂವಯ್ಯ (ಅಪ್ಪಣು) | ಸದಸ್ಯ |
| ಶ್ರೀ ಕುಡಿಯರ ತಮ್ಮಯ್ಯ | ಸದಸ್ಯ |
| ಶ್ರೀಮತಿ ಬಡಕಡಮ್ಮಂಡ ಕಸ್ತೂರಿ ಗೋವಿಂದಮ್ಮಯ್ಯ | ಸದಸ್ಯೆ |
| ಶ್ರೀಮತಿ ಚೇಂದಂಡ ಸುಮಿ ಸುಬ್ಬಯ್ಯ | ಸದಸ್ಯೆ |
| ಶ್ರೀ ಮೇಲತಂಡ ಎ. ರಮೇಶ್ | ಸದಸ್ಯ |
| ಶ್ರೀಮತಿ ನೆರೆಯಂಡಮ್ಮಂಡ ಉಮಾ ಪ್ರಭು | ಸದಸ್ಯೆ |
| ಶ್ರೀ ನಾಪಂಡ ರವಿ ಕಾಳಪ್ಪ | ಸಹ ಸದಸ್ಯ |
| ಶ್ರೀ ಮೋಟನಾಳಿರ ಸನ್ನಿ ಕಾರ್ಯಪ್ಪ | ಸಹ ಸದಸ್ಯ |
| ಶ್ರೀ ಮಂಡೇಪಂಡ ಬೋಸು ಮೊಣ್ಣಪ್ಪ | ಸಹ ಸದಸ್ಯ |
| ಶ್ರೀಮತಿ ಎನ್. ಶಾಂತಮ್ಮ | ರಿಜಿಸ್ಟ್ರಾರ್ |

# ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

## 2010–2011 ನೇ ಕಾಲತ್‌ರ ಸಮಿತಿ ಸದಸ್ಯಂಗ

| | |
|---|---|
| ಐಮುಡಿಯಂಡ ರಾಣಿ ಮಾಚಯ್ಯ | ಅಧ್ಯಕ್ಷ |
| ಚಿಲ್ಲಜಮ್ಮನ ನಾಣಮ್ಮಯ್ಯ ಸೋಮೇಶ್ | ಸದಸ್ಯ |
| ಬಾಚರಣಿಯಂಡ ರಾಣು ಅಪ್ಪಣ್ಣ | ಸದಸ್ಯ |
| ಕೊರಕುಟ್ಟಿರ ಸರ ಚಂಗಪ್ಪ | ಸದಸ್ಯ |
| ಕಾಳಚಂಡ ಎ. ಪಳಂಗಪ್ಪ | ಸದಸ್ಯ |
| ಪೊನ್ನೀರ ಪ್ರಭು ಕಾವೇರಪ್ಪ | ಸದಸ್ಯ |
| ಮಂಡೇಪಂಡ ಗೀತಾ ಮಂದಣ್ಣ | ಸದಸ್ಯೆ |
| ವದಪಡ ಅಯ್ಯಪ್ಪ | ಸದಸ್ಯ |
| ಮಡೆಯಂಡ ವಿಠಲ್ ಬೆಳ್ಯಪ್ಪ | ಸದಸ್ಯ |
| ಪಡಿಂಞಾರಂಡ ಎ. ಪ್ರಭುಕುಮಾರ್ | ಸದಸ್ಯ |
| ತೇಲಪಂಡ ಕವನ್ ಕಾರ್ಯಪ್ಪ | ಸದಸ್ಯ |
| ಮಡೆಯಂಡ ಸಬಿತಾ ಕಾರ್ಯಪ್ಪ | ಸದಸ್ಯೆ |
| ಬೀನಂಡ ಎಸ್. ಮೊಣಚ್ಚ | ಸದಸ್ಯ |
| ವಿನೋದ್ ಚಂದ್ರ | ರಿಜಿಸ್ಟ್ರಾರ್ |

# ಕೊಂಬ್ ಒಂದ್

## ಮುಂಬೆಳ್ತ್

ಭಾರತ ದೇಶತ್‌ರ ಪಂಡೇತ ಭೂಗೋಳತ್ ಪಡ್‌ಂಞಾರ್ ಕುಂದ್‌ಡ ಬಡ್‌ಕ್ ಬರಿನ, ಸಹ್ಯಾದ್ರಿಂದೂ, ತೆಕ್ಕ್ ಬರಿನ ಮಲಯ ಕುಂದ್‌ಂದು ಎಣ್ಣುವ. ಸಹ್ಯಾದ್ರಿ – ಮಾಹಾರಾಷ್ಟ್ರ ತ್‌ರ ರತ್ನಗಿರಿಂಜ, ಬಡ್‌ಕ್‌ಂಜ– ತೆಕ್ಕ್‌ಕ್ ಕನ್ಯಾಕುಮಾರಿಕತ್ತಣೆ ಸುಮಾರ್ 966 ಕಿ.ಮೀ. ಕುಂದ್ ಮೋಳ್‌ಲ್ ಕುಂದ್ ಬುಡಿತಿತ್ ಪರಟ್‌ನನಕೆ ಉಂಡ್. ಕರ್ನಾಟಕ ರಾಜ್ಯತ್‌ಲ್, ಬೆಳಗಾವಿ ಜಿಲ್ಲೆರ ಖಾನಾಪುರತಿಂಜ ತೊಡಂಗಿತ್ ಕೊಡವು ದೇಶತ್‌ರ ಕೊಡವಡ ಕುಲಮಾತೆ ಪೊರ್‌ಂದ ಬ್ರಹ್ಮಗಿರಿ ಕುಂದ್‌ಕತ್ತಣೆ ಉಳ್ಳ ಪಡ್‌ಂಞಾರ್ ಕುಂದ್ ಸಾಲೂ ಸಹ್ಯಾದ್ರಿಯೇ ಆಯಿತುಂಡ್. "ಸಹ್ಯ" ಪೆದವೇ ಎಣ್ಣುವನಕೆ ಕಲಿಯುಗತ ಮಾನವಂಗಡ ಎಲ್ಲಾ ತರತ ಕಳಿನ ಸಹಿಸಿಯಂಡುಳ್ಳ ಕಾವೇರಿತಾಯಿ, ಭೂತಾಯಿರನಕೆ ಪೆರ್ಮೆಯುಳ್ಳ ಕುಂದ್‌ಂದ್ ಅರ್ಥ. ವೇದ ಕಾಲತೂ, ಪುರಾಣತೂ ಸಹ್ಯಂ–ಸಹ್ಯಾದ್ರಿ ಪ್ರಕೃತಿರ ಚಾಯಿ ಬೋಜಕ್ ಪೆದ ಎಡ್‌ತದಾಯಿತಿಂಜತ್. ಮಹಾಭಾರತತ್‌ರ ಭೀಷ್ಮ ಪರ್ವತ್ "ಏಳ್‌ಕುಲ" ಕುಂದ್‌ರ ಕೂಟ್‌ಲ್ ಸಹ್ಯಾದ್ರಿರ ಪೆದವೂ ಉಂಡ್. "ಪ್ರಪಂಚ ಹೃದಯಂ" ಎಣ್ಣುವ ಸಂಸ್ಕೃತ ಗ್ರಂಥತೂ ರಕ್ಷವತ್, ಮಹೇಂದ್ರ, ವಿಂದ್ಯ, ಮಲಯ, ಸಹ್ಯ, ಶುಕ್ತಿಮತ್, ಪಾರಿಯಾತ್ರಾಂದ್ – ಸಹ್ಯಾದ್ರಿನ ಕೂಟಿ ಏಳ್ ಕುಂದ್‌ರ ಪೆದ ಎಣ್ಣುವ. ಕಾಳಿದಾಸಂಡ ರಘುವಂಶ ಕಾವ್ಯವೂ ರಾಮ ಸಹ್ಯಾದ್ರಿಕ್ ಬಂದಾನ ಎಣ್ಣುವ. ಮಾರ್ಕಂಡೇಯ

ಪುರಾಣತೂ, ಸಹ್ಯಾದ್ರಿರ, ಕಾವೇರಿ ನೆಲೆ ಎಡ್‌ತ ಬಡ್‌ಕ್ ಬರಿ ಇಡೀ ವಿಶ್ವತ್‌ಲೇ ಪೆರ್ತ್ ಚಾಯುಳ್ಳದಾಯಿತುಂಡ್‌ಂದ್ ಕೊಡವು ನಾಡ್‌ರ ಚಾಯಿ, ಬೋಜತ್‌ನ ಪೊಗಳುವ. ವಾಲ್ಮೀಕಿ ರಾಮಾಯಣತ ಕಿಷ್ಕಿಂದ ಕಾಂಡತ್...........ಇನ್ನನೆ ಉಂಡ್

ವಿಚಿತ್ರ ಶಿಖರ ಶ್ರೀಮಾಂಶ್ಚಿತ್ರ ಪುಷ್ಪಿತ ಕಾನನಃ ।
ಸ ಚಂದನ ವನೋದ್ದೇಶೋ ಮಾರ್ಗಿತವ್ಯೋ ಮಹಾಗಿರಿಃ ॥

ವಿಶ್ವತೆಲ್ಲಿಯೂ ಕಾಂಬಕ್ಕಟ್ಟತಂತ ಕುಂದ್‌ಸಾಲ್‌ಲ್ ಮಾವಿಷ್ಟು ಕೊದಿಪ, ಚಿತ್ತ್‌ರ ಪೂವು, ಕಾಡ್, ದುಂಬಾ ದುಂಬಿತುಂಡ್‌ಂದೂ, ಇಲ್ಲಿ ಉಳ್ಳ ಚಾಂದ್ ಮರತ್‌ರ ಚಾಂದ್‌ರ ಪವಿತ್ರ ಮಣವೇ ಈ ಮಾಕುಂದ್‌ಕ್ ಪೋಪಕುಳ್ಳ ಬಟ್ಟೆ ಕಾಟುವಾಂದೂ, ಕುಂದ್, ಕಾಡ್‌ಲೇ ಜೀವ ತೇಚ ವಾಲ್ಮೀಕಿ ಮಹರ್ಷಿಯೇ ಎಣ್ಣುವಕ, ಸಹ್ಯಕುಂದ್‌ರ ಮಯಿಮೆ, ಮಾಯೆ ಸಾಮಾನ್ಯ ಅಲ್ಲಾಂದ್ ನಂಗ ಅರಿಯೊಲು. ಸಹ್ಯ ಕುಂದ್‌ನ ಕೈಲಾಸ ಕುಂದ್‌ಂದೂ, ಕಾಮದೇನೂಂದೂ ಎಣ್ಣುವ. ಬ್ರಹ್ಮಗಿರಿ ಕುಂದ್ ಸಾಲ್‌ಲೊಮ್ಮ ನಿಂದ್ ನೋಟ್‌ನಕ ಎಂಗಡ ಕಣ್ಣ್‌ಲ್ ಅಳ್‌ಪಕಯ್ಯತ ನೀಲಕೊಡಿ ಚೂಡಿ ನಿಂದ ಕುಂದ್‌ಸಾಲ್‌ರ ಕೊಡಿಲ್, ಮೋಡತ್‌ನ ಪೊರತಂಡುಳ್ಳ ಕುಳಿಮೆಕಾರ್ತಿಯ ಪೋರ್‌ಪೊತ್ತಂಡ್, ತಾಮಿಂಞ - ನೀ ಮಿಂಞಾಂದ್ ಓಡಿಕಳಿಪಳ ಆ ಬೋಜ, ಕುಂದ್‌ನ ಪಾರಕಾಪಳ ಪಚ್ಚೆಕೋಟೆರ ಸುತ್ತೋಡ್ ಸುತ್ತೂ, ಮುತ್ತ್ ಮಾಲೆಯೋಲೆ - ಚಾಂದ್, ಪಲ್‌ಚಿ, ಮಾಂಗೆ, ಬೆಂಗೆ, ಆಜಿನಿ, ದೇವದಾರ್, ಮತ್ತಿ, ದೂಪ ತರ ತರ ಮರ ಸಾಲ್. ಈ ಚಾಯಿ ಕಂಡಿತೇ ಕೊಡವ ಪೆರಿಯವು, ಈ ನಾಡ್‌ನ "ಪೊಮ್ಮಾಲೆ ಕೊಡವೂಂದ್" ದುಡಿಕೊಟ್ಟಿ ತಾಳ ಇಟ್ಟ್ ಪಾಡ್‌ಚೀಂದ್ ಎಣ್ಣೊಲು. ಇಲ್ಲಿ "ಶ್ರೀಮಾಂಶ್ಚಿತ್ರ ಪುಷ್ಪಿತಾಂದ್" ಎಣ್ಣದ್ ಕೊಡವ ಪಾಜೆಲ್ ಚಿತ್ರಂಗಿ ಕಾಡ್, ಚಿತ್ರಂಗಿ ಪೂವ್. ನಂಗ ಸ್ಕೂಲ್‌ಕ್ ಪೋಪಕ ಚಿತ್ರಂಗಿ ಎಲ್‌ಕಂಡತ್‌ನ ಬಾಯಿಕ್‌ಟ್ಟಂಡ್ ಚೋಂದಿತೆ ಮಾಡಿಯೋವ ಇಂಜತ್. ಈ ಭೂಮಂಡಲತೆಲ್ಲಿಯೂ ಕಾಂಬಕ್‌ಟ್ಟತ ಪ್ರಕೃತಿರ ಚಾಯಿ ಬೋಜ ಉಳ್ಳ ಈ ಕೊಡವು ನಾಡ್‌ನ ಬರೀ ಕೊಡವೂಂದ್ ಎಣ್ಣುವಾಂಜಂಜ "ಪೊಮ್ಮಾಲೆ ಕೊಡವೂಂದ್" ಕಾಕ್‌ನಕ ಕಾವೇರಿ ತಾಯಿರ ನಾಡ್, ಈ ಪವಿತ್ರಮಣ್ಣ್‌ರ ಪೆದ ಪೂರ್ತಿಯಾಪಾಂದ್ ನಾಡ ಅಭಿಪ್ರಾಯ. "ಕೊಡುಮಲೆ - ಕೊಡಿಮಲೆ"- ಪೆದವೇ ಎಣ್ಣುವನಕೆ ಕುಂದ್‌ರ ಕೊಡಿಲುಳ್ಳ ಅವ್ವ, ಅಲ್ಲೇಂಗಿ ಕುಂದ್‌ರ ಕೊಡಿಲುಳ್ಳ ಅವ್ವಂಡ (ಕೊಡಿ+ಅವ್ವ) ಆಶೀರ್ವಾದ ಉಳ್ಳ 'ಕೊಡವು' [1]. (Imperial Gazetteer

of India (1908) Mysore & Coorg page No:273 Origin of name – ಕೊಡವು (KODAVU)ಂದ್ ಕೊಡವ ಪಾಜೆಲೇ ಉಂಡ್). ನಾಡ್‌ಲ್, ತೀರ್ಥ ರೂಪಿಣಿಯಾಯಿತುಳ್ಳ ಕಾವೇರಿ ತಾಯಿರ ಆಶೀರ್ವಾದ ಉಳ್ಳ ಕೊಡವಕ್, ಈ ಭೂಮಿಕ್ ಅವಶ್ಯಕಥೆಯುಳ್ಳ 'ಅಪ'–ನೀರ್–ತೀರ್ಥವೇ ಕುಲದೇವ. ಪ್ರಕೃತಿಯೇ ದೇವ. ಈ ನಡ್‌ಪು ಕೊಡವ ಇಂದೆಕೂ ಉಳಿಚಿಟ್ಟಂಡ್ ಬಂದದ್ ಮೆಚ್ಚುವಂತ ವಿಷ್ಯ. ಕೊಡವು ನಾಡ್‌ಡ ಕೊಡವೂಂದುಳ್ಳ ಪೆದಕ್ ಸೆರಿಯಾಯಿತ್, alpine landಂದ್ ಕೊದಿಚಿ ಕಾಕ್‌ಚಿ ಆ ಕಾಲತ್, ರಿವರೆಂಡ್ ಜಿ ರಿಕ್ಟರ್‌ಂದೆಣ್ಣುವ ಇಂಗ್ಲೀಷ್ ವಿದ್ವಾಂಸ.

"Coorg" anglicised from Kodagu or Kodumale, a name which it has borne from the remotest ages and which in its meaning – "steep mountains" graphically depicts the character of this remarkable alpine land[2]

ಬ್ರೀಟಿಷ್‌ಕಾರ ಅಯಿಂಡ ವಾಕ್ಸಂಪ್ರದಾಯಕ್ ಒತ್ತನೆಕೆ ಈ ಕೊಡವುನಾಡ್‌ನ 'Coorg' ಕೂರ್ಗ್‌ಂದ್ ಕಾಕ್‌ಚಿ. ಕುಂದ್, ಕುಡ್‌ಪಾಯಿತುಳ್ಳ ಈ ನಾಡ್‌ರ "ಕೊಡವು"ಂದೆಣ್ಣುವ ಪೆದ ಪಂಡೇ ಉಳ್ಳದಾಯಿತುಂಡ್. ಇಲ್ಲಿಯತ್‌ರ ಭೂಮಿರ ಚಾಯಿ, ಚಂದ ಉಳ್ಳಾಂಗ್ ಸರಿಯಾನ ಪೆದ ಕೊಡವುಂದ್ ಆಯಿತುಂಡ್. ಕೊಡವಡ ವೇದ ಸಮಾನವಾನ ಬಾಳೋಪಾಟ್‌ರ ಎಲ್ಲಾ ಅದ್ಯಾಯತೂ "ಮೊಮ್ಮಾಲೆ ಕೊಡವು[3] "ಂದೇ ಪಾಡುವ. ವೇದ ಸಮಾನವಾನ ಕೊಡವಡ "ಪಳಮೆ" Oral-heritage-ಪಟ್ಟೋಲೆ ಪಳಮೆಲ್, ಕೊಡವ ಈ ಬ್ರಹ್ಮಾಂಡ–ಪ್ರಕೃತಿನ, ಅದ್‌ಂಡ ಮೂಲ ರೂಪತ್‌ನೇ–ಚೂರಿಯ, ಚಣ್ಣೀರ, ಭೂಮಿ, ತೀರ್ಥ, ಅಗ್ಗಿಬಾಯಿ ತಿತ್ತ್, ಅವಿಜ, ವಾಯಿಂದ್ ಪಾಡಿ–ಪೊಗಳಿಯಂಡ್, ಕೊಂಡಾಡಿ–ತುದಿಪದ್ ಕಾಂಗೊಲು. ಕೊಡವ ತಂಗಡ ನಲ್ಲಂಗೂ, ತೀಯಂಗೂ ದುಡಿಕೊಟ್ಟಿ ಪಳಮೆನ ಪಾಡಿತ್ತೇ ಪಾಡೊಂಡು ದೆಣ್ಣುವ, ನಿರ್‌ಕ್ ನಂಬಿಕೆ ಕೊಡವಡಲ್ಲಿ ಇಕ್ಕಲೂ ಉಂಡ್. ತಂಗಡ ತಡಿರ ಸೃಷ್ಟಿಕ್ ಕಾರಣಕರ್ತಂಗಳಾನ ತಂಗಡ ಪೆರಿಯಯಿನ "ಕಾರಣವೊ"ಂದೆಣ್ಣಿಯಂಡ್ ಪೆರಿಯಯಿನ ದೇವಕ್ ಸಮ ಕಾಂಬ ಕೊಡವ, ಈ ಭೂಮಿಲ್ ಬಾಳಿ ಬದುಕುವಕ್ ಎಲ್ಲಾ ಸೌಕರ್ಯ ಮಾಡಿತಂದಂಡುಳ್ಳ ಈ ಕಣ್ಣ್‌ಗೊಂಡ್ ಕಾಂಬಳ

1. Imperial Gazetteer of India (1908) Mysore & Coorg P-273 (Origin of Name – ಕೊಡವು (Kodavu) ಂದ್ ಕೊಡವ ತಕ್ಕ್‌ಲ್‌ಉಂಡ್ 2&4. Gazetteer of coorg – G.Richter P. No.4 & 13 (year1870)

3. ಪಟ್ಟೋಲೆ ಪಳಮೆ (year1924) ನಡಿಕೇರಿಯಂಡ ಚಿಣ್ಣಪ್ಪ

ಪ್ರಕೃತಿನ ಕೊಂಡಾಡಿ ಪಾಡ್‌ನಕ ಮಾತ್ರ ದೇವ ನಲ್ಲದ್ ಮಾಡುವಾಂದೆಣ್ಣುವ ನಂಬಿಕೆ ಕೊಡವಡಲ್ಲಿ ಇಕ್ಕಲೂ ಉಂಡ್. ಸಮಯ ಸಂದರ್ಭಕ್ ಒತ್ತನಕೆ ಮಂಗಲತ್, ನಮ್ಮೆ-ನಾಳ್, ಚಾವು ಇನ್ನನೆ ಪಲತರ ಕಾರ್‌ಬಾರ್‌ಲೂ ಬಾಳೋ ಪಾಟ್ ಇಡೀ ಕಾರ್‌ಬಾರ್‌ನ ರಸಮೇಳ ಮಾಡುವ. ಪಾಡುವವು, ತಂಗಡ ಪೆರಿಯಯಿಂಡ ಕೇಳಿನ ಊರ್‌ರ, ನಾಡ್‌ರ ಕೇಳಿನ, ಕಚ್ಚಿದುಡಿ ಕೊಟ್ಟಿಯಂಡ್ ಪಾಡುವ. ಇದ್ ಅನುವಂಶೀಯವಾತ್ ಬಂದದ್- ಅಯಿಂಡ ಅಜ್ಜ ಅಪ್ಪಂಗಳುಂಡ್ ಪಡ್‌ಚದ್. ಪಳಮೆನ ಇಂಗ್ಲೀಷ್‌ಕಾರ ಕೊಡವ ಪಾಜೆಂಜ ಇಂಗ್ಲೀಷ್‌ಕ್ ತರ್ಜುಮೆ ಮಾಡಿತ್. ಗ್ರೇಟರ್‌ಂದೆಣ್ಣುವ ಇಂಗ್ಲೀಷ್ ಪಂಡಿತ ತರ್ಜುಮೆ ಮಾಡ್‌ನ ಕೊಡವಡ ಪಳಮೆ, "The folk songs of southern India-1871ಲ್ ಛಾಪು ಆಯಿತ್ ಬೊಳಿಕಂಡಿತ್. ಪ್ರಕೃತಿನೇ ದೇವಾಂದ್ ನಂಬ್‌ನ ಕೊಡವಡ ವಿಷಿಯ ಸಂಶೋದನೆ ಮಾಡುವಕ ನಂಗಕ್ ವೇದ ಪಡಿಪಕ್ಕಾಯಿತ್ ತಾಂಡ ಜೀವಮಾನತ್‌ನೇ ತೇಚಿ ಎಡ್‌ತ ಜರ್ಮನಿರ ವಿದ್ವಾಂಸ ಮ್ಯಾಕ್ಸ್‌ಮುಲ್ಲರ್ ಎಣ್ಣದ್ ಗ್ಯಾನಾಪ.

"The Religion of the Veda knows of no idols .The worship of idols, in India is a secondary formation, a later degradation of the more primitive worship of ideal gods"

ಮೈಸೂರ್ ಆಸ್ಥಾನ ಮಹಾವಿದ್ವಾನ್ ಹೆಚ್.ಪಿ. ವೆಂಕಟರಾವುರಯಿಂಡ ಕನ್ನಡ ಅನುವಾದ ಋಗ್ವೇದ ಸಂಹಿತಾ ಇನ್ನನೆ ಎಣ್ಣುವ. "ವೇದಕಾಲದಲ್ಲಿದ್ದ ಪೂಜಾವಿಧಾನಗಳಲ್ಲಿ ವಿಗ್ರಹಗಳ ಮಾತೇ ಇಲ್ಲ. ವಿಗ್ರಹಾರಾಧನೆ ಈಚಿನದು. ಇದು ಪುರಾತನವಾದ ಭಾವನಾತ್ಮಕವಾದ ಪೂಜಾವಿದಾನದ ವಿಕಾರ_" ಮ್ಯಾಕ್ಸ್‌ಮುಲ್ಲರ್ ರವರು ವಿಗ್ರಹಾರಾದನೆ ವೇದಕಾಲದಲ್ಲಿ ಇರಲಿಲ್ಲವೆಂದು ಅಬಿಪ್ರಾಯಪಡುತ್ತಾರೆ. ಹಿಂದೂ ಶಾಸ್ತ್ರದ ವಿಷಯದಲ್ಲಿ ಇವರಷ್ಟು ನಿಷ್ಪಕ್ಷಪಾತವಾಗಿ ಬರೆದಿರುವವರು ಇನ್ನೊಬ್ಬ ಐರೊಪ್ಯ ಪಂಡಿತರಿಲ್ಲ'.[4] ಇಲ್ಲಿ ನಂಗ ಇಂಇಠೋರ್ ವಿಷಯ ಅರಿಯೊಂಡು ಋಗ್‌ವೇದ ಆದ್ಯ ಛಾಪು ಕಂಡಿಯದೇ ಮ್ಯಾಕ್ಸ್ ಮುಲ್ಲರ್ ಎಣ್ಣುವ ಪಂಡಿತನುಂಡ್. ಅದ್ ಛಾಪು ಆಯಿ ಇಂಗ್ಲೇಂಡ್‌ಲ್! ಇಂಡಿಯತಲ್ಲ!

ಇದೆಲ್ಲಾ ನೋಟ್ಟಕ ಪ್ರಕೃತಿನ, ಪ್ರಕೃತಿ ರೂಪತ್ತ್ ಆರಾದನೆ ಮಾಡಿಯಂಡ್ ಮೂಲಕ್ ದಕ್ಕೆ ಬರತನಕೆ ತಂಗಡ ನಂಬಿಕೆ - ಸಂಸ್ಕೃತಿರ ಕೂಡೆ ಈ ಪವಿತ್ರ ಪ್ರಕೃತಿನ ಉಳಿಚಿಟ್ಟಂಡ್‌ಬಂದ ಕೊಡವ, ಈ ಪ್ರಕೃತಿರ ಆರ-ಆಶೀರ್ವಾದ ಪಡ್‌ಂದವು. ತೀರ್ಥರೂಪಿಣಿಯಾನ ಕಾವೇರಿರ ಆಶೀರ್ವಾದ ಉಳ್ಳವು ಎಣ್ಣುವಾತ್ ಓರ್

4. ಋಗ್ವೇದ ಸಂಹಿತಾ

ಸಂಶಯವೂ ಇಲ್ಲೆ. ಆರಾದಕಂಗ, ಪ್ರಕೃತಿನ ನಾಶಮಾಡತಯಿಂಗಕ್ ಪ್ರಕೃತಿರ ಆರ ಇಂಜಿತ್ತೇ ಇಪ್ಪಾಂದ್ ವೈಜ್ಞಾನಿಕವಾಯಿತೂ ಎಣ್ಣೊಲು. ಇದ್‌ನ ನಂಗ "ಕೊಡವ" ಎಣ್ಣುವ ದ್ರಾವಿಡ ಭಾಷೆರ ಶಬ್ಧತ್‌ಲೇ ಕಾಂಗೊಲು, ಕೊಡ್‌ಂದೆಣ್ಣಕ ದ್ರಾವಿಡ ಭಾಷೆಲ್ ಪಡ್‌ಇಾರ್‌ಂದ್ ಅರ್ಥ. ಕೊಡ್‌ನಾಡ್‌ಂದೆಣ್ಣಕ ಪಡ್‌ಇಾರ್ ಕುಂದ್‌ಲಡಂಗ್‌ನ ನಾಡ್‌ಂದ್ ಅರ್ಥ.

1. ಕೊಡ್(ಆಶೀರ್ವಾದ–Exerts Influence) +ಅವು(Those) = ಕೊಡವು = Those blessed.

2. ಕೊಡ್ + ಅವ್ವ = ಕೊಡವ (People blessed)ಕಾವೇರಮ್ಮೆರ ಆಶೀರ್ವಾದ ಪಡ್‌ಂದವು.

ಪಟ್ಟೋಲೆ ಪಳಮೆ³ರ ಎಲ್ಲಾ ಅಧ್ಯಾಯತ್‌ಲೂ ಕೊಡವುನ ಪೊಮ್ಮಾಲೆ ಕೊಡವುಲ್, ಕೊಡವುಡ ಪೊಮ್ಮಾಲೆ ಕೊಡವಾಪ.........ಂದೆಣಿತ್ತೇ ಪಾಡುವ.

ಪೊಮ್ಮಾಲೆ ಕೊಡವ ನಾಡ್‌ಲ್ ಮಾತ್ರ ಅಲ್ಲ, ಭಾರತ ದೇಶತ್‌ರ ಎದೇ ನಂಬಿಕೆ, ಪುರಾಣ ಎಡ್‌ತಂಡಕಲೂ ಅದ್‌ಲೋರ್ ವೈಜ್ಞಾನಿಕತೆ ಇಂಜಿತೇ ಇಪ್ಪಾಂದ್ ಎಣ್ಣುವಾಂಗ್ ಸುಮಾರ್ ನಿದರ್ಶನ ಉಂಡ್. ಗುಯ್ಯತಿಂಜ ಕಾವೇರಿ ದಂಡ್ ವಡೆಯಾಯಿತೊಕ್ಕ್‌ಚೇಂದ್ ಕೊಡವಡ 'ಪಳಮೆ' ಪಾಡುವ. ಪಂಡ್ ಕೇಕ್–ಪಡ್‌ಂಇಾರ್ ದಂಡ್ ದಿಕ್ಕ್‌ಕೂ ಗುಯ್ಯತಿಂಜ ದಂಡ್ ವಡೆಯಾಯಿತ್ ಕಾವೇರಿ, ವೋಕ್ಕುವಯಿಂಜತ್‌ಂದ್ ಭೂವೈಜ್ಞಾನಿಕ ಸಂಶೋದನೆ ಎಣ್ಣುವ.

ಅನ್ನನೇ ಸಹ್ಯಾ ಕುಂದ್‌ರ ಕರೆ ಪರಶುರಾಮ ಸೃಷ್ಠಿ ಮಾಡ್‌ನದ್‌ಂದ್ ಎಣ್ಣುವ. ಆಂಡ ಕತೆ ಇನ್ನನೆ ಉಂಡ್. ಅಯೋದ್ಯತ್‌ರ ಸಗರ ಎಣ್ಣುವ ರಾಜಂಡ ಅಶ್ವಮೇದ ಯಾಗತ್‌ರ ಕುದುರೆನ ದೇವ ಕಟ್ಟಪೋಯಿರುವ. ಇದರ್‌ಂಜ ಸಗರಂಡ ಮಕ್ಕ ಕುದುರೆನ ತೇಡಿತ್ ಎಲ್ಲಿಯೂ ಕ್‌ಟ್ಟತಾಪಕ, ಭೂಮಿನ ಕಳ್‌ಪಕ್ ಸುರು ಮಾಡುವ. ಇನುಂಡ್ ಸಮುದ್ರತ್‌ರ ನೀರ್ ಭೂಮಿರೊಳ್‌ಕ್ ನುಗ್ಗ್‌ಚಿ. ಸಹ್ಯಾದ್ರಿರ ನೆಲೆಲ್ ತಪಸ್ಸ್‌ಮಾಡಿಯಂಡಿಂಜ ಎಲ್ಲಾ ಋಷಿ ಮುನಿಯಡ ನೆಲೆ ಸಮುದ್ರತ್‌ರ ಪಾಲಾಚಿ. ಅಕ್ಕ ಋಷಿ ಮುನಿಯ ನಂಗ ಇಂಜ ಜಾಗತ್‌ನ ಸಮುದ್ರರಾಜಂಡ ಕೈಲ್ ಬುಡ್‌ತಿತರೊಂಡೂಂದ್ ಪರಶುರಾಮನ ಕೇಟವ. ಅದೇ ಪ್ರಕಾರ ಪರಶುರಾಮ ಸಮುದ್ರ ರಾಜನ, ತಾಂಡ ಕೈಲಿಂಜ ಕೊಡಲಿನ ತಿರ್‌ಕಿ ಕನ್‌ಚಕ ಕೊಡಲಿ ಎತ್ತುವಲ್ಲಿಕತ್ತಣೆವುಳ್ಳ ಜಾಗತ್‌ನ ಬುಟ್ಟ್‌ತರಂಡೂಂದ್ ಕೇಟವ. ಪರಶುರಾಮ ಅದೇ ಪ್ರಕಾರ ತಾಂಡ ಕೈಲಿಂಜ ಕೊಡಲಿನ ಕನಿಪ. ಸಮುದ್ರವೂ ಪರಶುರಾಮಂಡ ಕೊಡಲಿ ಎತ್ತ್‌ನಲ್ಲಿಂಜ ಬೆಮ್ಮರ್‌ಂಜತ್‌ಂದ್ ಎಣ್ಣುವಚ್ ಪುರಾಣ ಕಥೆ. ಸುಮಾರ್ ಪತ್ತ್

ಲಕ್ಷ ಕಾಲಕ್ ಬಯ್ಯ ಸಮುದ್ರ ಪಿಂಞ ಸಹ್ಯಾದ್ರಿ ಕುಂದ್‌ರ ನೆಲೆ ಓರೇ ಸಮ ಜಾಗತ್ ಇಂಜತ್‌ಂದೂ, ಪಡ್‌ಂಞಾರ್ ಕುಂದ್‌ರ ನೆಲೆ ಪಿಂಞ ಸಮುದ್ರತ್‌ರ ನಡುಲ್ ಆನ ಭೂವೈಜ್ಞಾನಿಕ ವ್ಯತ್ಯಾಸತ್‌ನುಂಡ್, ಸಹ್ಯಾ ಕುಂದ್ ಇಂದ್ ನೆಲೆ ನಿಂದಿಯೇಂದೂ, ಭೂವೈಜ್ಞಾನಿಕ ಸಂಶೋದನೆ ಎಣ್ಣುವ. ಆ ವ್ಯತ್ಯಾಸ ಆನ ಕಾಲ ಸೆರಿಯಾಯಿತ್ ಅರ್‌ಂಜತಿಲ್ಲೆಂಗಿಯೂ ಸಹ್ಯಾ ಕುಂದ್‌ಕ್ ಬೀಜುವ ನೈರುತ್ಯ ಬೀರಂಗಾತ್‌ರ ಕಾಲ ಮೂಂದ್ ಕೋಟಿ ಕಾಲಾಂದ್ ಭೂವಿಜ್ಞಾನಿಯ ಅಭಿಪ್ರಾಯ ಪಡುವ.

ಭಾರತ ದೇಶತ್‌ರ ಎಚ್ಚಕೋ ಬುಡಕಟ್ಟ್ ಜನಾಂಗತ್‌ರನಕೆ ಕೊಡವಳೂ ಓರ್ ಸಾಧಾರಣ ಬುಡಕಟ್ಟ್ ಜನಾಂಗವೇ. ರಾಮಾಯಣತ್ ವಾಲ್ಮೀಕಿ ಮಹರ್ಷಿ ಏಳ್ ಕುಂದ್‌ರ ಕೂಟ್‌ಲ್ ಸಹ್ಯಾದ್ರಿನ ವಿಚಿತ್ರಂದೆಣ್ಣುವನೆಕೆ, ವಿಚಿತ್ರ ಶಿಖರತ್‌ರ ಕೊಡಿಲ್ ಬಾಳಿ ಬದ್‌ಕಿಯಂಡುಳ್ಳ ಕ್ಷಾತ್ರಂಗ, ಪಡೆಬೀರಂಗ, ಪಡೆವೀರಂಗಳನೆಕೆ – ನೋಟುವಯಿಂಡ ಕಣ್ಣ್‌ಕ್ಕ್ ಗಾಂಭಿರ್ಯತ್ ಕಾಂಬ ಕೊಡವ – ಕೊಡವತಿಯಡ, ಉಡುಪು ಸತ ವಿಶ್ವತ್ ಎಲ್ಲಿಯೂ ಕಾಂಬಕ್ಕ್ ಕ್‌ಟ್ಟತ, ತಿರ್‌ಂಜಿ ಕಾಂಬಂತ ಉಡುಪು. ಕೂಟ್‌ಕ್ ಕೊಡವಡ ಜಾನಪದ ಪಾಟ್, ಆಟ್, ಆಜರ, ವಿಚಾರವೂ ಬೋರೆ ಎಲ್ಲಾ ಬುಡಕಟ್ಟ್ ಜನಾಂಗಕ್ಕ್‌ಂಜ ಬೋರೆ ತರ ಉಂಡ್‌ಂದ್ ಎಣ್ಣುವದ್ ಇಕ್ಕಲೂ ನಂಗ ತಿರ್‌ಂಜಿ ಕಾಂಗೊಲು. "ಪಳಮೆ" ಎಣ್ಣುವ ಕೊಡವಡ ಜಾನಪದ ಪಾಟ್‌ಲುಳ್ಳ ಕಲೆ–ಸ್ವರ–ರಾಗ, ತಾಳತಪ್ಪತೆ ಚಂಬುಲ ಚಂವುಂತ್, ನೀರ್ ಪರ್‌ಂಜನಕೆ ಪಾಡಿಚಿಟ್ಟಂಡ್ ಪೋಪ. ಆ ಸಾಹಿತ್ಯ – ತಂಗಡ ಮಿಂಞಕುಳ್ಳ ಪೀಳಿಗೆಕ್, ಸಾಲ್ ಸಂತಾನಕುಳ್ಳ ತತ್ವಶಾಸ್ತ್ರ, ನೀತಿತತ್ವ, ಸಹ್ಯಾ ಕುಂದ್‌ರನಕ್ಕೇ ವಿಶ್ವತೆಲ್ಲಿಯೂ ಕಾಂಬಕ್, ಕೇಪಕ್ ಕ್‌ಟ್ಟತಂತ ಸುಸ್ವರ– ಕೇಪಕ್ ಸಾಮವೇದತ್ತ್‌ರನೆಕೆ.

ಕೊಡವಡ ಜನಪದ ಆಟ್‌ಲೂ, ಪಾಕಡ ಕಡ್‌ಂದ– ಕಾಲತ್, ಲೋಪಾಮುದ್ರೆಯಾಯಿ ಮೋಹಿನಿಕ್ ತೋಣೆಯಾಯಿತ್, ದೇವತೆಯಕ್ ಅಮೃತ ಕ್‌ಟ್ಟುವನೆಕೆ ಮಾಡ್ವಕ ಆಡ್‌ನ ಆಟೋ, ಅಲ್ಲೇಂಗಿ ಸಹ್ಯ ಕುಂದ್‌ಲ್ ಮೋಹಿನಿ, ಬಸ್ಮಾಸುರನ ಕೊಲ್ಲುವಕ್ ಆಡ್‌ನ ಆಟೋಂದೆಣ್ಣುವನಕೆ ಪೊಣ್ಣಾಳ್ ಉಮ್ಮತ್ತಾಟ್, ಆಣಾಳ್ ಚೌರಿಆಟ್, ಬೊಳ್‌ಕಾಟ್, ಪೀಲಿಯಾಟ್, ಕೊಂಬಾಟ್. ಇನ್ನನೆ ತರಾವರಿ ವಿಶೇಷ ಪಟ್ಟ ಆಟ್. ಆಣಾಳ್ ಕುಪ್ಯ – ಚಾಲೆ ಪೀಚೆಕತ್ತಿ ಇಟ್ಟಂಡ್, ಒಡಿಕತ್ತಿ ನೀಟಿ ಪುಡ್‌ಚಂಡ್, ಚೌರಿಬೀಜಿಯಂಡ್ ಆಡುವ ತರಾವರಿ ಆಟ್‌ರ ಬೋಜವೇ ಚಾಯಿ, ನೋಟುವಯಿಂಡ ಕಣ್ಣ್‌ಕ್. ಒಡಿ ಕತ್ತಿನ ಕೊಡವ ಚೂರಿಯ ಕತ್ತೀಂದ್ ಎಣ್ಣುವ. ನಮ್ಮೆ–ನಾಳ್‌ಲೂ ಮಂಗಲಕಾರಂಡ ಉಡುಪುಲ್, ಮಂಗಲತ್ ಬಾಳೆ

ಬೇಂಗುವಕ ಒಡಿ ಕತ್ತಿನೇ ಬಳಸುವ. ಕಾರಣ ತೆರೆ ಕೆಟ್ಟ್‌ನಲ್ಲಿ ಕಾರಣವೊ ಆಡ್‌ವದೂ ಒಡಿಕತ್ತಿ ಬೀಜಿಯಂಡೇ–ಪಡೆಕ್ ಮೊರ್‌ಟ ಪಡೆಬೀರಂಡನಕೆ ಪರ್ಯಮುಡ್‌ಚಂಡ್! "ಕುಂದತ್ ಬೊಟ್ಟ್‌ಲ್‌ನೇಂದ ಕುದುರೆ ಪಾರಣೆಮಾನಿಲ್ ಅಳ್‌ಂಜ ಕುದುರೇ"ಂದೋರ್ ಚೊಲ್ಲುಂಡ್ ಕೊಡವಡಲ್ಲಿ. ತೊಲಿಯಾರ್ ಚಂಗ್ರಾಂದಿಯಂದ್ ಕುಂದತ್ ಬೊಟ್ಟ್‌ಲ್ ಆದ್ಯ ಬೋಡ್ ನಮ್ಮೆಯಾಚೆಂಗಿ, ಕಾದ್ಯಾರ್‌ಲ್ ಪಾರಣೆಮಾನಿಲ್ ಆಖೀರಿ ಬೋಡ್‌ನಮ್ಮೆ. ಮೃಗೇಶ್ವರ ರಾಕ್ರಾಸಿ "ಅಗ್ಗ್‌ನಿರ ಕಯ್ಯಾಂಡೂಂದ್" ವರ ಕೇಟಪೋಲೆ ಕಮ್ಮರ್‌ಟ್ ಮಲೆಲ್ ಇಂಜ ಈಶ್ವರ ವರ ಕೊಡ್‌ತತ್ – ಮೃಗೇಶ್ವರ ರಾಕ್ರಾಸಿಕ್. "ಬೋಡ್‌ನದ್ ತಂದದ್ ನಾನೆನ್ನನರಿಯಡ್? ಆನಗೊಂಡ್ ದೇವಯ್ಯ ಉಯಿ ನಿಂಗಡ ಮಂಡೆಕ್ ಕೈಬೆಚ್ಚಿನೋಟುವಿಂದೆಣ್ಣನೆ, ಬೊತ್ತ್‌ನ ಈಶ್ವರ ಕತ್ತೆರ ತೋಲ್‌ಟ್ಟಂಡ್ ಮರತ್‌ರ ಪೋಟೆಲ್ ಒಳಿಪ. ಇದ್‌ರ್‌ಂಜ ಮಾವಿಷ್ಣು ಮೋಹಿನಿಯಾಯಿ ರೂಪೆಡ್‌ತಿತ್, ಊರ್‌ಕಾರಡ ಸಾಯತ್ ಮೃಗೇಶ್ವರ ರಾಕ್ರಾಸಿನ ಮರ್‌ಳ್ ಮಾಡಿತ್. "ಏಳ್ ತರ ಆಟ್, ನಾಡ ಕೂಡ ಆಡ್‌ಚೆಂಗಿ ನಿನ್ನ ನಾನ್ ಕೂಡುವಿ"ಂದೆಣ್ಣಿತ್, ಏಳ್‌ತರ ಆಟೆಲ್ಲಾ ಅಟೋಪ್ಪಿಚಿ ಆಡಣೆ, ಮೋಹಿನಿ ಮಂಡೆಕೇಡ ಕೈ ಬೆಚ್ಚ. ಅದ್ ಕಂಡ ರಾಕ್ರಾಸಿ ತಾಂಡ ಕೈ ಎಡ್‌ತಿತ್ತ್ ತಾಂಡ ಮಂಡೆ ಮೀದಲ್ ಆಟೊಪ್ಪ್‌ಚಿ ಬೆಚ್ಚತ್. ಮೃಗೇಶ್ವರ ಪೋಯಿತ್ ಬಸ್ಮಾಸುರನಾಚಿ ಎಣ್ಣಕ, ಮೋಹಿನಿಕ್ ಮರ್‌ಳಾಯಿ ತಾನೇ ವರಪಡ್‌ಂದ ತಾಂಡ ಅಗ್ನಿ ಕೈನ ತಾಂಡ ಮಂಡೆಕೇ ಬೆಚ್ಚಂಡ್, ಮೃಗೇಶ್ವರ ತಿತ್ತ್‌ಲ್ ಬಸ್ಮ ಆಚೇಂದ್ ಎಣ್ಣುವ ಪುರಾಣ ಕಥೆ ಸಹ್ಯ ಕುಂದ್‌ಲ್ ನಡ್‌ಂದಾಂಗ್ ಸಾಕ್ಷಿಂದೆಣ್ಣುವನೆಕೆ ಪಾರಣೆಮಾನಿಲ್ ಇಂದೂ ಬೋಡ್‌ನಮ್ಮೆ ನಡ್‌ಪ. ಮಾವಿಷ್ಣು ಮೋಹಿನಿಯಾಯಿ ರೂಪ ಮಾತಿಯಂಡ್ ಸಹ್ಯಾ ಕುಂದ್‌ಲೇ ಬಸ್ಮಾಸುರನ ಕೊಂದಿಯೇಂದ್ ಪುರಾಣ ಎಣ್ಣುವ.

ದಕ್ಷಪುತ್ರಿ ದಾಕ್ಷಾಯಿಣಿ ದಕ್ಷಯಜ್ಞತ್ ತಿತ್ತ್‌ಕ್ ಬುದ್ದಿತ್ ತಾಂಡ ದಾಕ್ಷಾಯಿಣಿ ಪೆದತ್‌ರ ತಡಿನ ಬುಟ್ಟಿತ್ ಶಿವನ ಕೂಡುವಕ್, ಸಹ್ಯ ಕುಂದ್‌ಕ್ ಬಂದಿತ್, ಕಾವೇರಿ ತಾಯಿನ ದಾಕ್ಷಾಯಿಣಿ ಕಂಡಿತ್, ತಪಸ್ಸ್ ಮಾಡ್ಪಕ್ ಸರಿಯಾನ ಜಾಗ ಏದ್‌ಂದ್ ಕೇಟತ್‌ಂದೂ, ಸಹ್ಯಾದ್ರಿರ ಪಡ್‌ಂಞಾರ್‌ಲ್ ಕೇರಳತ 'ಕ್ಷಿಪ್ರಸಿದ್ಧಕ್ಷೇತ್ರ'ತ್‌ಲ್ ಕಾವೇರಿ ತಾಯಿ ತಪಸ್ಸ್ ಮಾಡ್ಪಕ್ ಜಾಗ ಕಾಟ್‌ಚೀಂದೂ. ತಾಂಗ್ ನಲ್ಲ ಬೋಜಕಾರ ತಡಿ ಬೋಂಡೂಂದ್ ದೇವಳ ದಾಕ್ಷಾಯಿಣಿ ಕೇಕಣೆ, ಬೇರ್‌ಚಿಟ್ಟಿ ಹರಿ–ಬ್ರಹ್ಮಂಗ ದಾಕ್ಷಾಯಿಣಿ ಪೆದತ್‌ರ ತಡಿನ ಇಲ್ಲಿ ನೀಕಿತ್ ಭಗವತೀಂದ್ ಪೆದ ಎಡ್‌ತ್ ಇಲ್ಲಿ ನೀನೆಲೆ ನಿಲ್ಲ್‌ಂದೆಣ್ಣಾಂಗ್ ಒತ್ತ್ ಕೊಡ್‌ಪನಕೆ, ಕೊಡವ ತಂಗಡ ಪಟ್ಟೋಲೆ ಪಳಮೆಲೂ, ದಾಕ್ಷಾಯಿಣಿ ಅಕ್ಕರೆ ಕೇರಳತಿಂಜ, ಇಕ್ಕರೆ ಪೊಮ್ಮಾಲೆ ಕೊಡವುಲ್

ಬಂದಿತ್ ನೆಲೆ ನಿಂದಾಂಗ್ ಸಾಕ್ಷಿಂದೆಣ್ಣುವನಕೆ, ಪೊಮ್ಮಾಲೆ ಪೊರಮಲೆ ಭಗವತಿಕ್, "ಕೇರಳ ಕಣ್ಣೂರ್ ಕಡ ಕರೆ ಮುಕ್ಕುವಡ ಕೇರಿಲ್ ಮೀನಾಥ ಪೊರ್‌ಂದ್‌ಲೆ, ತೀಯಮ್ಮಡ ಮಕ್ಕಡ ಕಳ್ಳನಾಥ ಪೊರ್‌ಂದ್‌ಲೆ ....." ಅಲ್ಲಿಂಜ ಪೊರಟಿತ್ ಪಾಡಿತೊರ ಕಂಡಿಕಾಲೆ ಪೊಮ್ಮಾಲೆ ಕೊಡವುಕ್ ಮುಟ್ಟೂರಿ ಮರ್‌ಂಜತ್‌ಂದೂ, ಎಟ್ಟ್‌ಕೇರಿ ನಾಡ್‌ಲ್ ಮೂಲ ಕನ್ನಿಕಾವೇರಿನ ಕೇಟಿತ್ ಭಗವತಿ ನೆಲೆ ನಿಂದತ್ತ್‌ಂದ್ ಪಾಡುವ. ಅದಾನದು ದಾಕ್ಷಾಯಿಣಿ– ಪಾರ್ವತೀದೇವಿ, ಹಿಮವಂತಂಡ ಮೋವಳಾಯಿತ್ ಪುಟ್ಟಿತ್ತ್, ಶಿವನ ಕೂಡ್‌ಚೇಂದ್ ಪುರಾಣ ಎಣ್ಣುವ. ಪೊಮ್ಮಾಲೆ ಕೊಡವುರ ಪ್ರತಿಯೋರ್ ನಾಡ್‌ಲೂ ಭಗವತಿ ನೆಲೆ ಎಡ್‌ತ ತಿರಿಕೆ ಇಕ್ಕಲೂ ಉಳ್ಳದ್ ಎಲ್ಲಾರ್‌ಕೂ ಅರ್‌ಂಜ ವಿಷಯ. ಪೊಮ್ಮಾಲೆ ಕೊಡವುಲ್ ಸಾರ್ತಾವು ತಿರಿಕೆ ಉಳ್ಳಲ್ಲಿ ಭಗವತಿರ ನೆಲೆ ಉಂಡ್. ದಕ್ಷಯಜ್ಞ ಮಾಡ್‌ನದೂ ಬ್ರಹ್ಮಗಿರಿಕುಂದ್ ಸಾಲ್‌ಲೆ....! ಪಂಡ್ ಕೊಡವು ನಾಡಾಯಿತಿಂಜ ಕೊಟ್ಟಿಯೂರ್ – ಕಾಚಿಮಲೆಲ್, ದಕ್ಷಯಜ್ಞಕ್ ಬೋಂಡ್‌ಚಾನ ಪಾಲ್ ಕಾಚ್‌ನ ಕಾಚಿಮಲೆಲ್, ಪಾಲ್ ಕಾಚುವಕ್ ಮೂಂದ್ ಕಲ್ಲ್‌ರ ಒಲೆ ಕೂಟ್‌ನದ್ ದಕ್ಷ ಯಜ್ಞ ನಡ್‌ಂದಾಂಗ್ ಸಾಕ್ಷಿಂದೆಣ್ಣುವನಕೆ ಇಂದೂ ನಂಗಡ ಕಣ್ಣ್‌ಲ್ ಕಾಂಬಳ ಸತ್ಯ. ಕೆಳವ ಅಲ್ಲೇಂಗಿ ನಂದಿ ಶಿವಂಡ ವಾಹನವಾನ ಗೂಳಿ ಬಂದ್ ನಿಂದ ಜಾಗ, ಇದೆಲ್ಲಾ ಪಂಡೋರ್ ಸತ್ಯ ಕಾಲ ಇಂಜತ್, ದಕ್ಷಂಡ ಅಹಂನ ದೇವ ಅಡ್‌ಕ್‌ನ ದಕ್ಷಯಜ್ಞ ನಡ್‌ಂದದ್ ಬರೀ ಪುರಾಣ ಅಲ್ಲ, ಇತಿಹಾಸ ಎಣ್ಣುವಾಂಗ್ ಸಾಕ್ಷಿಯಾಯಿತುಂಡ್.

ಕೊಡವಡ ಆದಿ ಪುರುಷಂಡ ಕೈಮಡ ಇಂದೆಕೂ ಬೈತೂರ್‌ಲೇ. ಪೌರಾಣಿಕವಾಯಿತ್ ಬೈತೂರ್ ಮದ್ಯಪಾಂಡವ ಅರ್ಜುನಂಗ್ ಶಿವ ಬೋಡ್ ಕಳಿ ಇಟ್ಟಂಡ್ ಅರ್ಜುನಂಗ್ ದರ್ಶನ ಕೊಡ್‌ತ ಕ್ಷೇತ್ರ ಪಿಂಞ ಅರ್ಜುನಂಡ ಬೆನ್ನ್‌ನ ಪಾರ್ವತಿ ದೇವಿ ನೋಟ್‌ನ ಜಾಗ. ಈ ಎಲ್ಲಾ ಪುರಾಣ ಕತೆಲ್ ಇತಿಹಾಸ ಉಂಡ್‌ಂದೂ, ಕೊಡವ ಕಾವೇರಿ ಪುಟ್ಟುವಾಂಗ್ ಮುಪ್ಪಡೇ ಕೊಡವು ನಾಡ್‌ಲ್ ಉಳ್ಳವೂಂದ್ ಎಣ್ಣೊಲು. ಅಗಸ್ತ್ಯ ಮಾಮುನಿರ ಮೇಲೆ ಕಾವೇರಿ ಚೆಡಿಂಜಂಡ್ ಲೋಕ ಕಲ್ಯಾಣಕ್ಕಾಯಿತ್ ತಲಕಾವೇರಿಂಜ ತೀರ್ಥರೂಪಿಣಿಯಾಯಿತ್ ತುಳ್ಳಿಯಂಡೊಕ್ಕಿ ಬಪ್ಪಾನ, ಪಾರ್ವತಿ ದೇವಿರ ಸ್ವಪ್ನದರ್ಶನತ್ ಅರ್‌ಂಜ ಕೊಡವ, ವಲಮುರಿ– ಬಲಮುರಿಲ್ ಬಂದ್ ನಿಂದಿತ್ ಲೋಕ ಕಲ್ಯಾಣಕ್ಕಾಯಿತ್ ಪೊರಟ್ ನಿಂದ ಕಾವೇರಿ ಮಾತೆನ ಬಲಮುರಿಲ್ ಕೊಡವ ತಕ್ಕಾರ ಮಾಡಿತಯಿಚತ್‌ಂದ್ ಸ್ಕಂದ ಪುರಾಣ ಎಣ್ಣುವ. ಅನ್ನನೆ ಆನಕ ಕಾವೇರಿ ತಾಯಿ ನೀರಾಯಿತೊಕ್ಕುವಾಂಗ್ ಮುಪ್ಪಡೇ ಪೊಮ್ಮಾಲೆ ಕೊಡವು ನಾಡ್‌ಲ್ ಕೊಡವ ಇಂಜತ್ತ್‌ಂದ್ ಎಣ್ಣೊಲು.

ಈ ಕಥೆಕ್ ಕೊಳ್‌ಕ್ ಕೊಟ್‌ನನಕೆ ಕೊಡವ ತಂಗಡ ಪಳಮೆಲೂ ಪಾಡುವ. ಕಾವೇರಿ ಪತ್ತ್ ಲಕ್ಷ ಕಾಲಕ್ಕೊ ಮುಪ್ಪಡೇ ಇಂಜತ್ತ್ಂಡ್ ಭೂ ವೈಜ್ಞಾನಿಕ ಸಂಶೋದನೆ ಎಣ್ಣುವ. ಪಟ್ಟಮ ಎಳ್ದ್‌ನ ಸ್ಕಂದ ಪುರಾಣವೂ ಈಂಗ್ ಒತ್ತ್ ಕೊಡ್‌ಪನಕೆ ಕಾವೇರಿ ತಾಯಿ ಪುಟ್ಟುವಾಂಗ್ ಮುಪ್ಪಡೇ ಕೊಡವ– ಪೊಮ್ಮಾಲೆ ಕೊಡವು ಲುಂಡ್‌ಂದ್ ಎಣ್ಣುವ.

ಪದ್‌ನೆಟ್ಟ್ ಸಿದ್ಧಂಗಡಾತ್ ಒಬ್ಬನಾನ, ಪದ್‌ನೆಟ್ಟ್ ಶಿಷ್ಯಂಗಡ ಕೂಟ್ ಇಂಜ ಮಿತ್ರಾವರುಣಂಗ್ ಪುಟ್ಟ್‌ನ ಅಗಸ್ತ್ಯ ಮಹರ್ಷಿಕ್ ಮಹತ್ವ ಕೊಡ್‌ತದ್ ಕೊಡವ ಪಳಮೆರ ಕಾವೇರಿ ಪುರಾಣತ್ ಕಾಂಗೊಲು. ಇದ್ ನೋಟ್‌ನಕ ಅಗಸ್ತ್ಯಮುನಿ ಸಾಮಾನ್ಯ ಋಷಿಯಲ್ಲಾ, ಸಿದ್ಧಪುರುಷಂದೆಣ್ಣುವದ್ ಕೊಡವಕ್ ಅರ್‌ಂಜಿತಿಂಜತ್ತ್ಂಡ್ ಎಣ್ಣೊಲು. ಅಗಸ್ತ್ಯಶಾಪಕ್ ಗುಯ್ಯತ್ ಕಾತಡ್‌ಚಕ ಸದ್ದ್ ಮಾಡತೆ ಇಂದೂ ಪುರಾಣ ಕಥೆಕ್ ಸಾಕ್ಷಿಯಾನ ಚಿತ್ತಾಲ್‌ಡ ಮರ, ಅಗಸ್ತ್ಯಂಡ ಸಾಮರ್ಥ್ಯಕೆಕ್ ಸಾಕ್ಷಿಯಾಯಿತುಳ್ಳದ್‌ಂದ್ ಎಣ್ಣೊಲು. ಸಹ್ಯಮಲಕ ಕ್ಷೇತ್ರತಿಂಜ ಬ್ರಹ್ಮಕುಂಡಿಕೆಕಾಲೆ ಕಾವೇರಿ ನೀರಾಯಿತೊಕ್ಕ್‌ಚೇಂಗಿಯೂ, ಗುಯ್ಯತ್ ತಕ್ಕ್ ಬಾಕ್ ತೀತಿತ್ ಕಾವೇರಿತಾಯಿ ದಂಡ್ ತಡಿಯಾಯಿ, ದಂಡ್ ವಡೆಯಾಯಿ, ಗುಯ್ಯತಿಂಜ ಅಗಸ್ತ್ಯಂಗ್ ಪೊಣ್ಣಾಯಿತೊಬ್ಬ (ವಡಿಯಂಡ ಮೇಲೆ ಎಚ್ಚಕೇ ಚಿಡಿ ಉಂಡೇಗಿಯೂ ವಡಿಯ ಪೊಣ್ಣ್‌ರ ಏಳ್. ಜನ್ಮತ್‌ರ ಸಮ್ಮಂದ, ಆ ಪ್ರೀತಿ– ಶಾಶ್ವತವಾನದ್ ಎಣ್ಣುವ ನೀತಿ ಇಲ್ಲಿಯುಂಡ್). ಲೋಕ ಉಪಕಾರಕಾಯಿತ್ ಕಾವೇರಿಯಾಯಿ, ಪೊರಡುವಕ ಅಗಸ್ತ್ಯ ಮಹರ್ಷಿಯೇ ಕಾವೇರಿಕ್ ಪೋಪ ಬಟ್ಟೆ ಎಣ್ಣಿಕೊಡ್‌ಪೊ! ಕಾಲೋರಾಂಡೆ ಕೋರಮ್ಮ ಕಾವೇರಿ ಕುಂಡಿಕೆಲ್ ತೀರ್ಥಪುಟ್ಟುವನಕೆ ವರತಾಂದ್ ಅಗಸ್ತ್ಯ ಮಹರ್ಷಿ ಬ್ರಹ್ಮನ ಬೋಡಿಯವೂ! ಬ್ರಹ್ಮವರ ಕೆಟ್ಟ್‌ನ ಪಿಂಞ ಬ್ರಹ್ಮಕುಂಡಿಕೆಕ್ ಸ್ವರ್ಗ, ಮರ್ತ್ಯ, ಪಾತಾಳ ಲೋಕತುಳ್ಳ ಏಳ್‌ಕೋಟಿ ತೀರ್ಥತ್‌ನೆಲ್ಲಾ ಕಾಕಿತ್ ತುಲಾ ತೂರಿಯ ರಾಶಿಕೆತ್ತಕ ಈ ಕುಂಡಿಕೆರೊಳ್‌ಲಿಂಜಿತ್ ಉಕ್ಕಿ ಉಕ್ಕಿ ಒಕ್ಕಂಡೂಂದ್ ಎಲ್ಲಾ ತೀರ್ಥಕೂ ಅಪ್ಪಣೆ ಮಾಡ್‌ಚಿ ಅಗಸ್ತ್ಯಮಹರ್ಷಿಂದ್ ಕೊಡವ ಪಾಡುವ ಪಟ್ಟೋಲೆ ಪಳಮೆಲ್! ಅಪ್ಪಣೆ ಮಾಡ್‌ವವು ಎಕ್ಕಲೂ ಪೆರಿಯವು – ಎಲ್ಲಾ ತೀರ್ಥಕ್ಕೊ ಅಪ್ಪಣೆ ಮಾಡ್ ಚೇಂದ್ ಕೊಡವ ಪಳಮೆಲ್ ಪಾಡೊಂಡುವೇಂಗಿ ಅಗಸ್ತ್ಯ ಋಷಿರ ಸಾಮರ್ಥ್ಯಕೆ ಎಚ್ಚಕಿಂಜಿತಿಕ್ಕೊಂದ್ ನಂಗ ಇಲ್ಲಿ ಅರಿಯೊಲು. ಅಗಸ್ತ್ಯ ಋಷಿ ಮಿತ್ರಾವರುಣಂಡ ಮೋವೊಂದ್ ಎಣ್ಣುವ. ಎಣ್ಣಕ ಅಗ್ನಿ ಮಳೆರ ಮೋಂವೋಂದ್ ಅರ್ಥ. ಅಗಸ್ತ್ಯನ ಕುಂಭ ಮುನೀಂದೂ ಕಾಕುವ. ವೇದ ಕಾಲತ್ ಅಗ್ನಿಯೇ ಆದ್ಯ ದೇವ. ಕವೇರ– ಕಾವೇರಿಂದೆಣ್ಣಕ ಗ್ರೀಕ್ ಭಾಷೆಲ್ ಅಗ್ನಿಂದೇ ಅರ್ಥ. ಅಗ್ನಿ ಪಿಂಞ ವಾಯುಕ್

ಇಂದ್ರ ಶಾಪ ಇಟ್ಟಿತ್ತ್ಂದೂ, ಆ ಶಾಪಗೊಂಡ್ ಸಾಕ್ಷಾತ್ ಅಗ್ನಿಯೇ ಅಗಸ್ತ್ಯ ಮಾಮುನಿಯಾಯಿ ಭೂಮಿಲ್ ಪೊರ್'ಂದತ್'ಂದೂ, ಇಂದ್ರ ಶಾಪತ್'ನುಂಡ್ ಸಮುದ್ರತ್'ರ ನೀರ್'ನ ಅಗಸ್ತ್ಯ ಊತಿ ಕುಡ್'ಚತ್'ಂದೂ ಪುರಾಣ ಕಥೆ ಎಣ್ಣುವ. ಇಲ್ಲಿ ಅಗ್ನಿ, ವರುಣಂಡ ಮೊಂಪೂನಾಯಿತ್ ಪುಟ್ಟಿಯೆ! ಅಗ್ನಿ – ನೀರ್'ಲ್ ಉಂಡ್'ಂದ್ ಎಣ್ಣುವಾಂಗ್ ವರ್'ಪ್'ರ ಕಥೆ ಇದ್'ಂದ್ ಎಣ್ಣೊಲು. ಇಂದ್ ಕಾವೇರಿ ನೀರ್'ಲ್ ಅಗ್ನಿ (ವಿದ್ಯುತ್) ಸೃಷ್ಟಿಮಾಡಿಯಂಡುಳ್ಳದ್ ಎಲ್ಲಾರ್'ಕೂ ಅರ್'ಂಜ ವಿಷಯ. ನೀರ್'ಲ್ ಅಗ್ನಿ ಉಂಡ್'ಂದ್ ಎಣ್ಣುವಾಂಗ್ ಇದ್'ಂಜಂಜ ಸಾಕ್ಷಿ ಎಂತ ಬೋಂಡಿಯೆ. ಅನ್ನನೆ ಮಳೆ ಪೊಯ್ಯುವಕ ಮಳೆರ ರೂಪತ್ ನೀರ್, ಅಗ್'ನಿರ ರೂಪತ್ ತೆಡ್-ಮಿನ್ನಲ್, ಮಳೆಪೊಯ್ಯೊಕ ವಾಯು ಕಾತಡ್'ಚಂಡಿಪ್ಪ, ಭೂಮಿ – ಆಕಾಶ ಒಂದಾಯಿ ಮಳೆ ಪೊಯ್ಯುವ ಆ ಸಮಯತ್ ನಂಗಕ್ ಪಂಚಮಹಾಭೂತತ್'ರ ದರ್ಶನ ಒಮ್ಮಕೇ– ಒರೇ ಸಮಯತ್ ಆಪ. ಪ್ರಕೃತಿರ ಈ ರೌದ್ರ ರೂಪತ್'ನ ಮನೆರ ಪೊರ್'ಮೆ ನಿಂದ್ ನೋಟುವವಂಗೂ ಬೋಂಡು ಕೈಪೆ! ಇನ್ನನೆ ಪುರಾಣತುಳ್ಳ ವೈಜ್ಞಾನಿಕತೆರ ಗೂಡಾರ್ಥ ನಂಗಕ್ ಅರಿಯತೆ, ಪರದೇಶಕಾರ ಬಂದಿತ್ತ್, ನಂಗಡದೇ ಸಂಸ್ಕೃತ ಶಬ್ಧ ಮಿಥ್ಯತ್'ನ ಎಡ್'ತಂಡ್, ಇಂಗ್ಲೀಷ್ ಪಾಜೆಲ್ ಅಯಿಂಡ ವಾಕ್ಸಂಪ್ರದಾಯತ್ ಒತ್ತನಕೆ Indian Myth –ಇಂಡಿಯನ್ ಮೈಥ್'ಂದ್– ನಂಗಳ ಪೊಟ್ಟಾಕ್'ಚಿ. ಆಚೇಂಗಿ ಪುರಾಣಕಥೆಯೇದೂ 'ಮಿಥ್ಯ ಕಥೆ' ಅಲ್ಲ– ಎಲ್ಲಾತೂ ವೈಜ್ಞಾನಿಕಥೆ ಉಂಡ್. ಚೆರಿಯೋರ್ ಕಣ್ಣ್'ಕ್ ಕಾಂಗತ ಅಣುಂಜ ಬಲ್ಯ ಸೂರ್ಯಮಂಡಲಕತ್ತಣೆ ಒಂದಂಗೊಂದ್ ಸಮ್ಮಂದ ಉಂಡ್. "ಯಥಾ ಪಿಂಡ ತಥಾ ಬ್ರಹ್ಮಾಂಡಾಂದ್" ನಂಗಡ ಪೆರಿಯವು ಎಣ್ಣಿತಿಂಜಕಲೂ ನಂಗಕ್ ಅದ್'ನ ಅರಿವಕ್ ಶಕ್ತಿ ಇಲ್ಲತಾನ ಕಂಡರ್'ಂಜ ಪರದೇಶಕಾರ ನಂಗಳ ಪೊಟ್ಟಾಕಿತ್, ಆರ್ ಅಂಗವುಳ್ಳ ನಂಗಡ ವೇದ, ಆರ್ಯವೇದ, ಯೋಗ ಇನ್ನನೆ ಪ್ರತೀ ಶಾಸ್ತ್ರ, ಪುರಾಣ, ರಾಮಾಯಣ, ಮಭಾರತತ್'ರಂತ ಮಹಾಕಾವ್ಯ ಎಲ್ಲಾನೋ ಅಯಿಂಡ ಸಂಶೋದಕಂಗಳ ಬುಟ್ಟಿತ್, ಒಡ್'ಕಿ ಕೋತಿಯಂಡ್ ಪೋಚಿ. ನಂಗಡ ವೇದ, ಪುರಾಣ, ಮಿಥ್ಯ– ಪೊಟ್ಟಾಯಿತಿಂಜಕ ಪಣ ಖರ್ಚ ಮಾಡಿತ್ ಬುದ್ದಿವಂತಂಗಳಾನ ಪರದೇಶಕಾರ ಎಲ್ಲಾನೋ ಇಂಗ್ಲೀಷ್'ಕ್ ತರ್ಜಮೆ ಮಾಡಿತ್ ಕೊಂಡಪೋಯಿತ್ ಅಯಿಂಡ ಮಿಂಞಕುಳ್ಳ ಪೀಳಿಗೆಕ್ ಚಂಗೀರ ಬೆಪ್ಪಕಿಂಜತಾ? ನಂಗಡ ವೇದ ಪುರಾಣತಿಂಜ ಎಡ್'ತಂಡ್ ಅಯಿಂಡ ವಾಕ್ಸಂಪ್ರದಾಯಕ್ ಒತ್ತನಕೆ ಪೆದತ್'ಸ ಮಾತಿಯಂಡ್ newton ರ ತಿಯರಿಂದೆಣ್ಣುವ– ಪರದೇಶಕಾರ. ಇದ್ ನಂಗ ಬೇರ್'ಚಿಡುವಕುಳ್ಳ ವಿಷಯ! ಉದಾಹರಣೆಕ್ ನಂಗಡ ಮಹಾಭಾರತತ್ ಬಪ್ಪ

'ಹರಿಕುಲೇಶ' ಅಯಿಂಡ ವಾಕ್ಸಂಪ್ರದಾಯಕ್ ಒತ್ತನಕೆ Hercules, ನಂಗಡ "ಗರುಡ" ಇಂಗ್ಲೀಷ್ ವಾಕ್ಸಂಪ್ರದಾಯಕ್ ಒತ್ತನಕೆ Garutman . Newton ರ "WHEEL OF SEVEN COLOURS" ಎಣ್ಣುವ ತೀಯರಿ ನಂಗಡ ವೇದತಿಂಜ ಎಡ್‌ತಂಡ್‌ದ್! ವೈಲೆಟ್, ಇಂಡಿಗೋ, ನೀಲಾ, ಪಚ್ಚೆ, ಮಂಜ, ಆರೇಂಜ್, ಚೋಮ ಏಳ್ ರಂಗ್‌ನ ಒರ್ ಚಕ್ರಕ್ ಪೊಜ್ಜಿತ್ ಜೋರಾಯಿ ತಿರ್‌ಕ್‌ನಕ ಚಕ್ರ ಬೊಳ್‌ತಿತೆ ಕಾಂಬ, ಅಂಗೇ ಸೂರ್ಯ ನಂಗಡ ಕಣ್ಣ್‌ಕ್ ಬೊಳ್‌ತಿತೆ ಕಾಂಬೋಂದ್ ಇಕ್ಕ ವಿಜ್ಞಾನ ಎಣ್ಣುವ. ಅಚೆಂಗಿ ಅತರ್ವಣ ವೇದತ್ ಸೂರ್ಯಂಗ್ ಉಳ್ಳ ಏಳ್ ಪೆದತ್ ಸಪ್ತ ರಶ್ಮೀಯೂ ಒಂದ್. ಸಪ್ತ ರಶ್ಮೀ ಎಣ್ಣಕ ಏಳ್ ಕಿರಣ. ನಂಗಡ ಮಹರ್ಷಿಯ ಈ ವಿಷಯತ್‌ನ ಸಂಶೋದನೆ ಮಾಡಿತ್ ಸೂರ್ಯಂಗ್ ಏಳ್ ಕಿರಣಾಂದ್ ವೇದಕಾಲತೇ ಎಣ್ಣಿತ್. ಋಗ್ವೇದತ್ ಕದರ್ಬ ಮುನಿ ತಾಂಡ ಪೊಣ್ಣ್ ದೇವಪೂತಿಕ್ ಈ ಪ್ರಕೃತಿರ ಚಾಯಿನ ಅವಿಜತ್‌ರ ಕೊಡಿಯ ಪಾರಿಯಂಡ್ ಕಾಟ್‌ವಕ್ಕುಳ್ಳಾಂಗ್ ವೈಮಾನತ್‌ನ ತಯಾರ್ ಮಾಡಿತ್ ತಾಂಡ ಪೊಣ್ಣ್‌ನ ವೈಮಾನತ್ ಕೂಟಿಯಂಡ್ ಸುತ್ತುವ. ವೈಮಾನ – ವಿಮಾನ ಮಾಡುವ 32 ಗುಟ್ಟ್‌ನ ಕಧರ್ಬಮುನಿ ವೇದತ್ ಪ್ರಸ್ತಾವನೆ ಮಾಡಿತ್. ನಂಗಡ ವೇದ ಆಧಾರಿತ ವೈಮಾನವೇ ಇಂದ್ ಆಕಾಶತ್ ಪಾರಿಯಂಡುಳ್ಳ ವಿಮಾನ! ಕಂಡ್‌ಪುಡ್‌ಚ್ಚ ಪೆದಮಾತ್ರ ಬ್ರೀಟೀಷ್‌ಕಾರಡ! Right brothers.

ಪಾಶ್ಚಿಮಾತ್ಯ ದೇಶಕಾರಕ್ ಚೂರಿಯ ಕೇಕ್‌ಲ್ ಉದಿಪದಾ ಪಡಂಞಾರ್‌ಲ್ ಉದಿಪದಾಂದ್ ಗೊತ್ತಾಪಕ್ ಮಿಂಞಲೇ, ವಾರಾಹಮಿಹಿರಂದೆಣ್ಣುವ ಪಂಡಿತ Sunspots ರ ವಿಷಯವೂ, ಅದ್‌ನುಂಡ್ ಭೂಮಿಕ್ ಆಪ ತೊಂದರೆನೊ ಎಣ್ಣಿತ್. ಇಂಗ್ಲೀಷಾಕಾರ ನಂಗಡ ಮೂಲ ವೇದತ್‌ಂಜ, ಪುರಾಣತಿಂಜ ತರ್ಜಮೆ ಮಾಡ್‌ನನ ಎಡ್‌ತಂಡ್ ಕೆಲವು ಜನ ಓದಿತ್– ಮೂಲತ್‌ರ ತಿರ್ ಅರಿಯತೆ, ಎಲ್ಲಾ newton ರ ತಿಯರೀಂದ್ ತಕ್ಕ್ ಪರಿವ! ವಾಲ್ಮೀಕಿ ರಾಮಾಯಣತ ಯುದ್ಧಕಾಂಡತ್ ಯುದ್ಧಕಳಕೇ ಅಗಸ್ತ್ಯಮಹರ್ಷಿ ಬಂದಿತ್ ಶ್ರೀರಾಮಂಗ್ 'ಆದಿತ್ಯ ಹೃದಯಂ' ದೆಣ್ಣುವ ಚೂರಿಯ ಸೋಸ್ತ್ರ ಎಣ್ಣಿಕೊಡ್‌ಪ. ವಾಲ್ಮೀಕಿ ರಾಮಾಯಣತ್‌ಲುಳ್ಳ ರಾಮ. ಅಗಸ್ತ್ಯಋಷಿ, ಇಂದ್ ನಂಗಡ ಕಣ್ಣ್‌ರ ಮಿಂಞಲ್ ಇಲ್ಲೇಂಗಿಯೂ, ಆದಿತ್ಯ ಹೃದಯಂದೆಣ್ಣುವ ನುಪ್ಪದ್ ಸ್ಲೋಕ ಉಳ್ಳ ಚೂರಿಯ ಸ್ಲೋಕ ನಿಯಮಿತವಾಯಿತ್ ಎಣ್ಣ್‌ಚೆಂಗಿ ನೆಂಜೆಲ್ ಕಾಯಿಲೆ ಬಪ್ಪುಲೆ. ಈ ಮಹತ್ವಕ್ ವಿಜ್ಞಾನಿಯ ಕುಂಬ್‌ಡೊಂಡು. ಸೌರಶಕ್ತಿರ ಮಯಿಮೆ, ಮಾಲವಂಡ ತಡಿಲುಳ್ಳ, ಚೂರಿಯ ಚೈತನ್ಯ, ಚೂರಿಯ ಬೊಳಿರ ಉಯಿತ್ velocity of light ನತ ನಂಗಡ ವಿಜ್ಞಾನಿಯಕ್ ಮುಪ್ಪದೇ, ಋಷಿ ಮುನಿಯಕ್ ಅರ್‌ಂಜಿತಿಂಜತ್ ಎಣ್ಣುವಾಂಗ್ ಎಂಗಡ

ಋಷಿಮುನಿಯಡ ಸುಮಾರ್ ಚೂರಿಯ ಸ್ಲೋಕ ಆದಾರವಾಯಿತುಂಡ್. "ಸಿದ್ಧ ವೈದ್ಯಮ್"–ಕಾಯಿಲೆ ವಾಸಿಮಾಡುವ ಮದ್ದ್ –ಕಾಯಿಲೆ ವಾಸಿಮಾಡುವ ವಿಜ್ಞಾನ, ನಾಡಿ ಶಾಸ್ತ್ರ, ಯೋಗ, ಕೇರಳತ್ ಕಲೇರಿಪ್ಪೈಟ್‌ನನಕೆ ಇಂದೂ ಕೇರಳತ್ ಪಡ್‌ಚಂಡುಳ್ಳ "ಸಿಲಂಬಮ್" ಎಣ್ಣುವ ಯುದ್ಧ ತಂತ್ರ... ಎಲ್ಲಾಂಗೂ ಗುರು ಅಗಸ್ತ್ಯಮಾಮುನಿ. ಕೊಡವಡ "ಪರಿಯ ಕಳಿ" ಇದೇ ಯುದ್ದ ತಂತ್ರ! ಈ ಭೂಮಿ ಸೃಷ್ಠಿಯಾಯಿತ್ ಆದ್ಯ ಪುಟ್ಟ್‌ನ ಗರಿಕೆ ಅಗಸ್ತ್ಯಮುನಿಕ್ ಕುಂಬ್‌ಟ್ಟತ್ತ್‌ಂದ್ ಪುರಾಣ ಎಣ್ಣುವ. ಎಣ್ಣಕ ಅಗಸ್ತ್ಯ ಋಷಿ ಆದ್ಯ ಗರಿಕೆ ಮೊಳ್‌ಪಕ್ ಮುಪ್ಪಡೇ ಈ ಭೂಮಿಲ್ ಉಂಡ್! ಪ್ರಪಂಚತ್ ಎಲ್ಲಾ ವಿಷಯತ್‌ರ ಮೇಲೆಯೂ ಅಗಸ್ತ್ಯಮುನಿ 905 ಂಗೂ ಆದಿಯಾಯಿತ್ ಪ್ರಸ್ತಕ ಎಳ್ದಿತ್. ಆದಿದ್ರಾವಿಡ ಪಾಜೆಕ್ ವ್ಯಾಕರಣ Grammar, ತಂತ್ರ, ಮಂತ್ರ ಇನ್ನನೆ ಎಚ್ಚಕೋ ವಿಷಯತ್‌ರ ಮೇಲೆ ಎಳ್ತ್ ಎಳ್ದಿತ್ ಬೆಚ್ಚಿತ್ತ್. ಮಾಭಾರತತು ಅಗಸ್ತ್ಯಂಡ ಪಾತ್ರ ಉಂಡ್.

ಪೆರಿಯ ಕೊಡವಡ ಕಾಲತ್ ಪಂಡ್, ವೈದ್ಯೆಂಗಳೇ ಇಂಜಿಲೆ..... ಚೂರ್ಯ ಕಿರಣವೇ ಎಲ್ಲಾಂಗೂ ಮದ್ದ್. ಚೂರ್ಯ ಬೊಳಿಲ್ ಪಣಿಕೆಯ್ಯುವೊ, ನಲ್ಲ ಗಾಳಿ, ನಲ್ಲ ನೀರೇ ಪೆರಿಯ ಕೊಡವಕ್ ವೈದ್ಯೆನಾಯಿತಿಂಜತ್. ಈ ವೈಜ್ಞಾನಿಕತೆಕ್ ಗುರು, ಶ್ರೀರಾಮಂಗ್ 'ಆದಿತ್ಯ ಹೃದಯಂ' ಸೋಸ್ತ್ರ ಎಣ್ಣಿಕೊಡ್‌ತ ಅಗಸ್ತ್ಯಮಾಮುನಿ.

ಕಾವೇರಿಯಮ್ಮೆ ನೀರಾಯಿತೊಕ್ಕಿಯಂಡ್ ಪೊರಡುವಕ ಅಗಸ್ತ್ಯಮಹರ್ಷಿ ಕಾವೇರಿತಾಯಿಕ್ ಪೋಪ ಬಟ್ಟೆ ಎಣ್ಣಿ ಕೊಡ್‌ಪ ಸಂದರ್ಭತ್, ಮಾರ್ಕಂಡೆಯ ಮುನಿರ ನೆಲೆ ಆನಪಿಂಞ ಕಪಿಲ ಮುನಿರ ಸ್ಥಾನಕಾಲೆ ಕಡ್‌ಂದಂಡ್ ಪೋಂಡೂಂದೆಣ್ಣುವ. ಋಗ್‌ವೇದತ್ ಕಪಿಲ ಮುನಿ, ಕದರ್ಬ ಮುನಿ– ದೇವಹೂತಿರ ಮೋಂವೂ–ಗಣಿತ ಶಾಸ್ತ್ರಜ್ಞ ! ಕದರ್ಬ ಮುನಿ, ಮಾವಿಷ್ಣುರ ವರ ಬೋಡಿತ್ ಪುಟ್ಟ್‌ನಂವೊ– ಕಪಿಲಮುನಿ. ಋಗ್‌ವೇದ ಕಾಲಕ್ ಸಂಮಂದಪಟ್ಟ ಮಹರ್ಷಿಯಡ ಪೆದ ಕೊಡವಡ ಪಳಮೆಲ್ ಬರೊಂಡುವೆಂಗಿ ಕೊಡವಕ್ ವೇದಜ್ಞಾನ ಇಂಜತ್‌ಂದ್ ಎಣ್ಣೂಲು. ಅಗಸ್ತ್ಯ ಮಾಮುನಿಕ್ ಆದ್ಯ ಮೊಳ್‌ತ ಗರಿಕೆ ಕುಂಬ್‌ಟ್ಟತ್ತ್‌ಂದ್ ಎಣ್ಣಕ, ಸಿದ್ಧವೈದ್ಯಂಗ್ ಮದ್ದ್ ಕುಂಬ್‌ಟ್ಟತ್ತ್‌ಂದ್ ಅರ್ಥ.

ಗರಿಕೆಲುಳ್ಳ Medicinal Value ಎಲ್ಲಾರ್‌ಕೂ ಅರ್‌ಂಜದೇ. ತಕ್ಕ್ ಪರಿವಕಯ್ಯಿತ ಯರ್ಚೆ, ಮೂಳೆ ತಿಂಬ ನಾಯಿ ಕೆಲನೊಂಬಲ ಆಪಕ ಗರಿಕೆ ತಿಂದಿತ್ ಕೆಲ ನೊಂಬಲ ವಾಸಿ ಮಾಡಿಯವ. ಪೊಮ್ಮಾಲೆ ಕೊಡವು ದೇಶತುಳ್ಳ ನಾಯಿಕೂ ಅರಿಯು ಗರಿಕೆರ ಮಯಿಮೆ! ಬೋಟೆಕಾರ ಕೊಡವ, ಪಂಡ್ ಬೋಟೆಕ್ ಪೋಪಕ ನಾಯಿಯಳ ಬಳಸಿಯಂಡಿಂಜತ್. ಇಕ್ಕಲೂ ನಾಯಿ ಇಲ್ಲತೆ ಕೊಡವಡ

ಮನೆಯೇ ಇಪ್ಪಕಿಲ್ಲೆ. ಧರ್ಮರಾಯ ಸ್ವರ್ಗಕ್ ಪೋಪಕ ಅವಂಡ ನಾಯಿಯೂ ಜೊತೆಲ್ ಪೋಚಿಂದೆಣ್ಣುವದ್ ಪುರಾಣ. ಕೊಡವಡ ಪೊಲ್‌ಚಿ ಪಾಟ್‌ಲ್ ಧರ್ಮರಾಜ ದೊರೆ ಪೋಲೆ ತಡಿಯೋಡೆ ಸ್ವರ್ಗಕ್ ಪೋಯೋಳುಂದ್ ಪಾಡುವ. ಕೊಡವ ತಂಗಡ ನಲ್ಲಂಗೂ, ತೀಯಂಗೂ ಕಾರಣಂಗ್ ಕೊಡ್‌ಪಕ, ಕುಳಿಯ– ಚವುಂಡಿಕ್ ಕೊಡ್‌ಪಕ ಗರಿಕೆನೇ ಬಳಸುವ! ದರ್ಬೆ ಬಳಸುಲೇ! ಕಾರಣಂಗ್, ಕುಳಿಯ, ಚವುಂಡಿಕ್ ಕೊಡ್‌ಪಕ ವಿಗ್ರಹ ಪೂಜೆ ಮಾಡತ ಕೊಡವ ಆದ್ಯ ಗಣಪತಿನ ನೆನತಿತ್ ಗಣೋದಿಂದ್ ಎಣ್ಣಿಯಂಡ್ ಗಣಪತಿಕ್ ಎಡೆ ಇಡುವಾಂದೆಣ್ಣುವದ್ ವಿಷೇಷ! ಗಣಪತಿ ಬ್ರಹ್ಮಸ್ವರೂಪಾಂದೆಣ್ಣುವದ್ ಪುರಾಣ! ಪಂಡ್ ಶೂರ ಪದ್ಮಾಸುರ ಎಣ್ಣುವ ರಾಕ್ರಸಿ ಭಾರತತ್‌ರ ತೆಕ್ಕ್ ದಿಕ್ಕ್‌ಲುಳ್ಳ ದೇಶಕ್ ಮಳೆ ಪೊಯ್ಯುವಾನ ತಡ್‌ತಾನುಂಡ್ ಭೂಮಿಲ್ ಜನಕ್ ತೊಂದರೆ ಆನನ ಅರ್‌ಂಜ ದೇವೇಂದ್ರ, ಮಹಾಗಣಪತಿನ ಅಯಿಚಿತ್ ಮಾಮುನಿ ಅಗಸ್ತ್ಯ ಕಮಂಡಲುಂಜ ತೀರ್ಥ ಚೆಲ್ಲುವನೆಕೆ ಮಾಡ್‌ನನಗೊಂಡ್, ಸ್ವರ್ಗತೀರ್ಥವಾನ ವಿರಜಾ ತೀರ್ಥತ್‌ರ ಕೂಡ ಕಾವೇರಿಯೂ ತೀರ್ಥರೂಪಿಣಿಯಾಯಿ ವೊರ್ಕ್‌ಚೀಂದ್ ಸ್ಕಂದ ಪುರಾಣತೋರ್ ಕತೆ ಉಂಡ್. ಕೊಡವ, ಪೊಮ್ಮಾಲೆ ಕೊಡವುಲ್ ಗಣೋದಿ ಬೆಪ್ಪಂಗೂ, ಗರಿಕೆ ಬಳಸುವಾಂಗೂ ಈ ಪುರಾಣ ಕಥೆಕೂ ಸಂಮಂದ ಉಂಡ್‌ೀಂದ್ ನಾಡ ಅಭಿಪ್ರಾಯ.

ಬ್ರಹ್ಮದೇಶತ್ ಕೊಡವ ಬ್ರಹ್ಮಂಗ್ ಆದ್ಯ ಎಡೆ ಇಡುವದೂ ಓರ್ ವಿಷೇಷ! ಇಲ್ಲಿ ನಾನ್ ಇಂಞೂ ಓರ್ ವಿಷಯ ಎಣ್ಣಕ್ ಇಷ್ಟಪಡುವಿ. ರಾಹುಕೇತು ಎಣ್ಣುವದ್ ಛಾಯಾಗ್ರಹ, ಅಲ್ಲೇಂಗಿ ಭೂಮಿರ ನಳಂದೇ ಎಣ್ಣುವ. ವೈಜ್ಞಾನಿಕವಾಯಿತೂ ಭೂಮಿರ ಬಡ್‌ಕ್‌ಲ್ ರಾಹುರ ಛಾಯೆ – ತೆಕ್ಕ್‌ಲ್ ಕೇತುರ ಛಾಯೆ North Node & south Node. ರಾಹು–ಕೇತು ಯಕ್ಕಾಲೂ 180°ಲೇ ಅಪ್ಪರಿಪ್ಪರ ನೋಟಿ ಯಂಡ್ ಇಪ್ಪ. ಕೊಡವು ನಾಡ್ ಭೂಮಿರ ಉತ್ತರಾರ್ದತುಂಡ್. ವೇದ ಶಾಸ್ತ್ರತ್ ಗರಿಕೆ ರಾಹುಗ್ರಹತ್‌ನ ಪ್ರತಿನಿದಿಚಿಡುವ. ಗರಿಕೆನ ಸಂಸ್ಕೃತತ್ "ದೂರ್ವಾ"ಂದ್ ಎಣ್ಣುವ. ರಾಹುಗ್ರಾಣ ಕಾಲತ್ ಗರಿಕೆನ ನಂಗ ನೀರ್‌ಕೂ, ತಿಂಬತೀನಿಕೂ ಇಟ್ಟ್ ಬೆಪ್ಪ. ಕೇತು ಗ್ರಾಣ ಕಾಲತ್ ದರ್ಬೆನ ಇಡುವ. ಉತ್ತರಾರ್ದತುಳ್ಳ – ಕೊಡವ ನಲ್ಲಂಗೂ– ತೀಯಂಗೂ ಮಂಗಲತೂ, ಚತ್ತಲ್ಲಿಯೂ ಗರಿಕೆನ ಬಳಸುವ! ಎಲ್ಲಿಂಜ ಎಲ್ಲಿಕ್ ಸಂಮಂದ – ಇದೆಲ್ಲಾ ಒಂದಂಗೊಂದ್ ಕೊಳ್‌ಕ್ ಕೂಟ್‌ನನಕೆ ಉಳ್ಳದ್ ನೋಟ್ಟಕ ಕೊಡವ ಪೆರಿಯವು – ಋಷಿ ಸಮಾನ ಪಂಡಿತಂಗಾಳಾಯಿತಿಂಜತ್‌ೀಂದ್ ಎಣ್ಣೊಲು. ಖಗೋಳ ಶಾಸ್ತ್ರ ಅರ್‌ಂಜಿತಿಂಜವುಂದೆಣ್ಣಲು.

ವೈಜ್ಞಾನಿಕವಾಯಿತೂ North Node–ರಾಹು, South Node ಕೇತು, ಈ

ಭೂಮಿರ North & South poles. ಗ್ರಹಣ ಕಾಲತ್‌ರ 'ಕ್ಷ' ಕಿರಣತ್‌ನ ಗರಿಕೆ, ದರ್ಬೆ ದಂಡಾಂಗೂ ಮಡ್‌ಚಿ ಬೆಪ್ಪ ಶಕ್ತಿ ಉಂಡ್‌ೇಂದ್ ವಿಜ್ಞಾನಿಯ ಎಣ್ಣುವ. ಇಂಙಿ ಕೊಡವಡ ಪಳಮೆಲ್ ಅಗಸ್ತ್ಯಋಷಿ "ಏಳ್ ಕೋಟಿ ತೀರ್ಥ ಕಾಲೋರಾಂಡೆಕೊರಮ್ಮ ಚೂರಿಯ ತುಲಾ ರಾಶಿಕೆತ್ತಕ ಉಕ್ಕಿ ಉಕ್ಕಿ ಒಕ್ಕಂಡೂಂ ದೇಣ್ಣುವ". ಏಳ್ ಎಣ್ಣುವದ್ ದೈವಿಕ ಸಂಖ್ಯೆಂದ್ ವೇದ ಎಣ್ಣುವ. ಚಣ್ಣೂರ ಭೂಮಿರ ಓರ್ ಸುತ್ತ್ ಬಪ್ಪಕ್ ಏಳ್ ದಿವಸತ್‌ರ ನಾಲ್ ವಾರ ಬೋಂಡು. ಪ್ರಭಾವ ಉಳ್ಳ ಗ್ರಹ ಏಳ್, ಏಳ್ ಸ್ವರ, ಏಳ್ ಚೂರಿಯ ರಂಗ್, ಏಳ್ ಕುಂದ್, ಏಳ್ ಪೊಳೆ....... ಕೊಡವ ಪದ್ದತಿಲ್ ಏಳ್ ತರ ಮಂಗಲ! ಓರ್ ವಾರಕ್ ಏಳ್ ದಿಪ್ಪ, ಏಳ್ ಲೋಕ....... ಮಾಲವಂಡ ತಡಿಲ್ ಉಳ್ಳ ಏಳ್ ಚಕ್ರ, ಏಳ್ ನಲ್ಲ ಗುಣ, ಏಳ್ ತರತ ಪಾಪ.... ಪನ್ನಂಗಾಲತಮ್ಮೆನ ಕೂಟ ಕೇರಳತಿಂಜ ಬಂದ ಕೊಡವಡ ದೇವ ಏಳ್..... ಇನ್ನನೆ ಸಂಖ್ಯೆ ಏಳ್ ತ್ಯಾಗತ್‌ರ ಚಿನ್ಹೇಂದ್ ವೇದ ಎಣ್ಣುವ. ಮಾಕಡತ್ ಆದ್ಯ ತೆರೆ ಮೆಲ್ಲೆ ಬಂದಿತ್ ಕರೆಕ್ ಪೊಯ್ಯುವ. ದಂಡನೇ ಕುರಿ ಆಂಜಂಜ ಜೋರಾಯಿತ್, ಮೂಂದ್, ನಾಲ್, ಅಂಜಿ, ಆರ್ ಇನ್ನನೆ ಚೆನ್ನ, ಚೆನ್ನ ಜೋರಾಯಿತ್ ಏಳನೇ ತೆರೆ ಕೊಡಿಕ್ ಜೋರಾಯಿತ್ ರಭಸತ್ ಪೊಜ್ಜಿತಾನದು– ಪುನಃ ಆದ್ಯ ತೆರೆಯಾಯಿ ಮಾರುವ. ಮಾಕಡತ್ ಇರ್‌ವತ್ತ್‌ನಾಲ್ ಗಂಟೆಯೂ ನಡ್‌ಪಳ ಈ ಕ್ರಿಯೆ, ನಂಗಡ ಕಣ್ಣ್‌ಕ್ ಇಕ್ಕಲೂ ಕಾಂಬಳ ಸತ್ಯ. ಈ ಬ್ರಹ್ಮ ಸೃಷ್ಟಿಲೇ ಎಲ್ಲಾಂಗೂ ಜವಾಬ್ ಉಂಡ್‌ೇಂದೂ, ಬ್ರಹ್ಮಸೃಷ್ಟಿಯೇ ಮೊಮ್ಮಾಯಾಂದರ್‌ಂಜವು ನಂಗಡ ಮಹರ್ಷಿಶ್ವರಂಗ.

ನಿಂಗಕ್ ಗೊತ್ತುಂಡ.......? ತಲಕಾವೇರಿಲ್ ಎಕ್ಕೊಲೂ ಏಳ್ ಎಲಕಂಡವೇ ಇಪ್ಪಂತ ಚಿತ್ತಾಲ್‌ಡ ಕುಂಞಿ ಅಗಸ್ತ್ಯ–ಕಾವೇರಿನ ಮಂಗಲಾನಾಂಗ್ ಸಾಕ್ಷಿಯಾಯಿತ್ ಇಂಜತ್! ಇಕ್ಕಾಯಿತ್ ಚೆನ್ನ ಕಾಲಕ್ ಬಯ್ಯ ಆ ಏಳೇ ಎಲ್‌ಕಂಡ ಇಪ್ಪಯಿಂಜ ಚಿತ್ತಾಲ್‌ಡ ಕುಂಞಿಕ್, ಕಾಂಕ್ರೀಟ್ ಕಟ್ಟೆ ಕಟ್ಟುವಕ್ ಪ್ರಯತ್ನ ಮಾಡ್‌ನಲ್ಲಿ ಆ ಅಗಸ್ತ್ಯ ನಟ್ಟ ಪವಿತ್ರ ಚಿತ್ತಾಲ್‌ಡ ಕುಂಞಿ ಚತ್ತ್‌ಪೋಚಿ! ವೈಜ್ಞಾನಿಕವಾಯಿತ್ ಚೂರಿಯ ಭೂಮಧ್ಯೆ ರೇಖೆನ ದಾಟುವ ಸಮಯತ್, ರಾಶಿ ಮಂಡಲತ್ ಏಳನೇ ರಾಶಿಯಾನ, ಜೋತಿಷ್ಯ ಶಾಸ್ತ್ರತ್ ವಾಯು ತತ್ವ ಶುಕ್ರ ಸ್ಥಾನವಾನ ತುಲಾ ರಾಶಿಲ್, ತೇಜಸ್ಸುಳ್ಳ ಕ್ಷತ್ರಿಯ– ಭೂಮಿ ಪುತ್ರ ಕುಜ, ನಕ್ಷತ್ರವಾನ ಚಿತ್ತಾ ನಕ್ಷತ್ರ 3ನೇ ಪಾದಕ್, ಅಗ್ನಿ ಸಮಾನ ಚೂರಿಯ ಮೊಟ್ಟ್‌ಡುವಕ, ತೋಲ್ಯಾರ್ ಚಂಗ್ರಾಂದಿ ನಡ್‌ಪ. ಚಿತ್ತಾ ನಕ್ಷತ್ರವೂ ಭೂಮಿ ಸುತ್ತುವ ಬಟ್ಟೆಲುಳ್ಳ ನಕ್ಷತ್ರತ್‌ಲ್ 7+7=14 ಪದ್‌ನಾಲನೇ ನಕ್ಷತ್ರವಾಯಿತುಂಡ್! ಇದ್ ವಾಯು ಮಂಡಲತ್‌ಲುಳ್ಳ ನಕ್ಷತ್ರ, ವಾಯು ನಕ್ಷತ್ರವೂ,

ಅಗ್ನಿರ ಕೊಂಡಂದೇ ಎಣ್ಣುವ ಚೂರಿಯಂಡ ಸಂಯೋಜನೆಯಾಪಕ ಸಮುದ್ರತ್ ಬದಲಾವಣೆ ಆಪ. ಬೀರಂಗಾತ್ ಬೀಜುಪಾಂದ್ ಸಿದ್ಧಾಂತ ಸ್ಕಂದ ಎಣ್ಣುವ! ಪವಿತ್ರ ಮಾಕಡತ್ ನಡ್‌ಪ ಈ ಬದಲಾವಣೆ ಕಾವೇರಿ ತೀರ್ಥ, ಮಾಕಡಕ್ ಕೂಡುವ ಎಲ್ಲಾ ತೀರ್ಥತ್‌ನ ಕೂಟಿಯಂಡ್ ತೊಲ್ಯಾರ್ ಚಂಗ್ರಾಂದಿಲ್ ತೀರ್ಥ ಉಕ್ಕಿ ಉಕ್ಕಿ ಬಪ್ಪಾಂಗ್ ಆದಾರವಾಯಿತುಂಡ್. **ವೇದ ಕಾವೇರಿನ "ಮರುದ್ವೃಧಾಂವ್" ಎಣ್ಣುವ.** ಇಲ್ಲಿ ಈ ಪೆದವೇ ವಾಯುನುಂಡ್ ವೃದ್ಧಿಯಾನದ್‌ಂದೆಣ್ಣುವ ಸೂಚನೆ ತಪ್ಪ. ಜ್ಯೋತಿಷ್ಯ ಆಧಾರತ್‌ರ ಗಣಿತ ಸ್ಕಂದ ಮಾತ್ರ ಅಲ್ಲ, ವೈಜ್ಞಾನಿಕ ಆಧಾರವೂ ಇದ್‌ಲುಂಡ್.

ಮಾಮುನಿ ಅಗಸ್ತ್ಯ ಏಳ್ ಕೋಟಿ ತೀರ್ಥ–ನೆತ್ತಿ ಕಣ್ಣ್ ಚೂರಿಯ ತುಲಾ ರಾಶಿಕೆತ್ತಕ ತಲಕಾವೇರಿಲ್ ಉಕ್ಕಿ ಉಕ್ಕಿ ಬರಂಡೂಂದ್ ಅಪ್ಪಣೆ ಮಾಡ್‌ಚೀಂ ದೆಣ್ಣಿಯಂಡ್ ಕೊಡವ 'ಪಳಮೆ'ಲ್ ಪಾಡುವ. ನೆತ್ತಿ ಕಣ್ಣ್ ಚೂರಿಯಂದೆಣ್ಣುವನ ನೋಟ್ಟಕ ಆಕಾಶ ಗಂಗೆ ಅಲ್ಲೇಂಗಿ Milky way Galaxy ರ ನಡುಲ್ ಚೂರಿಯುನುಳ್ಳದ್ ಇಕ್ಕ ಖಗೋಳ ವಿಜ್ಞಾನಿಂಗ ರೇಡಿಂಯೋ ಅಬ್ಸರ್‌ವೇಶನ್‌ಲ್ ಕಂಡ್‌ಪುಡ್‌ಚಿತ್‌ಂದೆಣ್ಣುವದ್ ಅರ್‌ಂಜ ವಿಷಯ, ಕೊಡವ 'ಪಳಮೆ' ಪಾಡ್‌ನ ಕಾಲತ್, ಕೊಡವಕ್ ಈ Radio Observation ಎನ್ನನೆ ಅರ್‌ಂಜತ್‌ಂದ್ ಆಶ್ಚರ್ಯ ಆಪ! ಈ ಬ್ರಹ್ಮಾಂಡತುಳ್ಳ ಚೆರಿಯೋರ್ ಅಣುಂಜ, ಇಡೀ ಸೂರಿಯ ಮಂಡಲ ಕತ್ತಣೆ ಉಳ್ಳ ಎಲ್ಲಾ ವಿಷಯತ್‌ರ ಅರಿವು–ಜ್ಞಾನ, ಪೋದ, ಕೊಡವ ಪೆರಿಯಯಿಂಗಕಿಂಜಂಡೇ "ಪಳಮೆ" – ಪಟ್ಟೋಲೆ ಪಳಮೆನ ಕೊಡವ ಪಾಡಿಚೀಂದ್ ಖಂಡಿತ ಎಣ್ಣೊಲು. ವೇದಶಾಸ್ತ್ರತ್ ಶುಕ್ರ–ಚಂದ್ರ, ಜಲಕ್ ಅಧಿಕಾರಿಯ. ಚಣ್ಣೂರಂಡಲ್ಲಿ ನೀರೂಂಡ್‌ಂದ್ ವಿಜ್ಞಾನಿಯ ಇಕ್ಕಾಯಿತ್ ಎಣ್ಣುನದ್ ಎಲ್ಲಾರ್‌ಕೂ ಅರ್‌ಂಜ ವಿಷಯ. ಸಿದ್ಧಾಂತ ಸ್ಕಂದತ್– ಗಣಿತ ಸ್ಕಂದತ್, ಮಳೆ ಪೊಯ್ಯುವ ಯೋಗತ್‌ನ ಕಣ್‌ಕ್ ಕೂಟಂಡಿಕೇಂಗಿ ಚಂದ್ರ–ಶುಕ್ರ ಗ್ರಹ ಸಂಚಾರಕ್ ಪ್ರಾಮುಖ್ಯತೆ ಕೊಡ್‌ಪ. ಚಂದ್ರ–ಶುಕ್ರ ಮಳೆನ ಉತ್ಪತ್ತಿ ಮಾಡುವ ಕಾರಿಂಗತ್ ಕಾರಣವೋಂಗಂದೆಣ್ಣೊಲು. ಇದ್‌ಂಗೋರ್ ಚೆರಿಯ ಉದಾರಣೆ. ಪ್ರತೀ ಕಾಲವೂ ಪೊಮ್ಮಾಲೆ ಕೊಡವು ನಾಡ್‌ಲ್ ಪೆದಪೋನ ಬ್ರಹ್ಮಗಿರಿ ಎಣ್ಣುವ ಕೊಡವ ಷಾಜೆರ ವಾರಪತ್ರಿಕೆಯೂ, ಕೊಡವು ನಾಡ್‌ರ ಪ್ರತಿಯೊಬ್ಬನೂ ಪೋಲಾಕ ಓರ್ ಕೈಲ್ ಬಿಸಿ ಬಿಸಿ ಕಾಪಿಕಪ್ಪ್‌ರ ಕೂಡ, ಇಞೋರ್ ಕೈಲ್ ಪುಡ್‌ಚಂಡ್ ಓದುವ ಪೊಮ್ಮಾಲೆ ಕೊಡವುರ ಶಕ್ತೀಂದೇ ಎಣ್ಣುವ "ಶಕ್ತಿ" ಪತ್ರಿಕೆಯೂ ನಾನ್ ಎಳ್ದುವ ಮಳೆರ ಫಲ– ಗ್ರಾಣ ಫಲ ಇನ್ನನೆ ಮಳೆಕ್ ಸಂಮಂದಪಟ್ಟ ಲೇಕನತ್‌ನ ಪ್ರಕಟ ಪಡ್‌ತುವ. ಈ

ನಾಡ ವಾರಂಡೆತ್‌ರ ಮಳೆ ಫಲ/ಮಳೆರ ಯೋಗತ್‌ನ B.B.T.C – Coimbatore ಕೇಟಂಡ ಪೋಲೆ ಅಯಿಂಗಕೂ ಅಯಿಚಿಕೊಡುಪಿ. ಮಳೆರ ಫಲತ್‌ರ ಗಣಿತ ಮುಕ್ಕಾಲ್ ಶುಕ್ರ ಸಂಚಾರ ಚಂದ್ರ ಸಂಚಾರ ಆದಾರತ್‌ಲೇ! ನಾನ್ ಎಳ್ದುವ ಮಳೆ ಫಲ/ಗ್ರಾಣಫಲ ಅಚ್ಚಿಕೇ accurate ಆಯಿತ್. ನಡ್‌ಪಾಂದೆಣ್ಣುವಕ್ ನಾನ್ ಕುಶಿ ಪಡುವಿ.

ಉದಾರಣೆಕ್ ಈಯಾಂಡ್ (2012–2013) ಗ್ರಾಣ–ಎನ್ನನೆ ಎನ್ನುವ ತಲೆ ಎಳ್ತ್‌ಲ್ (ಬ್ರಹ್ಮಗಿರಿ ಪತ್ರಿಕೆ 14/5/2012 – ಶಕಿ ್ತ15/5/2012) ಜೂನ್ ಆರಂಗ್(6.06.2012) ಗ್ಯಾರಂಟಿ ಮಳೆಯಾಪಂದೆಣ್ಣ ಪೋಲೆ, ಈಯಾಂಡ್ ನಡ್‌ಂದ ವಿಸ್ಮಯತ್‌ಲ್ ಒಂದಾನ ಶುಕ್ರ ಚಂಗ್ರಾಂದಿ, ಶುಕ್ರಗ್ರಹ ಚೂರಿಯನ ದಾಟುವ ಕ್ರಿಯೆ ನಡ್‌ಪ ಸಮಯತ್, ಮಾಕಡತ್ ವಾಯು ಬಾರ ಕಮ್ಮಿಯಾಚಿ. ಜೂನ್ ಅಂಜಾಂಗ್ ಬ್ಯೆಟ್ ಮಳೆ ತೊಡಂಗಿತ್, ಜೂನ್ ಆರಂಗ್ ಕೊಡವು ನಾಡ್‌ಲೇ ಅಲ್ಲ ಬೋರೆ ಜಾಗತೂ ಮಳೆಯಾಚಿ! ಪವಿತ್ರ ದೇವಗುರು ಸ್ಥಾನತ್ ಚೂರಿಯನಿಪ್ಪಕ ಕೊಡವ ಶುಭಕಾರಿಯ ಮಾಡುಲೆ! ನಂಗ ಬದುಕುವಕ್ ನಂಗಕ್ ಈ ಪ್ರಕೃತಿ, ನೀರ್, ಗಾಳಿ ತಂದ ಆ ದೇವಕ್ ಕೊಡವ ಕುಂಬ್‌ಡುವ ಪದ್ಧತಿ ಇನ್ನನೆ! ಸಿದ್ಧಾಂತ ಸ್ಕಂದತ್ ಸೂರ್ಯೋದಯತಿಂಜ ಒಂದರೆ ಗಂಟೆರ ಸಮಯತ್ ಪಂಚಮಾಹಾಭೂತತ್‌ರ ಅಧಿಕಾರಿಯಾನ ಎಲ್ಲಾ ಗ್ರಹ ಬದಲಾವಣೆಯಪ. ಅನ್ನನೆ ಈ ಪಂಚಭೂತ ಓರ್ ದಿನಕ್ 16 ಕುರಿ ಬದಲಾಪ. ನಾರಾಚೆ ಸೂರ್ಯ ಉದಯ ಆಪಕ ಆದ್ಯ ಅಗ್ನಿ ಅಧಿಕಾರ ವಹಿಸಿಯಂಡಕ, ತಿಂಗಳಾಚೆ ಚಣ್ಣೂರ. ಜಲತ್‌ರ ಅಧಿಕಾರಿ ಅಧಿಕಾರ ವಹಿಸಿಯವ. ಕೊಡವ ಚಂದ್ರವಂಶಕಾರಂದೂ ಪುರಾಣ ಎಣ್ಣುವ. ಚಣ್ಣೂರ ಜಲತತ್ವತ್‌ರ ಅಧಿಕಾರಿ, (ವೇದ ಕಾಲತ್ ಕರ್ತಬಾವು ಕಯಿಂಜಿತ್ ದಂಡನೇ ದಿನತ್‌ರ ಚಣ್ಣೂರನ ಜಲತ್‌ರ ರೇಖಾಚಿತ್ರವಾಯಿತ್ ಬಳಸುವ ಇಂಜತ್) ಜಲವೇ ಕೊಡವಕ್ ಕುಲದೇವ. ತಿಂಗಳಾಚೆ ಸೂರ್ಯೋದಯ ಆಪಕ ಜಲ–ತತ್ವ ಚಣ್ಣೂರ ಅಧಿಕಾರ ಆದ್ಯ ವಹಿಸಿಯವ. ಚಂದ್ರ ಹೋರೆಂಜ ನಾಳ್ ತೊಡುಂಗುವ ತಿಂಗಳಾಚೆ ಚಂದ್ರವಂಶಕಾರಳಾನ ಕೊಡವ ಬೇಲ್‌ಕ್ ಅತ್ತಳ ಕೆಟ್ಟುಲೆ – ಉಪ್ಪುಲೆ! ಬೇಲ್ ಉಪ್ಪದೊ, ಬಿತ್ತ್ ಇಡುವದೋ, ಪೆರಿಪೊ, ನಾಟಿ ಇದೆಲ್ಲಾ ಆದ್ಯ ತೊಡಂಗುವೊ ಶುಕ್ರ ಅಧಿಕಾರ ಎಡ್‌ತವ ಬೊಳ್ಳಿಯಾಚಿ. ಇಲ್ಲೇಂಗಿ ತೇಜಸ್ಸ್‌ರ ನಾಳ್–ಭೂಮಿಪುತ್ರಂಡ ಆಚಿ–ಚೊವ್ವಾಚೆ. ಆಕಾಶ ತತ್ವತ್‌ರ ಅಧಿಕಾರಿ ದೇವಗುರು– ಬ್ರಹ್ಮಸ್ಪತಿ ಸ್ಥಾನಾಧಿಪತಿಯಾನ ಧನುರಾಶಿಲ್ ಚೂರಿಯ ಇಪ್ಪ ಸಮಯತ್– ಪಲ್‌ಮ್ಯಾರ್‌ಲ್ ಕೊಡವ ಪುದಿಯ ಅಕ್ಕಿರ ಪಾಯಿಸ ಕೂಳ್ ಸತ ಉಂಬುಲೆ. ಮಂಗಲತ್‌ನಂತ

ನಲ್ಲ ಕಾರ್‌ಬಾರ್ ಮಾಡುಲೆ. ಅನ್ನನೇ ಮೀನ್ಯತೂ, ನಲ್ಲ ಕಾರ್‌ಬಾರ್ ಮಾಡುಲೆ. ದೇವಗುರು – ಆಕಾಶ ತತ್ವ , ದೇವ ನೆಲೆಯುಳ್ಳ ಜಾಗಾಂದ್ ಕೊಡವ ನಂಬಿತ್. ಕೊಡವಡ ಚಾವು ಪದ್ಧತಿಲೂ ಚಾವು ಎಡತ ಪೋಪಕ ಚಾವುಕ್ ಆಕಾಶ ಕಾಂಗತನಕ್ಕೆ, ಅಲ್ಲೇಂಗಿ ಆಕಾಶ ಚಾವುನ ಕಾಂಗತನಕೆ ಚಾವುರ ಮಂಡೆರ ಕೊಡಿಕ್ ಚೋಂದ ರೇಶ್ಮೆ ಚವುಕ ಕಟ್ಟುವ. ತೂಟುಂಗೋಳತೂ ಚಾವುರ ಸುತ್ತೂ ಶಾಸ್ತ್ರಮಾಡುವಕ, ಅವಿಜ ಕಾಂಗತನಕೆ ಚಾವುನೋ. ನಂಗಮಾಡುವ.ಶಾಸ್ತ್ರವೂ ಅವಿಜ ನೋಟತನಕೆ ಬೊಳ್‌ತ ಬಟ್ಟೆನ ಪುಡಿಪ. ಅದ್‌ನ "ಮೆಮಾಡಿ"ದೆಂಣ್ಣುವ.

ಪ್ರತಿಯೋರ್ ಆತ್ಮವೂ ವಿಕಸನ ಆಪನಕೆ ಆ ದೇವ ಅಲ್ಲೇಂಗಿ – ಎಂಗಡ ಕಣ್ಣ್‌ಕ್ ಕಾಂಗತೋರ್ ಶಕ್ತಿ ಈ ಭೂಮಿನ ಕೆತ್ತಿತ್ design ಮಾಡಿತ್ತ್ ಬೆಚ್ಚಿತ್ತ್. ತಂಗಡ ತಡಿನ ಬುಟ್ಟಿತ್ ಪೋನ ಎಂಗಡ ಪೆರಿಯಯಿಂಡ ಆತ್ಮಂದೆಣ್ಣುವ ಬೊಳ್‌ಚ ಈ ಭೂಮಿಕ್ ಎಕ್ಕಾಲೂ ಬಂದಂಡಿಪ್ಪ. ತಂಗಡ ಪೆರಿಯ ಕಾರಣೋವಂಗ ತೊಲ್ಯಾರ್ ಚಂಗ್ರಾಂದಿಕ್ ಬಂದಿತ್, ಪತ್ತ್ ನಾಳ್ ಪತ್ತಲೋದಿಕಾಕಯಿಯೂ ಅಯಿಂಡಯಿಂಡ ಎಳಿಯಯಿಂಡ ತಡಿ, ಮನಸ್ಸ್, ಆತ್ಮತ್ ಇಪ್ಪಾಂದ್ ಕೊಡವ ನಂಬುವ. ದೇವಳೂ ಕೂಡಿ ಪೆರಿಯ ಕಾರಣೋವಂಗಡ ಆಶೀರ್ವಾದ ಪಡಂದವುಂಡೂಂದೇ ಎಂಗಕ್ ಪುರಾಣತ್ ಎಣ್ಣುವ! ಆದ್ಯಾತ್ಮ ವಿದ್ಯಕ್ ಸಂಮಂದ ಪಟ್ಟನಕೆ ಎಡ್‌ತಂಡಕ ಈ ಪ್ರಪಂಚತ್ ಮಾಲವಂಗಕುಳ್ಳ ತರಾವರಿ ತೊಂದರೆಕ್ ಕಾರಣ 1. ಗ್ರಹ ಪ್ರಭಾವ 2. ನಂಗಳ ಬುಟ್ಟಿತ್ತ್ ಪೋನ ಎಂಗಡ ಪೆರಿಯಯಿಂಡ ಆತ್ಮ, ಸೆರಿಯಾನ ಕೊಡವ ಪಾಜೆಲ್ ಎಣ್ಣೋಂಡುಪೇಂಗಿ 'ಕಾರಣವೊ'ಂಡ ಪ್ರಭಾವ. ಇದ್ ದಂಡಾಲ್ ಕೊಡವಡಲ್ಲಿ ಆದ್ಯ ಸ್ಥಾನ 'ಕಾರಣವೊ'ಂಗ್. ಜೀವಶಾಸ್ತ್ರತ್ ಎಂಗಡ ಪೆರಿಯ ಸಂತಾನತ್‌ರ– ಚೋರೆ ಎಳಿಯ ಸಂತಾನತ್‌ರ DNAಕ್ ಕೂಡಿತಿಪ್ಪ. ಕೊಡವ ಸಂತಾನ ಏದ್‌ಲೇಂದ್ ಪರಿವಾಂಬಂಜ, ಚೋರೆ ಏದ್‌ಲೇಂದ್ ಕೇಪ. ಮಂಗಲ ಕಯಿಪಕ ಚೋರೆ ನೋಟಿತ್ ಮಂಗಲ ಕೈಕೊಂಡೂಂದ್ ಎಣ್ಣುವ. ಇದ್‌ಲ್ ವೈಜ್ಞಾನಿಕತೆಯೂ ಉಂಡ್‌ಲೆಂದೆಣ್ಣುವದ್ ನಾಡ ಅಭಿಪ್ರಾಯ. ಸಂತಾನ–ಚೋರೆ ಏದ್‌ಲೆಂದ್ ನೋಟೂಂಡುವೇಂಗಿ ಇಕ್ಕತ ವಿಜ್ಞಾನ DNA Test ಮಾಡುವ. ಪೆರಿಯ ಸಂತಾನ ಚತ್ತ್‌ಪೋಯಿತುಂಡೆಂಗಿಯೂ ಅಯಿಂಡ ಚೋರೆಕ್ ಪುಟ್ಟ್‌ನ ಎಂಗಡಲ್ಲಿ ಪೆರಿಯಯಿಂಡ ಚೋರೆ ಉಂಡಲ್ಲಾ! ಅದ್‌ಂಗ್. ನಂಗ ಎಳಿಯವು ಕುಂಬ್‌ಡೊಂಡುವಲ್ಲ. ಕೊಡವ ವಕ್ಕತ್‌ರ ಕಾರಣೊವೊ ಪಿತೃಲೋಕತಿಪ್ಪ. ಆ ಪಿತೃಲೋಕವೇ ಶಂಬುಶಿವ ದೇವಂಡ ನೆತ್ತಿ ಕಣ್ಣ್ ಚೂರಿಯ ಲೋಕ ವ್ಯನುಂತ. ಚೂರಿಯ ದೇವನೇ ಕೊಡವ ವಕ್ಕಡ ಎಲ್ಲಾ ಪಿತೃವಕ್ ಕಾರಣವೊ

ಕೊಡವಡೆಲ್ಲಾ ವಕ್ಕತ್‌ರ ಪಿತೃವಡ ರಾಜ–ಚೂರಿಯ ದೇವ. ನಂಗಡ 64 Generation ರಚ್ಚೆಕ್ಕ್ ಪೆರಿಯ ಸಂತಾನ ನಂಗಕ್ ಪಣಕಾಸ್‌ರ ವಿಷಯತೂ, ಆರೋಗ್ಯ ಬಾಗಿಯತೂ, ಮಕ್ಕಮರಿ ಸಂತಾನ ಆಪಕ್ಕೂ, ಈ ಭೂಮಿಲ್ ಚಾಯೋಡೆ ಬಾಳೋಕ್ಕೊ ಸಾಯ ಮಾಡುವಾಂದ್ ಕೊಡವ ನಂಬುವ. ಕೊಡವೇತರಂಗ ಕರ್ತಬಾವುಲ್ "ಮಹಾಲಯ ಅಮವಾಸ್ಯೆ"ಲ್ ಪೆರಿಯಯಿಂಗಕ್ ಮೀದಿ ನೀರ್ ಬೆಪ್ಪ. ಕೊಡವ ಸೌರಮಾನ ಆದಾರತ್ ಎಲ್ಲಾ ಕಣ್‌ಕ್ ಕೂಟುವಯಿಂಗಳೂ, ನಮ್ಮೆ, ನಾಳ್ ಸೌರಮಾನ ಆದಾರತ್‌ಲೇ ಮಾಡುವಯಿಂಗ ಆನಗೊಂಡ್ ಜಲರೂಪಿಣಿಯಾನ ಕಾವೇರಿ ತಾಯಿ ಕುಲದೇವತೆಯಾನನುಂಡ್, ವಾಯು ಮಂಡಲವಾನ ಶುಕ್ರ ಸ್ಥಾನಕ್ ಚೂರಿಯ ಪೊಟ್ಟ್‌ಡ್‌ವ ತೊಲ್ಯಾರ್ ಚಂಗ್ರಾಂದಿಲ್ ಕಾವೇರಿ ಕುಳಿಪಂಜಿ ಪಿತ್ಯಾಂದ್ ಕಣಿಮೂಜುವಂಜಿ, ಕಣಿಕ್ ಅಕ್ಕಿ ಇಟ್ಟಿತ್ತ್ ಕಣಿರ ಕಾಲ್ ಪುಡ್‌ಚಿತ್, ತಂಗಡ ಪೆರಿಯಯಿಂಡ ಕಾಲ್ ಪುಡಿಪೊ. ಕುಲದೇವಿ ಕಾವೇರಿ ಮಾತೆ ಪ್ರತಿಯೋರ್ ಕೊಡವ ವಕ್ಕಕೂ, 'ಕಣಿ' ರೂಪತ್ತ್ ದರ್ಶನ ತಪ್ಪಾಂದ್ ಕೊಡವ ನಂಬುವ. 'ಕಣಿ' ಎಣ್ಣಕ ಸಾಕ್ಷಾತ್, ಕಾವೇರಿ ಮಾತೇಂದ್ ಅರ್ಥ. ವಕ್ಕತ್‌ರ ಪಟ್ಟೆದಾರ ಅಲ್ಲೇಂಗಿ ಎಲ್ಲಾರ್‌ಕಂಜ ಪೆರಿಯಂವೊ ಕನ್ನಿಕಂಬ್‌ರ ಕಾಲ್ ಪುಡಿಪ. ಕನ್ನಿಕಂಬವೇ ಕೊಡವಕ್ ಕಾರಣವೋಂಗ್ ಸಮ! ತೊಲ್ಯಾರ್ ಚಂಗ್ರಾಂದಿಲ್ 7 ಕೋಟಿ ತೀರ್ಥ ಬ್ರಹ್ಮಕುಂಡಿಕೆಲ್ ಪೊಕ್ಕಿ, ಪೊಕ್ಕಿ ಮರಿಯೊಂಡೂಂದ್ ಬ್ರಹ್ಮ ವರ ಕೇಟಿತ್, ಪೂಮ್ಮಾಲೆ ಕೊಡವು ದೇಶಕ್ ಕಾವೇರಿ ತೀರ್ಥ ನೇಡಿ ತಂದ, ಕೊಡವಡ ಗುರುವಾನ ಸಿದ್ದಂಗಡತ್ ಸಿದ್ಧ ಪುರುಷ, ಈ ಕಲಿಯುಗತ್ ನಕ್ಷತ್ರಲೋಗತ್ 53 ಡಿಗ್ರಿ ಭೂಮಿರ ಬಡ್‌ಕ್ ದಿಕ್ಕ್‌ಲ್ ನಕ್ಷತ್ರವಾಯಿತ್ ಮಿನ್ನಿಯಂಡುಳ್ಳ- 0.72. ಅಗಸ್ತ್ಯ ನಕ್ಷತ್ರ ಆಸ್ಟ್ರೇಲಿಯಾ ದೇಶಕ್ ಕಾಂಬ. ಮೀನ್ಯತ್ 23½ ಡಿಗ್ರಿ ತೆಕ್ಕ್‌ಕ್ ಭೂಮಿ (tilt) ಬಡಿಮರಿಪೊಕಲೂ, ಉತ್ತರಾರ್ದತುಳ್ಳ ನಂಗಕ್ ಪೋಲ್ ಅಗಸ್ತ್ಯನಕ್ಷತ್ರ ಕಾಂಗೊಲುಂದಾಚೆಂಗಿಯೂ ಚೂರಿಯ ಬೊಳಿಲ್ ಕಾಂಬದ್ ಕಷ್ಟ.

ಪತ್ತಲೋದಿಕ್ ವಕ್ಕಡ ಸಾಲ್ ಸಂತಾನ ಎಲ್ಲಾ ಕೂಡಿತ್ತ್ ಮೀದಿ ನೀರ್ ಬೆಪ್ಪ ಪದ್ಧತಿ ಇಂದೂ ಉಂಡ್. ತಾಮನೆ ಮೂಡಿಯ ಅಯಿಂಡಯಿಂಡ ತಾಮನೆಕ್ ಪತ್ತಲೊದಿರೊಳ್‌ಲ್ ಪೋಯಿತ್ ಕಾರಣವೋಂಗ್ ಅಕ್ಕಿ ಇಟ್ಟಿತ್ ಪೆರಿಯಯಿಂಡ ಕಾಲ್ ಪುಡ್‌ಚಿತ್ ಬಪ್ಪ. ಚೂರಿಯಂಡ ಸುತ್ತು ಭೂಮಿತಾಯಿ ಸುತ್ತುವ ಕ್ರಿಯೆನುಂಡ್ ಬೆದ್, ಮಳೆ, ಕುಳ್‌ರ್, ಕಾಲಋತು ನಂಗ ಕಾಂಬೊ. ಭೂತಾಯಿ ಸುತ್ತುವ ಬಯಿ ಪೋಕ್‌ಲ್ ವಿಷ್ಣುಪರಮಪಾದಂ– ವೈಕುಂಠತ್‌ರ ಪಕ್ಕ ವಾಯುಮಂಡಲವಾನ ತುಲಾರಾಶಿಲ್ ಚೂರಿಯ ಬಪ್ಪ ಕಾಲತ್ ತೊಲ್ಯಾರ್ ಚಂಗ್ರಾಂದಿ ನಡ್‌ಪ! ಕೊಡವಡ

ಕಣ್‌ಕ್‌ಲ್ ಮಾತ್ರ ಅಲ್ಲ, ವೈಜ್ಞಾನಿಕವಾಯಿತೂ ಕೊಡವಡ ಪಿತೃಲೋಕ, ಚೂರಿಯ ಲೋಕತ್‌ರ ಪಡಿರ ಪಕ್ಕ, ಭೂಮಿ ಇಪ್ಪಕ ಅಲ್ಲೇಂಗಿ ಭೂಮಿಲ್ ಚೂರಿಯನಿಪ್ಪಕ ಕಾವೇರಿ ಚಂಗ್ರಾಂದಿ. ವಿಷ್ಣು ಪರಮಪಾದಂ-ವೈಕುಂಠ, ತುಲಾರಾಶಿ-ಮಕರರಾಶಿ ರೊಳ್‌ಲ್ ಉಂಡ್‌ಂದ್ ವೇದ ಎಣ್ಣುವದ್ ಸತ್ಯಾಂದ್ ಖಗೋಳ ವಿಜ್ಞಾನಿಯಳೂ ಎಣ್ಣುವ. ವೇದ ಕಾಲತೂ ತೊಲ್ಯಾರ್ ಚಂಗ್ರಾಂದಿ ಮಹತ್ವಉಳ್ಳದಾಯಿತುಂಡ್. ವೇದ - ಪುರಾಣ ತೊಲ್ಯಾರ್ ಚಂಗ್ರಾಂದಿನ ಪರಿಪದಪುಣ್ಯಕಾಲಾಂದ್ ಎಣ್ಣುವ. ತೊಲ್ಯಾರ್ ಚಂಗ್ರಾಂದಿ ಕಯಿಂಜಿತ್ ಕೃಚಂಗ್ರಾಂದಿ ಕತ್ತಣೆಯೂ ಓರ್‌ತಿಂಗ ಎಲ್ಲಾ ಏಳ್ ತೀರ್ಥವೂ ಕೂಡ್‌ನನಕೆ ಎಲ್ಲಾ ದೇವಾನುದೇವತೆಯಳೂ, ಕೊಡವಡ ಪಿತೃವಳೂ ಭೂಮಿಲ್‌ಪ್ಪಂದೆಣ್ಣುವ ಕೊಡವಡ ನಂಬಿಕೆಕ್ ಒತ್ತನೆಕೆ, ವೈಜ್ಞಾನಿಕವಾಯಿತೂ ಭೂಮಿರ ಚಲನೆಯೂ ಉಳ್ಳದ್ ನಂಗ ಕಾಂಗೊಲು. ಕೊಡವ ಚಂಗ್ರಾಂದಿಕ್ ಮೀದಿ ಬೆಪ್ಪನ ಗುರು ಕಾರಣಂಗ್ ಮೀದಿ ಬೆಪ್ಪೋಂದ್ ಎಣ್ಣುವ. ಏದೇ ಕಾರ್‌ಬಾರ್‌ಕೂ ಮೊಳಿ ಇಡೊಂಡುವೇಂಗಿ ಗುರು- ಕಾರಣನತೊತ್ತಿತ್ತೇ ಆಂಡು. ಗುರುಕ್ಕೇ ಆದ್ಯ ಸ್ಥಾನ. ಗುರು ಆನ ಪಿಂಞ ಕಾರಣವೂ. ಕೊಡವಡ ಕಾರಣೋವಂಗಡ 64 generations, ಅಯಿಂಡ biological relativesಡ ಕೂಡ ಈ ಕೊಡವು ಭೂಮಿಲ್ ಬಂದಿತ್, ತೊಲ್ಯಾರ್ ತಿಂಗ ತೊಡಕ್‌ಂಜ ಬಿರ್ಚ್ಯಾರ್ ತಿಂಗತೊಡಕ್ ಕತ್ತಣೆ ಇಪ್ಪಾಂಡ್ ಕೊಡವ ನಂಬುವ. ಈ ಓರ್ ತಿಂಗ ಕಾವೇರಮ್ಮೆ ತಾಯಿಯೂ ಕೊಡವುಲೇ ಇಪ್ಪಲ್ಲಾ! ನಲ್ಲಂಗೂ, ತೀಯಂಗೂ, ಪೆತ್ತಲ್ಲಿ ಇನ್ನನೆ ಏದೇ ಕಾರ್‌ಬಾರ್‌ಕೂ ಪಟ್ಟಮಳಿ ಕಾಕತೆ, ಹೋಮ ಇಡತೆ, ತಂಗಡ ಪೆರಿಯಯಿಂಗಳ ಮಿಂಞಲ್ ನಿಪ್ಪಿಚಿಟ್ಟಂಡ್, ಗುರು ಕಾರಣನ ತೊತ್ತಿತ್ ಕಾರ್‌ಬಾರ್ ಮಾಡುವ ಕೊಡವ, ಪಂಡ್ ಕಾವೇರಿಲ್ ಪೋಯಿತ್ "ಪಿಂಡಪ್ರದಾನ" ಮಾಡುವಯಿಂಜಿಲೆ. ಕಾವೇರಿಲ್ ಮುಂಜಿತ್ 'ಸ್ವಾಧಾ'ಂದೆಣ್ಣಿತ್, ತಂಗಡ ಪಿತೃವಳ ಗ್ಯಾನಮಾಡಿತ್ ಅಂಗ್ಯೆಲ್ ನೀರ್‌ನ ಬುಟ್ಟಿತ್ ಬಪ್ಪಯಿಂಜತ್. ಕೊಡವಕ್ ಕಾವೇರಮ್ಮೆರ ಇದೋರ್ ಬಲ್ಯೆ ಆರ-ಆಶೀರ್ವಾದಾಂದ್ ನಾಡಪ್ಪ ಕೋಟ್ರಮಾಡ ಗಪ್ಪು ಗಣಪತಿ ಎಣ್ಣುವಯಿಂಜತ್. ಇದ್ ಋಗ್‌ವೇದತ್ ಪಂಚಮಹಾಯಜ್ಞತ್ ಒಂದಾನ ಪಿತೃಯಜ್ಞಕ್ ಸಂಮಂದ ಪಟ್ಟದಾಯಿತುಂಡ್. ಪಿತೃಯಜ್ಞ ಇಚ್ಚಕತೇ ಸಮಾಪ್ತಿಯಾಪಾಂದ್ ಋಗ್‌ವೇದ ಎಣ್ಣುವ. ಪಿತೃಯಜ್ಞತ್, ಪವಿತ್ರಜಲತ್‌ನ. ಗೊಜ್ಜೆಕೆಡ್‌ತತೆ, ರಕ್ಷಣೆ ಮಾಡುವ ವೈಜ್ಞಾನಿಕಥೆಯೂ ಉಂಡ್‌ಂದ್ ಖಂಡಿತ ಎಣ್ಣೊಲು. ತೊಲ್ಯಾರ್ ಚಂಗ್ರಾಂದಿ ಸಮಯತ್ ಗುರು-ಕಾರಣಂಗ್ ಮೀದಿ ನೀರ್ ಬೆಚ್ಚಕ ಪಾಕ್-ಶಾಪ ಕಟ್ಟುಲೇಂದೂ ಕೊಡವ ನಂಬುವ. ಈ ಪವಿತ್ರ ಭೂಮಿಲ್ ಪೆರಿಯ ಕಾರಣವೋಂಗಕ್ ತೃಪ್ತಿಯಾಪನಕೆ ಮೀದಿ ನೀರ್

ಬೆಚ್ಚ ರಾಜಂಗಡತ್ ಶ್ರೀ ರಾಮ, ಶ್ರೀ ಕೃಷ್ಣ ಕೂಡಿತುಂಡ್. ಮಾಋಷಿಯಡತ್ ವಶಿಷ್ಠಮಹರ್ಷಿ, ಸಿದ್ದ ಪುರುಷಂಗಡತ್ ಅಗಸ್ತ್ಯಮಾಮುನಿಯೂ ಕೂಡುವ. ಅಗೆ, ಬೊಳ್, ಕೈಲ್‌ಪೋಳ್ದ್, ಪುತ್ತರಿಪೋಳ್ದ್, ನಮ್ಮೆ ನಾಳ್, ಮಂಗಲ ತೀಕೆಲೂ ನೆಲ್ಲಕ್ಕಿಕ್ ಬೊಳ್ಚ ಬೆಚ್ಚಿತ್ತೇ ಆಂಡು- ಚೂರಿಯಂಗಕ್ಕಿ ಇಟ್ಟಿತ್ತೇ ಆಂಡು ಕೊಡವಕ್. ಎಲ್ಲಾ ಕಾರ್‌ಬಾರ್ ನೆಲ್ಲಕ್ಕಿರಡಿಲೇ! ಅಗ್ನಿರಡಿಲೇ ಎಲ್ಲಾ ಕಾರ್‌ಬಾರ್! ಅಗ್ನಿರ ಅವತಾರ ಪುರುಷನಾನ ಅಗಸ್ತ್ಯಮಾಮುನಿಕ್ ಪೊಮ್ಮಾಲೆ ಕೊಡವು ಮಣ್ಣ್‌ಲ್ ಕೊಡವಡ ಗುರುವಾಯಿತ್ ಆದ್ಯಸ್ಥಾನ ಕೊಡ್‌ತ ಚಿಸ್ಟೆ ಇದ್! ಸ್ಕಂದ ಪುರಾಣತ್ ಕವೇರ ಮುನಿ ಕೊಡವಡ ಗುರುಂದೆಣ್ಣುವ. ಕವೇರ ಎಣ್ಣಚೇಂಗಿಯೂ ಅಗ್ನಿಂದೇ ಅರ್ಥ. ಚಂದ್ರವಂಶಕಾರಳಾನ ಕೊಡವ ಚಣ್ಣೂರಂಗ್ ಪ್ರೀಯವಾನ ಬೊಳ್‌ತ ಅಕ್ಕಿನ ನಲ್ಲ ಕಾರ್‌ಬಾರ್‌ಲೂ, ಚತ್ತಲ್ಲಿ ಮಂಜಮೇಕ್‌ನ ಅಕ್ಕಿನ ಬಳಸುವ. ಚಾಂದ್‌ಕಿಂಜ ಪವಿತ್ರ ಸ್ಥಾನ ಮಾವಿಷ್ಟು ಕೊದಿಪ ಮಂಜಕುಂಡ್. ಜೀವಉಳ್ಳ ನರಮನುಷ್ಯಂಗ್ ಮಂಜ ಬಳಸುಲೆ ಕೊಡವ! ದೇವಳ ಕುಳಿಪಿಚಿಡುವ ಮಂಜತ್‌ನ, ಪಿತೃಲೋಕಕ್ ಪೊರಡುವಕ – ಸ್ವರ್ಗಕ್ ಪೋಪ ಮಾಲವಂಡ ತಡಿಕ್ ಮಾತ್ರ ಬಳಸುವೊ! ಚತ್ತ್‌ಪೋನ ಮನುಷ್ಯ ದೇವಕ್ ಸಮ ಎಣ್ಣುವ ನಂಬಿಕೆ ಉಂಡ್ ಕೊಡವಡಲ್ಲಿ. ಚಾವುನ ಎಲ್ಲಾರೂ ತೊಡುವಕ ಚತ್ತವಂಗೆನ್ನೇಂಗಿ ಕಾಯಿಲ ಉಂಡೇಂಗಿ ತೊಟ್ಟಯಿಂಗಕ್ ಆ ಕಾಯಿಲ ಬರತಾಡ್‌ಂದೆಣ್ಣುವ ವೈಜ್ಞಾನಿಕತೆಯೂ ಇಲ್ಲಿ ಉಂಡ್. ಇದೇ ಉದ್ದೇಶವೊ ಎನ್ನೊ ಮಂಗಲಕಾರ- ಮಂಗಲಕಾರ್ತಿಕ್ ತೇರಣಿಇಡುವ! ಕೊಡವ, ಕೊಡವ ವಕ್ಕತ್ ಒಮ್ಮ ಪುಟ್ಟ್‌ನ ಪಿಂಞ ಅಂವೊ ಆ ವಕ್ಕತ್‌ರ ಸದಸ್ಯ. ಅಂವೊ ಚತ್ತಕಲೂ ಅವಂಡ ಸದಸ್ಯತ್ವ lapse ಆಪುಲೆ–ಚತ್ತಪಿಂಞ ಅಂವೊ ಕಾರಣವೊನಾಪ. ಪೊಣ್ಣಾಳಾಚೆಂಗಿ ಕಾರಣಿಚ್ಚಿ. ಮನೆನ ನಂದ್ ಮಾಡುವ ಪೊಣ್ಣ್‌ನ ಕೊಂಡಾಪ ಮಂಗಲ, ಅಮೃತ ಸಮಾನವಾನ ನೆಲ್ಲ್ –ಕದ್‌ಮನೆಕ್ ಕೊಂಡಾಪ. ಪುತ್ತರಿಪೋಳ್ದ್ –ಚಣ್ಣೂರಂಗ್ ಬಲ ಇಪ್ಪ ಬೈಟ್ ನೇರತ್! ನಕ್ಷತ್ರ ದರ್ಶನ ಆಪ ಕಾಲತ್! ಪುದಿಯ ಪುತ್ತಂಗಾರ- ಪುತ್ತಂಗಾರ್ತಿ ಧ್ರುವ–ಅರುಂದತೀ ನಕ್ಷತ್ರ ದರ್ಶನ ಮಾಡೊಂಡೂಂದೂ, ಆ ದಂಡ್ ನಕ್ಷತ್ರ ದರ್ಶನ ಮಾಡ್‌ನಕ, ವಡಿಯ ಪೊಣ್ಣಾಯಿತ್ ಅವು ಧರ್ಮತ್, ಒತ್ತೊರ್ಮೆಲ್ ಈ ಭೂಮಿಲ್ ಬಾಳಿತ್, ಈ ಭೂಮಿರ ಪುನರ್‌ಸೃಷ್ಟಿಕೂ ಸಾಯ ಮಾಡುವಾಂದೆಣ್ಣುವ ನಂಬಿಕೆ ಉಂಡ್ ಕೊಡವಡಲ್ಲಿ. ಋಗ್‌ವೇದವೂ ಇದ್‌ನ್ನೇ ಎಣ್ಣುವ. ಮಂಗಲಕರ್ಮತ್ ಮೂಡಿರ ಕೈಪುಡ್‌ಚಿ ಕ್‌ಣ್ಣ ಎಪ್ಪುವದೇ ಪ್ರಾಣಿಗ್ರಹಣ. ಪುರಾಣತ್, ಪಂಡ್ ನೀರ್‌ಕ್ ಬುದ್ದ ದೇವಯಾನಿನ ಕೈಪುಡಿಚಿ ಕರೆಪತ್ತ್‌ಚಿಟ್ಟಿತ್ ಸಾಯಮಾಡ್‌ನ ಕುರುವಂಶ ಆದಿಪುರುಷ ಯಾಯಾತಿ

ರಾಜ ಶರ್ಮಿಷ್ಠೆನ ಇಷ್ಟ ಇಂಜತೆಂಗಿಯೂ, ಕೈಮುಡಿಚ ತಪ್ಪುಕ್ ದೇವಯಾನಿನ ಮಂಗಲ ಕೈಕಂಡಿಯಾಪ. ಮೊಮ್ಮೂರ್ತ ಆಯಿತ್ ಚಾಣ– ನೀರ್ ಕಯಿಚ ಪಿಂಞ ಮೂಡಿನ ಅಮ್ಮಿಕಲ್ಲ್‌ಲ್ ಅಳ್‌ಪಿಚಿಡುವದ್ ಕೊಡವಡ ಪದ್ಧತಿ. ಕಲ್ಲ್‌ರನಕೆ ಸ್ಥಿರವಾಯಿತೂ, ಗಟ್ಟಿಯಾಯಿತೂ ಮಂಗಲಕಯ್ಯುವವ ಇರಂಡೂಂದ್ ಇದ್‌ಂಡ ಅರ್ಥ. ಈ ಪದ್ದತಿನ ಋಗ್‌ವೇದ ಅಶ್ಮಾರೋಪಣಂದೆಣ್ಣುವ. ಇದ್‌ನೆಲ್ಲಾ ಅಧ್ಯಯನ ಮಾಡಿತ್ತ್ ಸಂಶೋದನೆ ಮಾಡ್‌ನಕ್ಕ ಕೊಡವಡ ಆಚಾರ ವೇದ ಕಾಲಕ್ ಸಂಮಂದ ಪಟ್ಟದಾಯಿತುಂಡ್‌ಂದ್ ಎಣ್ಣೂಲು. ಇಂಞ ಮುತ್ತರಿಲ್ ಬಿಚ್ಯಾರ್ ತಿಂಗತ ಚಣ್ಣೂರ–ಬೊಳ್ತ ಬಾವುಡ ಚಣ್ಣೂರ, ಕಾಲಗತಿನ ಗುರ್ತ್ ಮಾಡುವ ಚಣ್ಣೂರ, ಮೋಡ ಇಲ್ಲತೆ ನೀಲಕೊಡಿ ಮೋಳ್‌ಲ್ ರೋಹಿಣಿ ನಕ್ಷತ್ರತ್ ಎಲಂಗುವ ಚಣ್ಣೂರಂಡ ತಣ್‌ತಕಾತ್ ಬೀಜುವ ಸಮಯತ್ ದರ್ಶನ ಮಾಡ್ವದ್ ಬರ್‌ಕತ್ತ್‌ಂದ್ ಕೊಡವ ನಂಬುವ.

ಕೊಡವಡ ಕುಳಿಯಕಲ್ಲ್, ಜ್ಯೋತಿಷ್ಯಶಾಸ್ತ್ರತ್ ಗುಳಿಗ ಅಲ್ಲೇಂಗಿ ಶನಿರ ಮೋಂವೂ ಮಾಂದಿ, ಚವುಂಡಿಕಲ್ಲ್, ಕಾರಣವೊ ತೆರೆ ಇಪ್ಪದೆಲ್ಲಾ ಪಲ್‌ಚಿ ಮರತ್‌ರಡಿಲ್. ಆ ಪಲ್‌ಚಿ ಮರ ಕೆತ್ತುವಕಯ್ಯ, ಸುತ್ತು ಮುತ್ತು ಕಳ್‌ಪಕಯ್ಯಂದೆಣ್ಣುವ ನಿರ್‌ಕ್ ನಿಯಮ! ಕೂಟ್‌ಕ್ ಎಲ್ಲಾ ಊರ್‌ಲೂ ಉಳ್ಳ ದೇವಕಾಡ್! ಈ ಪ್ರಕೃತಿಲ್ ಮರ –ಕಾಡ್ ಉಳಿಚಿಡುವ, ಬೊಳಿಚಿಡುವ ಪ್ರಯತ್ನ, ತಂಗಡ ಮಿಂಞಕುಳ್ಳ ಪೀಳಿಗೆಕೂ ನಲ್ಲ ಕಾತ್, ನಲ್ಲ ನೀರ್ ಕ್‌ಟ್ಟುವನಕೆ ಮಾಡ್‌ನ ಕೊಡವ ಪೆರಿಯಯಿಂಗಡ ವೈಜ್ಞಾನಿಕ ದೃಷ್ಟಿಕ್ ಕುಂಬ್‌ಡೊಂಡು ಎಂಗ!

ಬ್ರಹ್ಮದೇಶ– ಪೊಮ್ಮಾಲೆ ಕೊಡವುಲ್ ಕೊಡವಡ ಐನ್‌ಮನೆಲ್, ಐನ್‌ಮನೆರ ಮುಂದ್–ಬ್ರಹ್ಮಸ್ಥಾನ ಆಕಾಶ ನೋಟುವನೆಕೆ ತೊರ್‌ಂದಿತ್ ಇಪ್ಪ. ಈ ಬ್ರಹ್ಮಸ್ಥಾನವೆ ಐನ್‌ಮನೆರ ಪವಿತ್ರ ನೆಲೆ. ಬ್ರಹ್ಮಸ್ಥಾನತ್‌ರ ನಾಲ್ ಕಂಬ್‌ಲ್ ತಂಗಡ ಕುಲದೇವಿ ಕಾವೇರಿ ತಾಯಿ ಉಳ್ಳ ದಿಕ್ಕ್‌ಲೇ, ಪವಿತ್ರ ಕನ್ನಿಕಂಬ್. ಕನ್ನಿಕೊಂಬರೆಯೂ ಅದೇ ದಿಕ್ಕ್– ನೈರುತ್ಯ ದಿಕ್ಕ್‌ಲಿಪ್ಪ. ಪುದಿಯದಾಯಿತ್ ಮಂಗಲಾಡಿತ್ ಬಂದ ಮ್ಮೆಮಳ ಆದ್ಯ ಅಳ್‌ಪಿಚಿಡುವದೇ ಕನ್ನಿಕಂಬ್‌ರ ಐಮರತ್. ಅದೇ ಆದಿ, ಅದೇ ಕಡೆ. ಅಂದ್ ಅಳ್‌ತಿತ್ತ್ ಎದ್ದ ಪಿಂಞ ತಿರ್‌ಚಿ ಅವ ಆ ಐಮರತ್ ಅಳ್‌ಪನಕೆ ಇಲ್ಲೆ. ಪಂಡ್ ಮನೆಲೇ ಮಂಗಲ ಕೈಚಂಡಿಪ್ಪಕ ಬ್ರಹ್ಮಸ್ಥಾನತ್ತೇ ಮೊಮ್ಮೂರ್ತ. ಕನ್ನಿ ಕೊಂಬರೆರ ಪಕ್ಕತ ಕೊಂಬರೆ ಪುದಿಯಮಂಗಲ ಕಯಿಂಜಯಿಂಡ ಕೋಂಬರೆ. ವೈಜ್ಞಾನಿಕವಾಯಿತ್ ವಾತಾವರಣತ್‌ರ ಆದಾರತ್‌ರ ಮೇಲೆ, ನೈರುತ್ಯ ಬರಿ ಭೂಮಿ ಉಷ್ಣ ಜಾಸ್ತಿ ಉಳ್ಳದಾಯಿತುಂಡ್ ! ಬ್ರಹ್ಮಸ್ಥಾನತ್‌ರ ಬಡ್‌ಕ್ ಬರಿ, ಕಂಬ ಉಳ್ಳ

ಐಮರತ್ ಚತ್ತ್‌ಯಿನ ಅಳ್‌ಪಿಚಿಡುವ! ಜೀಂವ ಉಳ್ಳ ಮಾಲವಂಗ ಬಡ್‌ಕ್ ದಿಕ್ಕ್ ಕತ್ತ್‌ಟಿ ಮಂಡೆ ಬೆಚ್ಚಿತ್ ಬುದ್ದವುಲೆ. ವೈಜ್ಞಾನಿಕವಾಯಿತೂ ಬಡ್‌ಕ್ ಬರಿ ಮಂಡೆ ಬೆಚ್ಚಿತ್ತ್ ಬುದ್ದವಕ್ಕಾಗಾಂದ್ ಎಣ್ಣುವ. ಐನ್‌ಮನೆರ ಬ್ರಹ್ಮಸ್ಥಾನತ್ ಚೂರಿಯ ಬೊಳಿ ಬೂವ ಕೊಡಿ ಬರಿಯ ಚೆಂಬುರ ಪಾಳೆನ, ಮಚ್ಚಿರ ಸುತ್ತೂ ಮಚ್ಚಿಕೊತ್ತನಕೆ ಅಳ್‌ಪಿಚಿತಿಪ್ಪ. ಭೂಮಿರ ಮ್ಯಾಗ್ನೆಟಿಕ್ ಅಲೆ ಎಞ ಚೂರಿಯಂಡ ಬೊಳಿ – ಸೌರಶಕ್ತಿನ, Copper ಚೆಂಬುರ ಪಾಳೆ ಊತಿಯಂಡ್, ಐನ್‌ಮನೆರ ಬ್ರಹ್ಮಸ್ಥಾನತ್‌ರ ಸುತ್ತು ಪರಟುವ. ಐನ್‌ಮನೆರೊಳ್‌ಲ್ ಇಪ್ಪ ಮಾಲವಂಗಡ ತಡಿ ಈ positive energy ನ ಊತಿಯುವ. ವೈಜ್ಞಾನಿಕವಾಯಿತೂ, ಸುಸೂತ್ರವಾಯಿತ್ ಆರೋಗ್ಯತ್ತ ಜೀವಮಾನ ನಡತೊಂಡುವೇಂಗಿ ಮಾಲವ ಕಾಯಕ್ ಅವಶ್ಯ ಬೋಂಡಿಯದೇ ನೈಸರ್ಗಿಕವಾಯಿತ್ ಕ್‌ಟ್ಟುವ ಈ ಶಕ್ತಿ–ತೇಜಸ್ಸ್–positive energy. ಐನ್‌ಮನೆರ ಮುಂದ್, ಅಲ್ಲೇಂಗಿ ಬ್ರಹ್ಮಸ್ಥಾನತ ಪಕ್ಕತೇ ಕತ್ತ್‌ಚಿಡುವ ನೆಲ್ಲಕ್ಕಿ ಬೊಳ್‌ಚತ್‌ರ ಉಷ್ಣತ್‌ರ ಶಕ್ತಿ–ಭೂಮಿ_ಚೂರಿಯಂಡ positive energy ಕ್ ಇಞೂ ಉಜೋತ್ ಕೂಡುವನೆಕೆ ಮಾಡುವ. ಅನ್ನನೇ ತಲಕಾವೇರಿಲ್ ಕಾವೇರಿ ಪೊರ್‌ಂದ ಚೆರಿಯ ಕೊಳತ್‌ನ/ಕಾವೇರಿ ಕುಂಡಿಕೆನ, ಬ್ರಹ್ಮಕುಂಡಿಕೆಂದೆಣ್ಣುವ. ಬ್ರಹ್ಮವರತಿಂಜ ಅಗಸ್ತ್ಯಮಾಮುನಿ ನೇಡಿತಂದ, ಸೃಷಿಯಾನ ಕಾವೇರಿ ಕುಂಡಿಕೆ– ಬ್ರಹ್ಮಕುಂಡಿಕೆ– ಬ್ರಹ್ಮಸ್ಥಾನ ಆಕಾಶ ನೋಟಿಯಂಡಿಪ್ಪ. ಬ್ರಹ್ಮಕುಂಡಿಕೆನ ಮುಚ್ಚುಲೆ. ಎಣ್ಣಕ ಚೂರಿಯ ಬೊಳಿ ಬ್ರಹ್ಮಕುಂಡಿಕೆನ ನೇರೆ ನೋಟಿಯುಂಡಿಕ್ಕಂಡೂಂದ್ ಅರ್ಥ. ಭೂಗರ್ಭತ್‌ರ ಒಳ್‌ಂಜ ಕಲ್ಲ್‌ರೊಳ್‌ಲ್ ಸೃಷ್ಟಿಯಾನ ಕಾವೇರಿ ಜಲಕ್, ಚೂರಿಯ ಬೊಳಿ ಬುದ್ದಕ ಆ ಕಾವೇರಿ ಜಲತ್‌ರ medicinal value ಕೂಡುವ. ಇನ್ನನೆ ಚೂರಿಯ ಬೊಳಿ ನೇರೆ ಬುದ್ದ, ನೈಸರ್ಗಿಕವಾಯಿತ್ ಕ್‌ಟ್ಟುವ ಪವಿತ್ರ ಕಾವೇರಿ ಜಲ ಕುಡ್‌ಚ ಮಾಲವಂಗಡ ಕಾಯಕ್ ಕಾಯಿಲೆ ಬಪ್ಪುಲೇಂದ್ ಕೊಡವ ನಂಬುವ. ಇದ್ ವೈಜ್ಞಾನಿಕ ಸತ್ಯವೂ ಅಕ್ಕು. ಇಂಞ ಈ ಮಾಲವಂಗಡ ಕಾಯ, ಸ್ಥೂಲಶರೀರತ್‌ರ ವಿಷಯಕ್ ಬಾತೆಂಗಿ ಮಣಿಪುರ ಚಕ್ರವುಳ್ಳ ನಂಗಡ ಪೊಕ್ಕ್‌ನ ಬ್ರಹ್ಮಸ್ಥಾನಂದೆಣ್ಣುವ. ಅಪ್ಪಂಡ ಕೆಲತಿಪ್ಪ ಕುಂಞಿಕ್ ಅವ್ವತಿಂದ ತೀನಿರ ರಸ ಪೊಕ್ಕ್ ಬಳ್ಳಿಕಾಯಿತ್ ಪೋಯಿತ್ ಕುಂಞಿಕ್ ಊಟುವ. ಪಿಂಡಕ್ ಜೀವ ಕೊಡ್‌ಪದೇ ಕುಂಞಿರ ಪೊಕ್ಕ್‌ಬಳ್ಳಿ ಅದ್‌ಂಗೇ ಮಾಲವಂಡ ಪೊಕ್ಕ್ ಬಳ್ಳಿನ ಬ್ರಹ್ಮಸ್ಥಾನಂದೆಣ್ಣುವ. ಬ್ರಹ್ಮ ಎಣ್ಣಕ ಸೃಷ್ಟೀಂದ್ ಅರ್ಥ. ಪ್ರಕೃತಿಲ್ – ಪ್ರಕೃತಿಯಾಯಿತ್ ಬದ್‌ಕಿಯಂಡ್ ಬಂದ ಕೊಡವ ಈ ಭೂಮಿಲ್ ಧರ್ಮತ್‌ನ ನೆಲೆ ನಿಪ್ಪಿಚಿಡುವ ಪಡೆಯಾಳಿಯ ವೀರಂಗ– ತಂಗಡ ಕ್‌ಣ್ಣಮಕ್ಕಡ ಪೊಕ್ಕ್‌ನ ಮೋಪ್‌ಕೂಟ ಕೂಡುವ ಮಂದ್– ಕೋಲ್ ಮಂದಲೂ,

ಸೃಷ್ಟಿಕ್ ಕಾರಣಂಗಳಾನ-ಕೂಳ್‌ಬಳಂಬುವ ಮೂಡಿ ಕುಂಞಿಯಡ ಪೊಕ್ಕ್‌ನ ಯಾಕತ್ತೂ ಪೂಪ ಇಂಜತ್. ಕೊಡವಡ ಈ ತರತ ನಂಬಿಕೆ ಆಚರಣೆ ಎಚ್ಚಕೋರ್ ಆಳವಾನ ಅರ್ಥ ಉಳ್ಳದ್‌ೇಂದ್ ಇಲ್ಲಿ ಅರಿಯೊಲು. ರಿವರೆಂಡ್ ಜಿ ರಿಕ್ಟರ್ ಎಣ್ಣುವ ವಿದ್ವಾಂಸ ಐನ್‌ಮನೆರ ಚಾಯಿ ಬೋಜತ್‌ನ, ಅಚಾರಿ ಪಣಿನ ವರ್ಣನೆ ಮಾಡಿಯಂಡ್, ಇನ್ನನೆ ಎಣ್ಣುವ

"Like the principal door posts this aper ture is often very handsomely carved in flowers and figures leaving small open spaces between, just enough to peep through without being seen, a contrivance chiefly for the benefit of the fair kadavaties who are as curious to see and observe visitors"

ವೇದ ಆದಾರಿತ ವಾಸ್ತು ಶಾಸ್ತ್ರತ್ ಇದ್ ದೇವಕಿಂಡಿ–"DIVINE SIGHT" ಎಣ್ಣುವದ್ ಈ ಬ್ರಿಟೀಷ್ ವಿದ್ವಾಂಸಂಗ್ ಗೊತ್ತಿಂಜಿಲ್ಲೇಂದ್ ನಂಗ ಇಲ್ಲಿ ಅರಿಯೊಲು. ಇನ್ನನೆ ಈ ಕೊಡವುಲ್, ಕೊಡವ ತಂಗಕ್ ಕೆಟ್ಟಿಯಂಡ ಐನ್‌ಮನೆಯೂ ಕೂಡಿ, ಆ ಬ್ರಹ್ಮ ಸೃಷ್ಟಿಮಾಡ್‌ನ ಕೊಡವಡ ಕುಲದೇವತೆ ಕಾವೇರಿ ಕುಂಡಿಕೆ ಅಡ್‌ಕ, ವೇದ ಆದಾರಿತ ವಾಸ್ತುಶಾಸ್ತ್ರಪೋಲೆ, ಚೂರಿಯನ ಕೂಟಿ ಈ ಪಂಚಮಹಾಭೂತತ್ರ ಶಕ್ತಿರ ಆದಾರತ್ ಕೆಟ್ಟಿತ್ತ್‌ಂದ್ ಎಣ್ಣುವಾತ್ ಸಂಶಯವೇ ಇಲ್ಲೆ.

ವಾಯುಮಂಡಲತ್ ದಂಡ್ ಮೇಘತ್‌ರ ನಡುಲ್ ತೆಡ್‌ಮಿನ್ನಲ್‌ರ ರೂಪತ್ತ್ ನೀರ್‌ರೊಳ್‌ಲೇ ಅಗ್ನಿ ಸೃಷ್ಟಿಯಾಪನ ಲೆಕ್ಕಕ್ ಎಡ್‌ತವತೆ, ಬರೀ ಮಳೆಯಾಯಿ ಭೂಮಿಕ್ ನೀರ್ ಬೂವಂಡ ಮೇಲೆ ಮಾತ್ರ ಮಾಲವಂಗಡ ದೃಷ್ಠಿ, ನಿಗ ಇಪ್ಪನೆಕೆ ಭೂಮಿಕ್ ಮಳೆ ಪೊಜ್ಜಿತ್ ತಂಪಾನದ್ ನೋಟುವಯಿಂಡ ಕಣ್ಣ್‌ಕೂ, ತಡಿಕೂ ತಂಪಾಪನಕೆ, ಕೊಡವಡ ವಿಶಿಷ್ಟ ಸಂಸ್ಕ್ರತಿ ಆಚಾರ, ವಿಚಾರ ನೋಟುವಯಿಂಡ ಕಣ್ಣ್‌ಕ್ ದುಂಬಾ ಚಾಯಿ. ಕೊಡವ ಸಂಸ್ಕೃತಿರೊಳ್‌ಲುಳ್ಳ ತಿರ್. ಅಗ್ನಿರಚ್ಚರೇ ಪವಿತ್ರ– ಈ ಭೂಮಿರ ಸೃಷ್ಟಿನ, ಜೀವಿಯಳ ನಾಶಮಾಡತೆ ಇಪ್ಪಂತ ನೀತಿ ಉಳ್ಳದ್ ಕೊಡವ ಸಂಸ್ಕ್ರತಿ ಎಣ್ಣುವಾತ್, ಓರ್ ಸಂಶಯವೂ ಇಲ್ಲೆ.

ಕೊಡವಡಲ್ಲಿ ಕ್‌ಣ್ಣಕುಂಞಿ ಪುಟ್ಟ್‌ನಕ ಆವಣಕೆಣ್ಣೆ ಗಿಡತ್‌ರ ಕಡ್ಡಿಲ್ ಚೆರಿಯ ಬಿಲ್ಲ್ ಮಾಡಿತ್ತ್ ಅದೇ ಎಲ್‌ಕಂಡತ್‌ರ ಕೊತ್ತ್‌ಲ್ ಅಂಬ್ ಮಾಡಿತ್ತ್ ಪುಟ್ಟ್‌ನ ಕುಂಞಿರ ಕೈಲ್ ಬೆಪ್ಪ. ಈ ಸಂಧರ್ಭತ್ ನಂಗಕ್ ಈ ಸ್ಲೋಕ ಗ್ಯಾನ ಬಪ್ಪ.

ಪ್ರಣವೋ ದನುಃ ಶರೋಹ್ಯಾತ್ಮಾಬ್ರಹ್ಮತಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ದವ್ಯಂ ಶರವತ್ತನ್ಮಯೋ ಭವೇತ್ . ॥

ಅಕ್ಷರ ಎಣ್ಣಕ ನಾಶ ಆಗತದ್‌ಏಂದ್ ಅರ್ಥ. ಇಲ್ಲಿ ಕೊಡವ ಪ್ರಣವತ್‌ನ ಅಕ್ಷರ ಬ್ರಹ್ಮಾಂದ್ ಗ್ಯಾನ ಮಾಡಿತ್ತ್‌ಏಂದ್ ಎಣ್ಣೊಲು. ರಃ ಬ್ರಹ್ಮಾಂಡ ಎಣ್ಣುವ ಮಾಯಾ ಅಂಡತ್‌ಲುಳ್ಳ ಪ್ರಕೃತಿರ ಪ್ರತಿಯೋರ್ ಅಂಡತ್‌ಲೂ – ಚರಾಚರ ವಸ್ತುಲೂ ದೇವಡ ಅಂಶ ಕಾಂಬ. ಕೊಡವಕ್ ಪ್ರಣವ ಓಂಕಾರ ಅಕ್ಷರ ಬ್ರಹ್ಮವೇ ಬಿಲ್ಲ್ – ಆತ್ಮವೇ ಅಂಬ್. ಬಿಲ್ಲ್‌ಲ್– ಅಂಬ್‌ನ ಮಾರ್‌ಟ್ಟ್ ಬಲ್‌ಚಿತ್ ಗುರಿನೋಟುವ ಮನುಷ್ಯ ತನ್ನ ತಾನ್ ಮರ್‌ಂದಿತ್ ಅಂಬ್– ಬಿಲ್ಲ್‌ಲೇ ತಾಂಡ ಇಡೀ ತಡಿರ ಎಲ್ಲಾ ಶಕ್ತಿ, ಮನಸ್ಸ್‌ನ, ಗುರಿನ ನಟ್ಟಿತ್, ಬೆಚ್ಚವನಕೆ, ಬಾಹ್ಯ ವಿಷಯಕ್ ಮನಸ್ಸ್ ಕೊಡಕತೆ ಇಂದ್ರಿಯತ್‌ನ ಗೆದ್ದಿತ್, ಸತ್ಯ–ದರ್ಮತ್‌ನ ಈ ಭೂಮಿಲ್ ನೆಲೆನಿಪ್ಪ್‌ಚಿಡ್. ಸತ್ಯ ಧರ್ಮವೇ ನೀಡ ಗುರಿಂದೆಣ್ಣುವ ಅರ್ಥಉಂಡ್. ಕೂಟ್‌ಕ್ ಕೊಡವ ಅವಣಕೆಣ್ಣೆ ಮರತ್‌ರ ಎಲಕಂಡ– ಕಡ್ಡಿನೇ ಬಳಸುವ. ಅವಣಕೆಣ್ಣೆ ಎಲ್‌ಕಂಡತ್ ಏದೇ ನಾಡ್‌ಮದ್ದ್‌ನ ಕೆಟ್ಟಿತ್ ಎಚ್ಚದೂರ ಕೊಂಡಪೋನಕಲೂ, ಆ ಮದ್ದ್‌ರ ಬೀರಿಯತ್‌ನ, ಮದ್ದ್‌ರ ಗುಣತ್‌ನ ಅವಣಕೆಣ್ಣೆ ಎಲಕಂಡ ಪಾಳ್ ಮಾಡುಲೆ. ಜೀವಿಯಡ ಜೀವಕ್ ಅವಶ್ಯಕಥೆಯುಳ್ಳ ಮದ್ದ್‌ನ ಅವಣಕೆಣ್ಣೆ ಎಲ್‌ಕಂಡ ಪಾಳ್‌ಮಾಡುಲೆ! ಅಂಬ್‌ಬಿಲ್ಲ್‌ನ, ಮಾರ್‌ಟ್ಟ್ ಬಲಿಪ ಸಮಯತ್ ನೋಟ್‌ನಕ ನಂಗಡ ಕಣ್ಣ್‌ಕ್ಕ್ ಅಂಬ್‌ಬಿಲ್ಲ್ 'ಓಂ' ಕಾರತ್ ಕಾಂಬ. ಪ್ರಣವ ಅಲ್ಲೇಂಗಿ 'ಓಂ' ಕಾರತ್ ನಂಗಡ ಆತ್ಮ ಅಡ್‌ಂಗಿ ತುಂಡ್‌ಏಂದ್ ಅರ್ಥ. ಅವ್ವಂಡ ಗರ್ಭತಿಂಜ ಪೊರಮೆ ಬಂದ ಕುಂಞಿನ ಅವಣಕೆಣ್ಣೆ ಮರತ್‌ರ ಎಲ್‌ಕಂಡ ಬೆಕ್ಕನೆ ಬೆಪ್ಪಾಂದೂ ವಿಜ್ಞಾನ ಎಣ್ಣುವ. ಅವಣಕೆಣ್ಣೆ ಮರತ್‌ರ ಎಲ್‌ಕಂಡ ಇಲ್ಲಿ ವೈದ್ಯೆಂದೂ ಎಣ್ಣೊಲು. ಕೊಡವಡ ಲೆಕ್ಕತ್ ಪ್ರಣವ 'ಓಂ' ಕಾರತ್‌ಲ್ ಉಳ್ಳ– ಅಂಬ್‌ಬಿಲ್ಲೇ ಪ್ರಣವ, ಪ್ರಣವ ಅಲ್ಲೇಂಗಿ 'ಓಂ' ಕಾರವೇ ಕೊಡವಡ ಗೋತ್ರ. ಒಟ್ಟಾರೆ ಎಣ್ಣುವಂಡುವೇಂಗಿ ಕೊಡವ ಭೂಮಿ ಸೃಷ್ಠಿ ಆಪಕ ಪುಟ್ಟ್‌ನವುಂದೂ, ದೇವ ಸಮಾನಾಂದೂ, ಪೊಣ್ಣಾಳ್ ಅಗ್ನಿ ಕನ್ಯೆಯ/ದೇವಕನ್ಯೆಯ. ಪಂಡ್ ಅಂಬ್‌ಬಿಲ್ಲ್ ಒಡಿಕತ್ತಿ ಎಡ್‌ತಂಡ್ ತಿರಿಯಂಡಿಂಜ ಕೊಡವ, ಇಕ್ಕ ಅಂಬ್‌ಬಿಲ್ಲ್‌ರ ಬದ್‌ಲ್ ತೋಕ್, ಕತ್ತಿ ಬಳಸುವ. ನೆಲ್ಲಕ್ಕಿಲ್ ಬೆಪ್ಪ ತೋಕ್– ಕತ್ತಿಕ್ ಪವಿತ್ರ ಸ್ಥಾನ ಉಂಡ್ ಕೊಡವಡಲ್ಲಿ. ಇಂದೆಕೂ, ಪೊಮ್ಮಾಲೆ ಕೊಡವುನ ನಂಗೆಲ್ಲಾ ಅರ್‌ಂಜನಕೆ ಕ್ರೋಡ ದೇಶಾಂದೂ ಎಣ್ಣುವದುಂಡ್. ವೀರ್ಯ ಬಲಉಳ್ಳವು, ಎಲ್ಲಾ ಲಕ್ಷಣ ಉಳ್ಳವು, ಎಲ್ಲಾ ಶಾಸ್ತ್ರ ಅರ್‌ಂಜವು, ಜಾತಕರ್ಮಾದಿ ಸಂಸ್ಕಾರ ಕ್ರಮತ್‌ಲ್

ಸಂಸ್ಕೃತಂಗಾಂದೂ, ಬುದ್ದಿ ಉಳ್ಳಯಿಂಗ, ಅಪ್ಪಂಡ ತಕ್ಕ್ ಮೀರತವು, ಗ್ಯಾನಮಾಡ್‌ನನ ನಡ್‌ತುವವು, ಮೊಳಉದ್ದ ಕತ್ತಿ– ಒಡಿಕತ್ತಿ ಪುಡ್‌ಚಯಿಂಗ, ಗದೆರನಕೆ ರಟ್ಟೆ ಬಲಉಳ್ಳವು, ವಾರಾಹತ್‌ರ ಕೋರೆದಾಡೆರನಕೆ ಬೆರ ಉಳ್ಳಯಿಂಗ, ಕುಂದ್‌ನ ಒಡ್‌ಪವು, ವಜ್ರಾಯುದಕ್ ಸಮವುಳ್ಳ ಮೂಡ್ ಉಳ್ಳವುಂದೆಲ್ಲಾ ಸ್ಕಂದ ಪುರಾಣ ಕೊಡವಡ ಶಕ್ತಿ, ಚಾಯಿ, ಬೋಜತ್‌ನ ಎಣ್ಣುವ. ಎಂತೋ ಒರ್ ಹಿನ್ನಲೆ ಉಳ್ಳಾಂಗೇ ಸ್ಕಂದ ಪುರಾಣತ್ ಕೊಡವಡ ವಿಷಯ ಬಂದಿಯೇಂದ್ ಎಣ್ಣಲು. ಮಾವಿಷ್ಣು ವಾರಪ ಅವತಾರತ್ ಹಿರಣ್ಯಾಕ್ಷನ ಕೊಂದಿತ್ ಭೂಮಿನ ಕೊಡಿಕ್ ಕೊಂಡಬಂದಿತ್ ಆದಿಶೇಷಂಡ ಮಂಡೆರ ಕೊಡಿಲ್ ಬೆಚ್ಚತ್ ಎಣ್ಣುವದ್ ಪುರಾಣ. ವಾರಾಹ ಅವತಾರತ ಶ್ರೀ ಹರಿ ಮಾವಿಷ್ಣುರನಕೆ, ಕ್ರೋಡಾಕಾರ ಉಳ್ಳ ಕೊಡವ ವಾರಾಹ ಅಂಶತ್ ಈ ಭೂಮಿಲ್ ಪುಟ್ಟ್‌ನವುಂದೂ ಈ ಭೂಮಿನ ಸಮತಟ್ಟ್ ಮಾಡಿತ್ತ್ ಬೊಳೆ ಬೊಳತುವಕ್ ಅನೂಕೂಲ ಆಪನೆಕೆ ಮಾಡಿಚೇಂದೂ, ಬ್ರಹ್ಮಋಷಿರ ಆಶೀರ್ವಾದ ಉಳ್ಳ ಮಕ್ಕ ಕೊಡವ– ಆಣ್‌ಕುಂಞೀಯಾಂದೂ ಸ್ಕಂದ ಪುರಾಣತ್ ಕೊಡವಳ ಪಾಡಿ ಪೊಗಳುವ. ಹಿರಾಣ್ಯಕ್ಷನ ಶ್ರೀ ಹರಿ ಕೊಲ್ಲುವ ಸಮಯತ್ ಶ್ರೀ ಹರಿರ ಬೆವರ್‌ಲ್ "ಕುಜ ಗ್ರಹ" ಪುಟ್ಟ್‌ಚೇಂದ್ ಎಣ್ಣುವ. ವಾರಾಹ ಅಂಶತಿಂಜ ಭೂದೇವಿರ ಗರ್ಭತ್ ಪುಟ್ಟ್‌ನವು, ಉತ್ಪತ್ತಿಯಾನವು ಕೊಡವಾಂದೆಣ್ಣಕ, ಕೊಡವ "ಕುಜ ಗ್ರಹ" ಸಮಾನಾಂದ್ ಅರ್ಥ. ಚೋಂದ ರಂಗ್‌ರ ಗ್ರಹಾಂದೇ ಪೆದಪೋನ ಕುಜಗ್ರಹ, ವೇದ ಶಾಸ್ತ್ರತ್ ಕ್ಷತ್ರಿಯ. ಕುಜಗ್ರಹಕ್ ಕೊದಿ ಉಳ್ಳ ಪರ ಪವಳ. ಮಾವಿಷ್ಣುಂದೇ ಎಣ್ಣುವ ಚೂರಿಯದೇವಂಡನಕೆ, ಕುಜಂಗೂ ಚೋಪುರಂಗ್‌ರ ಮುರಿ – ಬಟ್ಟೆ ಇಷ್ಟ. ಕೊಡವ ನಲ್ಲಂಗೂ ತೀಯಂಗೂ ಚೋಪು ತುಣಿ ಬಳಸುವ. ಮಂಗಲ ಕಾರಿಯತ್ ಬರೀ ಚೋಪು ರಂಗೇ. ಮಂಗಲತ್‌ನಂತ ಕಾರ್‌ಬಾರ್‌ಲ್ ಮಂಗಲಕಾರ – ಮಂಗಲಕಾರ್ತಿಯಕ್ ನೆಲ್ಲಕ್ಕಿರಡಿಲ್ ಪೊಮ್ಮಾಲೆ – ಪವಳ ಮಾಲೆ ಇಡುವದೇ ಆದ್ಯತ ಶಾಸ್ತ್ರ. ಮಂಗಲಕಾರ್ತಿ ಮೂಡಿಕ್ ಮೂಡಿರವ್ವ ಆದ್ಯ ಪವಳಮಾಲೆ –ಪೊಮ್ಮಾಲೆ ಇಟ್ಟಿತ್ ಆನಪಿಂಞ, ಪತ್ತಾಕ್ ಕಟ್ಟುವದ್ ವಿಷೇಷ! ಪತ್ತಾಕ್‌ಲೂ ಪವಳ ಇಪ್ಪ. ಮಾವಿಷ್ಣು/ಶೇಷಶಯನಂಡ ಕ್ರೋಡಾಕಾರ ಅಂಶತಿಂಜ ಪುಟ್ಟ್‌ನಾಂಗ್ ಚಿನ್ನ ಎಣ್ಣುವನಕೆ ಕೊಡವತಿಯಡ ಪತ್ತಾಕ್‌ಲ್ ಆದಿಶೇಷಂಡ ಮಂಡೆ ಇಪ್ಪದ್ ಇಂದೂ ಕಾಂಗೊಲು. ಚಂದ್ರವಂಶಕಾರಳಾನ ಕೊಡವಡ ಸಂಪ್ರಾದಾಯಕೊತ್ತ ಪಾಲ್ ಕೊಕ್ಕೆತಾತಿಲೂ ಆದಿಶೇಷಂಡ ಮಂಡೆನ ಕಾಂಗೊಲು. ಇದೆಲ್ಲಾ ಒಂದಂಗೊಂದ್ ಕೊಳಕ್ ಕೊಟ್‌ನನಕೆ ಉಳ್ಳದ್ ಕಾಂಬಕ "The coorgs as they are properly called are the principal tribe of the country

and from time immemorial the lords of the soil" ಒದ್ ರಿವರೆಂಡ್ ಜಿ ರಿಕ್ಟರ್ ಎಣ್ಣುವ ಇಂಗ್ಲೀಷ್ ವಿದ್ವಾಂಸ ಎಣ್ಣ್‌ನದ್ ಸರಿಯಾಯಿತುಂಡ್‌ಂದ್ ಎಣ್ಣೊಲು. ವಿಜ್ಞಾನಿಯಳೂ ಕುಜಗ್ರಹಕ್ ಭೂಮಿರ ಎಲ್ಲಾ ಲಕ್ಷಣ ಉಂಡ್‌ಂದ್ ಪಂಡ್ ಜೀವಿಯ ಅಲ್ಲಿಂಜತಿಕ್ಕೊಂದ್, ಭೂಮಿ ಸೃಷ್ಟಿಯಾಪಕ ಕುಜಗ್ರಹ, ಚಣ್ಣೂರ ಎಲ್ಲಾ ಸೃಷ್ಟಿ ಆಯೇಂದ್ ವಿಜ್ಞಾನಿಯ ಅಭಿಪ್ರಾಯ ಪಡುವ.

ಕೊಡವಡ ಕೈಲ್‌ಪೋಳ್ದ್ ಕೊಡವ ಕ್ಷಾತ್ರಂಗ ಎಣ್ಣುವಾನ ಅರಿಚಿಡುವ. ವನವಾಸ ಕಯಿಂಜಿತ್, ಅಜ್ಞಾತವಾಸಕ್ ಪೊರಡುವ ಸಮಯತ್ ಪಾಂಡವಂಗ ಅಂಬ್‌ಬಿಲ್ಲ್‌ಕೂಟಿ ತಂಗಡ ಎಲ್ಲಾ ಆಯುಧತ್‌ನ ಬನ್ನಿಮರತ್- ಶಮಿವೃಕ್ಷಂದೆಣ್ಣುವ ಸಂಸ್ಕೃತತ್, ದಾರ್‌ಕೂ ಗೊತ್ತಾಕತನಕೆ ಕೆಟ್ಟಿ ಬೆಚ್ಚಿತ್ತ್, ಅಜ್ಞಾತವಾಸ ಕಯಿಂಜನಕೆ, ಬನ್ನಿಮರತ್ ಕೆಟ್ಟಿ ಬೆಚ್ಚ ಆಯುಧತ್‌ನ ಎಡ್‌ತಂಡ್, ವಾರಾಂಡ್ ಬೆಚ್ಚ ಆಯುಧಕ್ ಪೋಳ್ದ್ ಮಾಡಿತ್ತ್, ಈ ಭೂಮಿಲ್ ಅಧರ್ಮಿಯಳಾನ ಕೌರವಂಗಳ ನಾಶಮಾಡುವಕ್ ಆಯುಧತ್‌ನ ತೀಟಿತ್ತ್- ಊಟಿತ್ತ್ ಅಣ್‌ಂಜ ನಾಳ್, ಚಿಜ್ಜರ್ ಪದ್‌ನೆಟ್ಟ್‌ಂದ್ ಕೊಡವ ನಂಬುವ. ತಂಗಡ ಪೆರಿಯ ಕಾರಣವೊ-ಪಾಂಡವ ಸಂತಾನ ಅರ್ಜುನ, ಅಧರ್ಮತ್‌ರ ವಿರೋದವಾಯಿತ್ ಪಡೆಕ್ ಅಣ್‌ಂಜ ನಾಳ್‌ರ ಚಿನ್ಹೆಯಾಯಿತ್, ಕೊಡವ ಚಿಜ್ಜರ್ ಪದ್‌ನೆಟ್ಟಾಂಗ್ ಕೈಲ್‌ಪೋಳ್ದ್ ಮಾಡುವ. ಸೌರಮಾನ ಕಣ್‌ಕ್‌ಲ್, ಚಿಜ್ಜರ್ ತಿಂಗತ್ ಚಣ್ಣೂರ ರೋಹಿಣಿ ನಕ್ಷತ್ರತಿಪ್ಪಕ ಶ್ರೀಕೃಷ್ಣ ಪೊರ್‌ಂದ ನಾಳ್‌ನ ಆಚರಣೆ ಮಾಡುವ ಪದ್ಧತಿ ಉಂಡ್. ಚಿಜ್ಜತ್ ಚೂರಿಯ ದೇವ ಚೂರಿಯಾದಿಪತ್ಯ ಉಳ್ಳ ಸಿಂಹರಾಶಿಲ್ ಇಪ್ಪದ್ ಇಂಙೋರ್ ವಿಷೇಷ! ಮಾವಿಷ್ಣುರ ಎಟ್ಟನೇ ಅವತಾರಂದೆಣ್ಣುವ ಶ್ರೀಕೃಷ್ಣ, ಚಿಜ್ಜರ್ ಪದ್‌ನೆಟ್ಟಾಂಗ್- ಶ್ರಾವಣ ಮಾಸ, ಕೃಷ್ಣಪಕ್ಷ, ಅಷ್ಟಮಿತಿಥಿ, ರೋಹಿಣಿ ನಕ್ಷತ್ರತ್ ಚಣ್ಣೂರನಿಪ್ಪಕ, ಚೂರಿಯುದೇವ ಚೂರಿಯಾದಿಪತ್ಯಯುಳ್ಳ ಸಿಂಹರಾಶಿಲಿಪ್ಪಕ, ಪುಟ್ಟಿಯೇಂದ್ ವ್ಯಾಸಭಾರತ ಎಣ್ಣುವ. ಪಾಂಡವ ಪ್ರೀಯ ಶ್ರೀಕೃಷ್ಣ ಪೊರಂದ ನಾಳೂ, ಅರ್ಜುನ ಈ ಭೂಮಿಲ್ ಅಧರ್ಮಿಯಡ ವಿರೋದ ಪಡೆಕ್ ಆಯುಧತ್‌ನ ಅಣ್‌ಂಜ ನಾಳೂ ಆನ ಚಿಜ್ಜರ್ ಪದ್‌ನೆಟ್ಟ್ ಕೊಡವಡ ಕೈಲ್‌ಪೋಳ್ದ್. ಪಾಂಡವಂಗಡ ಸಂತಾನ ಕೊಡವ ಈ ಭೂಮಿಲ್ ಧರ್ಮತ್ನ ನೆಲೆನಿಪ್ಪಿಚಿಡುವವು, ಪ್ರಕೃತಿನ ಪೋತುವವು, ಅಧರ್ಮತ್‌ರ ವಿರೋದ ಪಡೆ ಪೊಪ್ಪವೊಂದ್ ಕೈಲ್‌ಪೋಳ್ದ್‌ರ ಅರ್ಥ. ಈಂಗ್ ಕೊಳ್‌ಕ್ ಕೂಟ್‌ನನಕೆ ಕೈಯಿಂದಿರ ಅಪ್ಪಯ್ಯಂಡ ಆಸ್ತಿ ವಿರಾಟರಾಜಂಡ ಆಸ್ತೀಂದ್ ಪುರಾಣ ಎಣ್ಣುವ. ಅರಪಟ್ಟ್‌ಗ್ರಾಮತ್. ಇಕ್ಕ ಅದೇ ಆಸ್ತಿಲ್ ಬಿದ್ದೇರಿಯಂಡಯಿಂಗ ಉಂಡ್.

'ಅ' ಕಾರ, 'ಉ' ಕಾರ, 'ಮ'ಕಾರ ಕೂಡ್‌ನ ಶಬ್ದ ಓಂಕಾರ. ಇದೇ ಸದ್ದ್

ಪ್ರಪಂಚತ್ ಕೇಟ ಆದ್ಯ ಸದ್ದ್- ಇದೇ ಆದ್ಯ ಬೀಜಮಂತ್ರವೂ ಆಯಿತುಂಡ್. ಅಕ್ಷರತ್ ನಾನ್ 'ಅ'ಕಾರಂದ್ ಶ್ರೀ ಕೃಷ್ಣ ಭಗವದ್ಗೀತೆಲ್ ಎಣ್ಣುವ. "ಓಂ"ಕಾರತ್ 'ಅ'ಕಾರ ಎನ್ನನೆ ಪ್ರಪಂಚತ್‌ರ ಆದಿಯೋ ಅನ್ನನೆ ಕೃಷಿ ಕೊಡವಡ ಆದ್ಯ ಕಸ್‌ಬ್. ಕರ್ಷಕ ಭೂಮಿಲ್ ಬೊಳೆ ಬೊಳ್‌ತಿಲ್ಲೇಂಗಿ ಮಾಲವಂಗಡ ಅನ್ನಮಯ ಕೋಶಕ್ ಕೂಳ್ ಇಲ್ಲೇಂಗಿ ಜೀವಿಯು ಉಳಿವದುಂಡಾ? ವೇದತ್‌ಲ್ "ಅನ್ನವ್ ಬ್ರಹ್ಮಾಂ"ದೆಣ್ಣುವ ಚೊಲ್ಲ್ಂಡ್. ವಕ್ಕ-ಮಕ್ಕಳಾಯಿ, ಕೂಡ್ ಕುಟುಂಬವಾಯಿ ಬ್ರಹ್ಮ ಸಮಾನ ಕದ್- ನೆಲ್ಲ್‌ನ ಮನೆಕ್ ಕೊಂಡಾಪ- ಕೊಂಡಾಟತ್‌ರ ಪೋಳ್ದೇ, ಕೊಡವಡ ಪುತ್ತರಿಪೋಳ್ದ್. ಪುತ್ತರಿಪೋಳ್ದೂ ,ಭೂಮಿ, ಚೂರಿಯ, ಚಣ್ಣೂರಂಗಡ ಚಲನೆ ನಕ್ಷತ್ರ ಆದಾರತೇ ನಡ್‌ಪ. ಬಿಬ್ರ್ಯಾರ್ ತಿಂಗತ ಬೊಳ್‌ತ ಬಾವುಲ್,

ಚೂರಿಯ ದೇಬಂಡ- ಜನ್ಮನಕ್ಷತ್ರ ಕೃತಿಕಾ ನಕ್ಷತ್ರತ್, ಪೋಳ್ದ್ ಶುರು ಆಪ. ಶ್ರೀಮನ್ನಾರಾಯಣಂಡ ಎಟ್ಟನೇ ಅವತಾರಂದೆಣ್ಣುವ ಶ್ರೀಕೃಷ್ಣ ಪರಮಾತ್ಮಂಡ ಜನ್ಮ ನಕ್ಷತ್ರ, ಚಂದ್ರ ನಕ್ಷತ್ರ, ರೋಹಿಣಿ ನಕ್ಷತ್ರತ್ ಕದ್ ಮನೆಕ್ ಕೊಂಡಾಪ. ಪುತ್ತರಿಪೋಳ್ದ್‌ಕ್ ದೇವಕೆಟ್ಟ್ ಬೊವೂ-ದೇವಗುರು ನಕ್ಷತ್ರವಾನ ವಿಶಾಖ ನಕ್ಷತ್ರತ್. ದೇವಕಟ್ಟ್ ಬುದ್ದಿತ್ ಸೆರಿ ಪದ್‌ನಂಜನೇ ನಾಳ್‌ಲ್ ಚೂರಿಯ ನಕ್ಷತ್ರ ಕೃತಿಕಾ ನಕ್ಷತ್ರತ್ ದೇವಕಟ್ಟ್ ಮುರ್‌ಚಿತ್ ನಮ್ಮ ಶುರುವಾಪ. ಪಿತ್ಯಾಂದ್ ಚಣ್ಣೂರ ನಕ್ಷತ್ರವಾನ ರೋಹಿಣಿ ನಕ್ಷತ್ರತ್ ದೇವಕದ್ ಎಡಿತಿತ್ತ್ ಆನಪಿಂಞ ಎಲ್ಲಾ ವಕ್ಕಕಾರ ಅಯಿಂಡಯಿಂಡ ಬೇಲ್‌ಂಜ ಕದ್ ಎಡ್‌ತಂಡ್ ಬಪ್ಪ. ಕೃತಿಕಾ ನಕ್ಷತ್ರ ಅಗ್ನಿ ನಕ್ಷತ್ರಾಂದ್ ವೇದಶಾಸ್ತ್ರ ಎಣ್ಣುವ. ಕೃತಿಕಾ ನಕ್ಷತ್ರ ಅಗ್ನಿ ಉತ್ಪತ್ತಿಮಾಡುವ ನಕ್ಷತ್ರ ಪುಂಜಕ್ ಕೂಡ್‌ನದ್‌ೇಂದ್ ವಿಜ್ಞಾನ ಎಣ್ಣುವ. ಮಾಲವಂಗ ತಿಂದ ತೀನಿನ ಕರಕುವದೇ ಅಗ್ನಿ. ತಿಂದದ್ ಕರಿತ್ ಚೋರೆ, ವೀರ್ಯ ಆಪದೂ ಅಗ್ನಿನುಂಡೇ. ಇದೇ ಸಪ್ತಾಗ್ನಿ ತತ್ವ. ವೈಜ್ಞಾನಿಕವಾಯಿತೂ ಅಗ್ನಿಯೇ ಮಾಲವ ತಡಿರ ಚೈತನ್ಯೆಕ್ ಕಾರಣವೊ. ಸುಬ್ರಮಣ್ಯ ದೇವ ಪುಟ್ಟ್‌ನಲ್ಲಿ ಸುಬ್ರಮಣ್ಯ ದೇವನ ಕೃತಿಕೆಂದೆಣ್ಣುವ ಆರ್ ಮಾತೆಯ ಬಾಕ್‌ಚೀಂದ್ ಎಣ್ಣುವ. ಸುಬ್ರಮಣ್ಯ ಪಾರ್ವತಿರ ಮೊಂಮೊಂದೆಣ್ಣುವ. ಕುಜಗ್ರಹ ಈ ಭೂಗರ್ಭತಿಂಜ ಸೃಷ್ಟಿಯಾನದ್. ಸುಬ್ರಮಣ್ಯಂನೂ- ಕುಜಗ್ರಹವೂ ಒಂದೇಂದೆಣ್ಣುವ ಪುರಾಣ. ಇಗ್ಗುತಪ್ಪನೂ ಸುಬ್ರಮಣ್ಯದೇವಳೇ. ಕಿ.ಪೂ.2500ಲ್ ಬಿಸು ಚಂಗ್ರಾಂದಿಯೂ ಕೃತಿಕ ನಕ್ಷತ್ರತ್ ನಡ್‌ಪಯಿಂಜತ್‌ೇಂದ್ ಋಗ್ವೇದ ಎಣ್ಣುವ. ಚೆನ್ನ, ಕೊಡವ ಒಕ್ಕಕಾರ ಬಿಸು ಚಂಗ್ರಾಂದಿಲ್ ಗುರು-ಕಾರಣಂಗ್ ಕೊಡ್‌ಪ. ಬಿಸು ಚಂಗ್ರಾಂದಿನೋ ವೇದ ಪರಿಪದ ಪುಣ್ಯಕಾಲಂದೆಣ್ಣುವ. ಇನ್ನನೆ ಚೂರಿಯ ಚಣ್ಣೂರಂಗಡ ಚಲನೆರ ಆದಾರತ್ ಎಲ್ಲಾ ನಮ್ಮ ನಾಳ್ ಕಯಿಪ ಕೊಡವಡ ಆಟ್‌ಂಬಾಟ್‌ಲೂ ಕ್ಷಾತ್ರಂಗ ಎಣ್ಣುವದ್

ಎಡ್‌ತ್ ಕಾಂಗೊಲು. ನುಪ್ಪದ್ ಸ್ಲೋಕವುಳ್ಳ "ಆದಿತ್ಯ ಹೃದಯಂ"ದೆಣ್ಣುವ ಚೂರಿಯ ಸ್ಲೋಕತ್ ಕೊಡವಡ ಗುರುವಾನ ಅಗಸ್ತ್ಯಮಾಮುನಿ, ಮಾಲವಂಡ ತಿಳುವಳಿಕೆಯೂ– ಚೂರಿಯ ಮಂಡಲವೂ ಒಂದೇಂದ್– ಬ್ರಹ್ಮಾಂಡ– ಪಿಂಡಾಂಡತ್‌ರ ಸಂಮಂದತ್‌ನ ಎಣ್ಣುವ. ಇದ್ ವೈಜ್ಞಾನಿಕ ಸತ್ಯವೂ ಅಕ್ಕು. ಮಾಲವಂಡ ತಲೆಚೊರ್‌ರ ಮದ್ಯತುಳ್ಳ Thalamus -ಮಾಲವಂಡ ನೆರು ಮಂಡಲತ್‌ರ ಮದ್ಯತ್ ಚೂರಿಯಂಡನೆಕೆ ಕೆಲಸ ಮಾಡುವ. ಮಾಲವಂಡ ಮನಸ್ಸಾಂದೇ ಎಣ್ಣುವ Hypothalamus - ಮನಃಕಾರಕನಾನ ಚಣ್ಣೂರಂಡನೆಕೆ ಪಣಿಕೆಯ್ಯುವ ಅನ್ನನೆ ಬುದ subthalamus – ಶುಕ್ರ– substantia nigra –ಸಬ್‌ಸ್ಟಾನ್ಸಿಯ ನಿಗ್ರ, ಕುಜ –red nucleus , ಗುರು– Globus pallidus, ಶನಿ– Putamen, ರಾಹುಕೇತು– Caudate nucleus . ಜೋತಿಷ್ಯ ಶಾಸ್ತ್ರ ಎನ್ನನೆ ಒಯಿಂಬದ್ ಗ್ರಹ ಆದಾರತ್ ಕಣ್‌ಕ್‌ಡುವೊ... ಅದೇ ಕಣ್‌ಕ್‌ಲ್ ಈ ಒಯಿಂಬದ್ ಗ್ರಹ ಮಾಲವಂಡ ತಲೆಚೊರ್‌ನ ನಿಯಂತ್ರಣ ಮಾಡುವ. ಇದ್‌ಂಡ ಅರಿವು ಇಂಜಂಡೇ ಕೊಡವ ಚತ್ತಲ್ಲಿ, ಚತ್ತಯಿಂಡ ನೆತ್ತಿಕ್ ನಾಶ ಆಗತ ಲೋಹ– ಪೊನ್ನ್‌ರ ಪಾವುಲಿನ ಆಜ್ಞಾಚಕ್ರಾಂದೆಣ್ಣುವ ನೆತ್ತಿರ ನಡುಕ್ ಅಂಟಿಚಿಡುವೊ. ಪೋರೆ ಎಲ್ಲಾ ಪ್ರಾಣಿಯಕಿಂಜ ವಿಷೇಷ ಬುದ್ದಿ, ಚೈತನ್ಯ ಮಾಲವಂಡಲ್ಲಿ ಉಳ್ಳಾಂಗ್ ಚೂರಿಯ ಮಂಡಲತ ಮಾದರಿ ಉಳ್ಳ ಮಾಲವಂಡ ತಲೆಚೋರೇ ಕಾರಣ. ಪ್ರಕೃತಿಲೇ ಉತ್ಪತ್ತಿಯಾನ ಮಾಲವಂಡ ತಡಿ ಚತ್ತಕಲೂ, ಅವಂಡ ಆತ್ಮ– ಈ ಪ್ರಕೃತಿಲ್ ಪೌನ್‌ರನಕೆ ನಾಶ ಆಪ್‌ಲೇಂದೆಣ್ಣುವ ಅರ್ಥ ಇಲ್ಲಿಯುಂಡ್.

ಕಾಕೆ ಕೂಳ್ ಬಾಕ್‌ನಕ – ಬೆಂದ್‌ಕ ಮನೆಕ್ ಬಪ್ಪಾಂದೂ, ಕಾಕೆ ಚಾ ಚಾ ಂದ್ ಕೂತ್‌ಟ್ಟಕ ಚಾವುಸುದ್ದಿ ಬಪ್ಪಾಂದೂ, ಈತ್‌ಪಳ್ಳೆ ಕೂತ್‌ಟ್ಟಕ ಊರ್‌ಲ್ ಕೇಳಿ ಎಡ್‌ತವು ಚಾವಾಂದೂ ಇನ್ನನೆ ಎಚ್ಚಕೋ ತರತ ನಂಬಿಕೆ ಉಂಡ್ ಕೊಡವಡಲ್ಲಿ. ಪ್ರಕೃತಿರ ಎಂತ ಮಾಯೆಯೋ ಇದೆಲ್ಲಾ ಸತ್ಯವೇ ಆಪ. ಎಲ್ಲಾ ಕಪ್ಪೆಯ ಒಮ್ಮೆಕೇ ಕೂತ್‌ಡುವಕ್ ಸುರು ಮಾಡ್‌ನಕ ಕಪ್ಪೆ ಮಳೆನ ಕಾಕುವಾಂದೆಣ್ಣುವ. ಇರ್ಪು ತಂಗಡ ಮುಟ್ಟೆನ ಪೊರ್‌ತಂಡ್ ಭೂಮಿರ ಒಳಿಂಜ ಕೊಡಿಕ್ ಬಂದಂಡುಂಡೇಂಗಿ ಬಾರೀ ಮಳೆಗಾಲ ಈಯಾಂಡ್‌ಂದೆಣ್ಣುವ. ದಿವ್ಯ ದೃಷ್ಟಿಯುಳ್ಳ ಇರ್ಪು ಭೂಮಿರ ಒಳ್‌ಕ್ ನೀರ್ ಕೂಡಿತ್ ತಾಂಡ ವಂಶ ಪಾಳಾಯುವರಾಂದ್ ಕಡ್‌ತಿ ಎತ್ತರತುಳ್ಳ ಜಾಗತ್ ಬೆಪ್ಪ ವಿಜ್ಞಾನ ಇದ್! ಇನ್ನನೆ ಎಚ್ಚಕೋ ಕೊಡವಡ ನಂಬಿಕೆ ಪುರಾಣತ್ ವೈಜ್ಞಾನಿಕತೆನ ಕಾಂಗೊಲು. ಇದೆಲ್ಲಾ ನೋಟುವಕ ಮಾಲವಂಜಕಿಂಜ ಪ್ರಾಣಿಪಕ್ಷಿಯಕೇ ದಿವ್ಯದೃಷ್ಠಿ ಜಾಸ್ತಿ ಉಂಡ್‌ಂದ್ ನಂಗ ಅರಿಯೊಲು. ಭೂಮಿಲ್ ಭೂಕಂಪ ಆಪದ್‌ನ

ನಾಯಿ, ಪಕ್ಷಿಯಳೇ ಆದ್ಯ ಅರಿವೋಂದ್ ವಿಜ್ಞಾನವೂ ಎಣ್ಣುವ. ವಿಜ್ಞಾನಕ್ ಮೀರ್‌ನದ್, ಮಾಲವಂಡ ಪುಡ್‌ತಕ್‌ಕ್‌ಟ್ಟತಂತ ಮಾಯಾ ಅಂಡವೇ ಈ ಪ್ರಕೃತಿ–ನಂಬಿಕೆ–ವೇದ–ಪುರಾಣ. ಇದೆಲ್ಲಾಂಡ ಅರಿವು ಜ್ಞಾನ, ಪೋದ ಉಳ್ಳಾಂಗೇ ಕೊಡವ ಇಂದೂ ಪ್ರಕೃತಿ ಆರಾದಕಂಗಳಾಯಿತುಳ್ಳೊ.

**ವಿಜ್ಞಾನ– ಸರ್ಪಾಸ್ತ್ರ. ವೇದ, ಪುರಾಣ– ಗರುಡಾಸ್ತ್ರ.**

******

# ಕೊಂಬ್ ದಂಡ್

## ಚೂರಿಯ- ಚಣ್ಣೂರ ಜ್ಯೋತಿ ಮಂಡಲವೇ ದೇವಾಂದ್ ನಂಬ್‌ನವು ಕೊಡವ

ಕಾವೇರಿಯಮ್ಮೆರ ಪಳಮೆ(ಪುರಾಣ)ತ್‌ನ ಕೊಡವ ಇನ್ನನೆ ತೊಡಂಗುವ[5]

ಬಾಳೊ ಬಾಳೋ ನಂಗಡ
ದೇವ ಬಾಳೋ ಮಾದೇವ
ಪಟ್ಟೋ: ಬಾಳೋ ಚೂರಿಯ
ಕೂಡ ಬಾಳೋ ಚಣ್ಣೂರ
ಭೂಮಿ ಬಾಳೋ ಜಬ್ಬೂಮಿ
ಕನ್ನಿ ಬಾಳೋ ಕಾವೇರಿ
ಗಂಗೆ ಬಾಳೋ ತ್‌ರ್‌ತ
ತೀರ್‌ತ ಕುಳ್‌ಚಕ
ಈ ಚೆರ್ ಮನ್‌ಸಂಡ
ಕೆಜ್ಜಪಾಪ ಮೋಕುಲ
ಮೇಲೆ ಪಾಪ ಮೊದ್ದಲ
ಪೊದ್ದ್‌ನ ಶನಿಯೆಲ್ಲಾ
ದೂರ ನೀಂಗಿ ನಿಕ್ಕುಲ
ಕಾವೇರಿಯಮ್ಮೆ ದೇವಿರ
ಸತ್ತಿಯ ಸ್ಥಳತ್‌ಲ್
ಸತ್ತಿಯ ನಡಪಕ್ಕ

5. ಪಟ್ಟೋಲೆ ಪಳಮೆ(P.No.5) ನಡಿಕೇರಿಯಂಡ ಚಿಣ್ಣಪ್ಪ.

ಅನ್ನತ್ ನೆಲೆಯಾಪ
ಕೇಳೋ, ಕೇಳೋ ಸಂಜೂದಿ
ಸಂಜೂದಿ ಮನವೇಂಗಿ
ಕೊಟ್ಪೊಂದ್ ಮರಿಕನ
ಪಾಟೊಂದ್ ತಿರ್‌ಕನ
ಕೊಟ್ಪೊಂದ್ ಮರಿಪಕ್ಕ್
ಬಟ್ಟೆಕೂಟೆ ಬೋಂಡಲ್
ಕತ್ತಿಮತ್ತ್ ತಾಂಬೋಂಡ
ಮುಲ್ಲೆ ಪೂವಳೆ ಪೊಂಗ
ಕೂಬಾಕಿ ಮರ್‌ಚೋಲೆ
ಎಲ್‌ಂಬಿಲ್ಲತ ನಾವುನ
ನ್‌ಟೀತ್ತೂ ಮಡಕಿತ್ತೂ
ಪಾಟೊಂದ್ ಮರಿಕನ
ಕೊಟ್ಪೊಂದ್ ಮರಿಕಣೆ
ಪಾಡುವ ತರ ಬೋರೆ
ಎನ್ನ ಮೊಳಿ ಪಾಡನ
ಐದ್ ದಿಕ್ಕ್ ಪೋಕನ
ಆರ್‌ನ ತುದಿಕನ
ಅಲ್ಲತಾರೊ ಅಲ್ಲಲ
ಕಾವೇರಮ್ಮೆ ಮಾತಾಯಿ
ಪುಟ್ಪ್‌ನ ಕಥೆ ಕೇಳ್
ಅಕ್ಕು ಕೇಳ್ ಸಂಜೂದಿ,
ತೇಂದುಳಿ ತೊರಮಾಂಗೆ
ತಿಂದಿನೊಕೊದಿ ಪೋಗ
ದೇವ ತಂದ ಪೊಮಾಲೆ
ಚೊಡಿನೊ ಕೊದಿ ಪೋಗ
ಪೊಂಗ ತುದೆಲೆ ಬೋಗ
ತಿಂದಿನೊ ಕೊದಿ ಪೋಗ
ಅವ್ವ ತಂದ ತಂಗೂಳ್

ಉಂಡಿನೊ ಕೂದಿ ಪೋಗ
ಅಪ್ಪ ತಂದ ಕುಪ್ಪಿಯ
ಇಟ್ಟಿನೊ ಕೊದಿ ಪೋಗ
ಕಾವೇರಮ್ಮೆ ದೇವಿನ
ಪಾಡಿನೋ ಕೊದಿ ಪೋಗ..........

## ಎ) ಕೊಡವಕ್ ಕಣ್ಣ್‌ಗೊಂಡ್ ಕಾಂಬಳ ಚೂರಿಯನೇ ದೇವ

ಆದ್ಯ "ದೇವ ಬಾಳೋ ಮಾದೇವ"ಂದ್ ಪಾಡುವ. 'ದೇವ' ಎಣ್ಣುವ ಶಬ್ದ ಜಡ ಬುಟ್ಟಿತ್, ಪುರ್‌ಡ್‌ಲಿಪ್ಪದ್‌ಂದ್ ಅರ್ಥ. ಅರಿವಂವ, ಪೆರಿಯಂವ ಎಣ್ಣುವ ಅರ್ಥವೂ ಉಂಡ್. ಈ ದೇವ ಎಣ್ಣುವ ಶಬ್ದ ದಿವ್ (ಕನ್ನಡತ್‌ಲ್ ಪ್ರಕಾಶಿಸು) ಎಣ್ಣುವ ಧಾತು. 'ದೇವ'ಂದೆಣ್ಣುವ ಶಬ್ಧ ಋಗ್ವೇದತುಳ್ಳ ಮಂತ್ರತ್‌ಲ್ ಕಾಂಗೋಲು. ಈ ಭೂಮಿಲ್ ದೇವಕಿಂಜ ಪೆರಿಯಂವ ಅಲ್ಲೇಂಗಿ ಬಲ್ಲಿಯಂವ ದಾರು ಇಲ್ಲೆಂದ್ ಅರ್ಥ. ಇಲ್ಲಿ ದೇವಳ(ಮಹಾ+ ದೇವ) ಮಾದೇವ, ನೀಕಿಂಜ ಬಲ್ಯಂವ ದಾರು ಇಲ್ಲೇಂದ್ ಎಣ್ಣುವದ್ ಕಾಂಗೊಲು. ಇಂಞ "ಪಟ್ಟೋ: ಬಾಳೋ ಸೂರಿಯ"ಂದೆಣ್ಣುವ. ಇಲ್ಲಿ 'ಪಟ್ಟೋ:' ಎಣ್ಣಕ ಬ್ರಹ್ಮಾಂದ್ ಅರ್ಥ. ಪೊಲಾಕತ್‌ರ ಸೂರಿಯನ ಬ್ರಹ್ಮಾಂದೂ, ಮಜ್ಜಣತ್‌ರ ಸೂರಿಯನ ಶಿವಾಂದೂ, ಅಂದಿಮುಂದಿರ ಸೂರಿಯನ ವಿಷ್ಣೂಂದ್ ವೇದತ್ ಎಣ್ಣುವ. ಅದ್ ಎಂತದೇ ಇರಡ್, ಸೂರ್ಯ ಭೂಮಿರ ಓರ್ ಸ್ಕ್ವೋ.ಸೆ.ಮಿ., ಮೇಲ್‌ಕ್ ದಂಡ್ ಕ್ಯಾಲೊರಿ ಸೌರಶಕ್ತಿನ ಅಯಿಕತೆ ಪೋಚೆಂಗಿ ಈ ಭೂಮಿ ಪೊಳಕವಿಂಜಿತ್ ಓರ್ ಉಂಡೆ ಆಯಿಪೋಪ. ಸೂರ್ಯನಿಲ್ಲೇಂಗಿ ಎದೋರ್ ಜೀವಿಯೂ ಈ ಭೂಮಿಲ್ ಬದುಕುವಕ್ ಸಾಧ್ಯ ಇಲ್ಲೇಂದ್ ನಂಗಡ ವಿಜ್ಞಾನಿಯ ಎಣ್ಣುವ. ಪೊಲಂಜತಿಕ್ ಎದ್ದನಕ್ಕೇ ಆದ್ಯ ಕೊಡವ ನೆಲ್ಲಕ್ಕಿ ಬೊಳ್‌ಚಕೂ, ಸೂರಿಯಂಗೂ ದಂಡ್ ಕೈ ಜೋಡಿಚಿಟ್ಟಂಡ್– ಕುಂಬ್‌ಡ್‌ವ. ಎಮ್.ಎನ್ ಶ್ರೀನಿವಾಸ್‌ಂದೆಣ್ಣುವ ವಿದ್ವಾಂಸ ಅದ್‌ನೆ ಇನ್ನನೆ ಎಣ್ಣುವ. "On getting up from his bed in the morning a coorg salutes the wall lamp and the sun" [6]

ಈ ಭೂಮಿಲುಳ್ಳ ಜೀವಿಯಕ್ ಬೊಳ್‌ಚ, ಶಕ್ತಿ (Light & energy) ಕೊಟ್‌ಕ್ ನಂಗಡ ತಡಿಲ್ ನಂಗ ತಿಂದ ತೀನಿನ ಕರ್‌ಕುವ 'ಸಪ್ತಾಗ್ನಿ'ಕ್ (ವೈಸವನಾರೊ) ಕಾರಣಕರ್ತನಾನ (ವೈಜ್ಞಾನಿಕವಾಯಿತು) ಕಣ್ಣ್‌ಗೊಂಡ್ ನಂಗ ಕಾಂಬ ಆ ಚೂರಿಯ

---

6. Religion & Society among the coorg of south India – M.N Srinivas P.No-79

ದೇವನ ಕೊಡವ ತಂಗಡ ಎಲ್ಲಾ ನಲ್ಲಂಗೂ – ತೀಯಂಗೂ ತುದಿಪ. ಕೊಡವಡ ಐನ್‌ಮನೆಯೂ, ಅಯಿಂಡ ಕಾರಣಂಡ ಕೈಮಡವೂ ಚೂರಿಯನುದಿಪ ದಿಕ್ಕ್, ಕೇಕ್ ಕತ್ತಟಿ ಮೂಡ್ ಮಾಡಿತಿಪ್ಪ. ಅನ್ನನೇ ಕೊಡವಡ ಐನ್‌ಮನೆರ ನೆಲ್ಲಕ್ಕಿ ಬೊಳ್‌ಚತ್‌ರ ಮೂಡ್ ಕೇಕ್‌ಕತ್ತಟಿಯೇ ಇಪ್ಪ. ಅಗೆ–ಬೊಳೆರ ವಿಷಯತಂತೂ ಮೊಟ್ಟ್, ಮೊಟ್ಟ್‌ಕೂ ಕೊಡವ ರೈತಂಗ, ಆದ್ಯ ಸೂರಿಯನ ತುದಿಚಿತೇ ಕಾರ್‌ಬಾರ್ ಸುರುಮಾಡುವ. ಇದೆಲ್ಲಾ ನೋಟ್‌ನಕ ಈ ಕೊಡವ ಬುಡಕಟ್ಟ್ ಜನಾಂಗಕ್ ವಿಜ್ಞಾನ ಅರ್‌ಂಜಿತಿಂಜಿತಿಕ್ಕುಂದೂ ಎಣ್ಣೊಲು. ಈ ಕೊಡವು ಭೂಮಿ ಬಡಕ್ ಅಕ್ಷಾಂಶ (North latitude) 11º.50'–12º.50', ಕೇಕ್ ರೇಖಾಂಶ 75º.25'–76º.15 (East longitute) ಒಳ್‌ಲ್ ಕೂಡಿತುಂಡ್. ಇಂಡಿಯನ್ ಸ್ಟಾಂಡರ್ಡ್ ಟೈಮ್ 82º.50' ರೇಖಾಂಶತ್‌ರ, ಆದಾರತ್‌ರ ಮೇಲೆ ಕಣ್‌ಕ್ ಇಟ್ಟದಾಯಿತುಂಡ್. ಈ 82º.50' ಉಳ್ಳ ಜಾಗತ್ ಚೂರಿಯ ಉದಯ ಆಯಿತ್ 27 ನಿಮಿಷ ತಡ ಆಯಿತ್ ಮಡಿಕೇರಿ ಸುತ್ತು ಮುತ್ತು 25 ನಿಮಿಷ ತಡವಾಯಿತ್ ನಾಗರ ಹೊಳೆ ಅಲ್ಲಿಯತ್‌ರ ಸುತ್ತು ಮುತ್ತು ಚೂರಿಯ ಉದಯ ಆಪ. ಕೊಡವು ಬಡಕ್ ಅಕ್ಷಾಂಶತುಳ್ಳಾನಗೊಂಡ್ ಅಥವ ಭೂಮಧ್ಯರೇಖೆಂಜ ಭೂಮಿರ ಉತ್ತರಾರ್ದತುಳ್ಳನಗೊಂಡ್ ಕೇಕ್‌ಕ್ ಮೂಡ್ ಮಾಡಿತ್ ನಂಗ ಭೂಮಿ ತಿರುವ ದಿಕ್ಕ್‌ಲ್ ಪೋನಕ, ನಂಗಡ ಎಡ್‌ತ ಬರಿಕ್ ನಂಗ ಸುತ್ತುವ. ಆಸ್ಟ್ರೇಲಿಯ, ಆಫ್ರಿಕ ಎಲ್ಲಾ ಭೂಮಧ್ಯ ರೇಖೆಂಜ ಪಶ್ಚಿಮಾರ್ದತ್ ಉಳ್ಳಂಗ್ ಅಯಿಂಗಡಲ್ಲಿ ಭೂಮಿ ಅಯಿಂಡ ಬಲ್‌ತ ಬರಿಕ್ ಸುತ್ತುವ. ನಂಗ ಎಡ್‌ತ ಬರಿಕ್ ಸುತ್ತುವಕ, ನಂಗಕ್ ತಕ್ಕಡಿ Balance ಸೆರಿಯಾಂಡುವೇಂಗಿ ನೈರುತ್ಯ ಬರಿ ಕನಪಟ್ಟದಾಯಿತಿಪ್ಪ. ಉದಾರಣೆಕ್ ನಿಂಗ ಚಾಲನೆ ಮಾಡುವ ನಾಲ್ ಚಕ್ರತ್‌ರ ಕಾರ್‌ನೇ ಎಡ್‌ತೊಳಿ ಎಡತೆ ಬರಿಂಜ ತಿರ್‌ಕೊಕ ನಿಂಗಡ ಬಲತೆ ಬರಿರ ಚಕ್ರ ಕೊಡಿಕಿಪ್ಪ. ಇದೆಲ್ಲಾ ನೋಟುವಕ ಎಂತಾಶ್ಚರ್ಯಾಂದ್ ಆಪ. ಕೊಡವ ತಂಗಡ ಐನ್‌ಮನೆನ ಚೂರಿಯ–ಭೂಮಿರ ಪಥಕ್ ಸೆರಿಯಾಯಿತ್ ಕೆಟ್ಟಿತ್ – ಎಣ್ಣೊಲು! ಕೊಡವಡ ಐನ್‌ಮನೆರ ಕನಪಟ್ಟ ಜಾಗತ್ ನೈರುತ್ಯತ್, ಕೊಡವಡ 'ಕಾರಣವೊ' ವಾಸ ಇಪ್ಪ ಕನ್ನಿಕೊಂಬರೆ–ಕನ್ನಿಮೂಲೆ. ಆಸ್ಟ್ರೇಲಿಯಾತೋ, ಆಫ್ರೀಕತೋ ಉಂಡೇಂಗಿ ಕೊಡವಡ ಐನ್‌ಮನೆರ ಕನ್ನಿಕೊಂಬರೆ –ವಾಯುವ್ಯತ್ ಇರೊಂಡು. ಇನ್ನನೆ ಚೂರಿಯ–ಚಣ್ಣೂರಂಗಡ ಆದಾರತ್ ಎಲ್ಲಾ ಕಾರ್‌ಬಾರ್ ಮಾಡುವ ಕೊಡವ ಚೂರಿಯನ ಪಿತೃಕಾರಕ–ಪೆರಿಯ ಕಾರಣನಾಯಿತೂ ತುದಿಪ. 'ಪಟ್ಟ:' ತಳ್‌ತ ರಾಜನಾಯಿತೂ ಕುಂಬ್‌ಡುವ. ಎಡಮ್ಯಾರೊಂದಂಗ್ ಚೂರಿಯ ತಾಂಡ ಉಚ್ಚಸ್ಥಾನವಾನ ಪತ್ತ್‌ಡಿಗ್ರಿ ಮೇಷರಾಶಿಕ್

ಮೊಟ್ಟ್'ಡುವ ಕಾಲತ್'ನ ಕೇರಳತ್ ನಂಬುದಿರಿಯ "ಪಟ್ಟಃಮುದಯಮ್"ಂದ್ ಎಣ್ಣುವ. ಇಲ್ಲಿಯೂ ಚೂರಿಯನ ಬ್ರಹ್ಮ ಸಮಾನಂದೇಣ್ಣುವ ಅರ್ಥನೇ ಬಪ್ಪ. ಈ "ಪಟ್ಟಮುದಯಮ್"ನ ಕೇರಳಕಾರ ಎಸೂಂದೂ, ಕೊಡವ ಬಿಸು ಚಂಗ್ರಾಂದಿಂದೂ ಆಚರಣೆ ಮಾಡುವ.

ಚೂರಿಯಂಡ ಬೊಳಿ, ಚೂರಿಯಂಡ ಕಾಚಲ್ – ಮನುಷ್ಯಂಗ್ ತೊಂದರೆ ಮಾಡುವ ಚೆರಿಯ ಕ್ರಿಮಿಯಳೆಲ್ಲಾ ಕೊಲ್ಲುವಾಂದೂ, ನಂಗಡ ತಡಿಲ್ ವಿಟಾಮಿನ್ 'ಡಿ' ಕಮ್ಮಿಉಳ್ಳಾನ ಮಂಜ ಕಾಮಾಲೆನ ವಾಸಿ ಮಾಡುವಾಂದೂ ವಿಜ್ಞಾನ ಎಣ್ಣುವ.

ನಂಗಡ ಪೆರಿಯವು ಪುಟ್ಟ್'ನ ಚಿಪ್ಪಿ ಕುಂಞಿಯಳ ಪೊಲನೇರತೆರ ಬೆದ್'ಕ್ ಕಾಟುವ! ಈ ನಡ್'ಪು ಇಕ್ಕಲೂ ಉಂಡ್. ಇದೆಲ್ಲಾ ನೋಟ್ಚಕ ಕೊಡವ ಪೆರಿಯಯಿಂಡ ನಡ್'ಪುಲ್ ವಿಜ್ಞಾನ ಇಂಜತ್ತ್'ಂದ್ ಎಣ್ಣೊಲು. ಸ್ವಾರ್ಥ ಇಲ್ಲತೆ ಇಡೀ ಭೂಮಂಡಲಕ್ ತಾಂಡ ಬೊಳಿ–ಕಾಚಲ್'ನ ಪರಟಿಯುಂಡ್ ಪೋಲ್, ಇರಲ್,ಬೆದ್,ಮಳೆ,ಕುಳ್'ರ್'ಂದ್ ಎಲ್ಲಾ ಋತುಮಾನಕೂ ಈ ಸೃಷ್ಟಿಕೂ, ಜೀವಿಯಡ ಪ್ರಾಣ ಶಕ್ತಿ, ಜೀವಶಕ್ತಿಕೂ ಮೂಲ ಕಾರಣನಾನ ಆದಿಪುರುಷನಾನ ಚೂರಿಯನೇ ಆದ್ಯ ದೇವಾಂದ್ ಕೊಡವ ನಂಬಿತ್ –ಇದ್ ಕೊಡವಡ ನಂಬಿಕೆ, ಸಂಸ್ಕೃತಿಲ್ ಇಂದೂ ಕಾಂಗೊಲು.

ಸೂರಿಯ ತಾಂಡ ಉಚ್ಚಸ್ಥಾನವಾನ ಮೇಷರಾಶಿಲ್ ಇಪ್ಪಾಂಗ್, ಸೂರಿಯ ಪಟ್ಟ: ತಳ್'ತಿತ್ ಅಲ್ಲೇಂಗಿ ಪಟ್ಟ:ತಳ್'ತ ಚೂರಿಯ ಎಣ್ಣುವ ಅರ್ಥವೂ ಉಂಡ್.

## ಬಿ) ಕೊಡವಕ್ ಚೂರಿಯಂಡ ಕೂಡ ಚಣ್ಣೂರನೂ ದೇವ

ಚಂದ್ರವಂಶಕಾರಳಾನ ಕೊಡವಡ ಬಾಳೋಪಾಟ್'ರ ಮೂಲತ್'ಲೇ **"ಪಟ್ಟೋ: ಬಾಳೋ ಚೂರಿಯಂದ್** ಪಾಡಿತ್ತ್ ಅನನ್ನನೇ. **ಕೊಡೇ ಬಾಳೋ ಚಣ್ಣೂರ**"ಂದೇಣ್ಣಿಯಂಡ್ ಪಾಡುವ.ಇಲ್ಲಿ ಪೆರಿಯ ಕೊಡವಕ್ ಚೂರಿಯ ಚಣ್ಣೂರಂಗಡ ಒತ್ತೊರ್ಮೆ, ಆ ಚೂರಿಯ– ಚಣ್ಣೂರಂಗಡ ಸ್ವರಮೇಳ ಅರ್'ಂಜಿತಿಂಜತ್'ಂದ್ ಈ ಪಾಟ್'ರ ಸಾಲ್ ನೋಟ್'ನಕ ಗೊತ್ತಾಪ. ಸೂರಿಯನಿಲ್ಲೇಂಗಿ ಚಣ್ಣೂರಂಗ್ ಇಪ್ಪಕಯ್ಯು ಲೇಂದೆಣ್ಣುವ ವಿಷಯ ವೈಜ್ಞಾನಿಕ ಸತ್ಯವೂ ಅಕ್ಕು.

ಚೂರಿಯಂಡ ಕೂಡೆ ಚಣ್ಣೂರನೂ ಇರೊಂಡೋಂದ್ ಕೊಡವ ಪೆರಿಯವು ಪಾಡ್'ಚಿ, ಈ ಪಾಟ್'ಲುಳ್ಳನಕ್ಕೇ ಕೊಡವ ಇಂದೆಕ್ಕೂ, ಚಂದ್ರೋದಯ ಸಮಯತ್ತ್

ನಮ್ಮೆ, ಮಂಗಲತ್‌ರಂತ ಕಾರ್‌ಬಾರ್ ಮಾಡುವ. ಕೊಡವ ಸಂಪ್ರದಾಯಕೊತ್ತ ಮಾಲ್‌ಲೆಲ್ಲಾ ಚಣ್ಣೂರನ ಕಾಂಗೊಲು. ಉದಾ: ಕೊಕ್ಕೆತಾತಿ, ಪೀಚೆಕತ್ತಿ ಅದೂ ಅಲ್ಲತೆ ಉಂಬಳ ಕೂಳ್‌ಲೂ ಚೂರಿಯ ಚಣ್ಣೂರಂಗಳ ಕಾಂಬ ಕೊಡವ! ಇದ್ ಕೊಡವುಲುಳ್ಳ ಕೊಡವ ಮಾತ್ರ ಅಲ್ಲ ಬೋರೆಯಿಂಗಳೂ ಕೊಡವಡ ಕಳತ್‌ಲ್ ಕಣ್ಣಾರೆ ಕಂಡಿತಿಕ್ಕು- ಕಂಡಿತ್ ಪಡ್‌ಚಯಿಂಗಳೂ ಉಂಡ್. ಪಂಡ್ ಬೇಲ್‌ಲ್ ಬೊಳೆಯೆಲ್ಲಾ ಕರೆ ಪತ್ತಿತಾನದು, ಕೂಟಿ ಬೆಚ್ಚ ನೆಲ್ಲ್ ಮೆದೆನ ಒಕ್ಕಿ ಇಡುವಕ್ ಸುರು ಮಾಡುವ. ಒಕ್ಕಿ ಇಟ್ಟ ನೆಲ್ಲ್‌ನ ಗುಡ್ಡೆ ಕೂಟುವ ನೆಲ್ಲ್ ಗುಡ್ಡೆರ ಸುತ್ತೂ ಕ್‌ದಕಾಲೆ Clockwise ಮಧ್ಯತ್ ಗೆರೆ ಬಲ್‌ಚ್ಚಿತ್ತ್, ಪಿಂಞ ಕೊಡಿಲ್ ಒಡ್ಡ್ ಕೋಲ್‌ರ ಕೊಕ್ಕಿಲ್ ಗೆರೆ ಬಲಿಪದ್ ಪದ್ಧತಿ. ಓರಬ್ಬ ದೂಳ್‌ಪಾರಿಚಿಡುವ ಮೊರತ್- ಪಾತ್ ಮೊರತೂ ಗೆರೆ ಬಲಿಪವ್ ನಾನ್ ಕಂಡಿಯೆ. ಅದಾನ ಪಿಂಞ ಕೊಡಿಯತ್‌ರ ಗೆರೆರ ಪಕ್ಕತ್ ಪಾದಿ ಚಣ್ಣೂರನ ಬುಡ್‌ತ್ತಿತ್ ಆಂಡ ಮಧ್ಯಕ್ ಚುಕ್ಕಿ ಇಟ್ಟಿತ್ತ್ ನೆಲ್ಲ್ ಗುಡ್ಡೆರ ಮಂಡೆಕ್, ಅಲ್ಲೇಂಗಿ ತುದಿಕ್ '+' ಇನ್ನನೆ, ಕೇಕ್-ಪಡಿಂಞಾರ್. ತೆಕ್ಕ್ ಬಡ್‌ಕ್, ದಿಕ್ಕ್‌ರ ಗುರ್ತ್ ಇಟ್ಟಿತ್ ಒಡ್ಡ್ ಕೊಕ್ಕೆನ ನೆಲ್ಲ್ ಗುಡ್ಡೆರ ಕೊಡೀಲ್ ಕೊಕ್ಕೆ ಆಕಾತ ನೊಟ್‌ವನಕೆ '+' ಗುರ್‌ತ್‌ರ ಮಧ್ಯಕ್ ಕುತ್ತುವ. ಇದ್‌ನ ಕೊಡವ ನೆಲ್ಲ್‌ರ ಕಾಲ್ ಕಟ್ಟುವೊಂದ್ ಎಣ್ಣುವ. ಬೊಳೆ ಎಲ್ಲಾ ಕರೆ ಪತ್ತತೆ, ನೆಲ್ಲ್‌ರ ಕಾಲ್ ಕಟ್ಟುವಕ್ಕಾಗ ಎಣ್ಣುವದೂ ಶಾಸ್ತ್ರ-ಕೊಡವಕ್. ಇನ್ನನೆ ಬೈಟ್ ಕಾಲ್‌ಕೆಟ್ಟಿತ್ತ್ ಬೆಚ್ಚನೆಲ್ಲ್‌ನ ಪಿತ್ಯಾಂದ್ ಪೊಲಾಕ ನೇರತೆ ಮಂಜಿಲೇ ಕನಿಚಿತ್ ಪೂವಡೆ ಪಿಂಞ ಕಲ್ಲ್‌ನ- ನೆಲ್ಲ್‌ಂಜ ಬೋರೆಮಾಡುವ. ಎಂತಾ ವಿಜ್ಞಾನ! ಮೊರತ್ ಕಳತ್ ಬೋಟಿರ ಆಬರಿಲ್ ನಿಂದಂಡ್ ತಾಂಡ ಎಡ್‌ತ ಕೈ ಬರಿಂಜ ಕನಿಪ ನೆಲ್ಲೂ ಪಾದಿ ಚಣ್ಣೂರಂಡನಕೆ ಇಪ್ಪ. ನಾಡಪ್ಪನ ನಾನೊಮ್ಮೆ ಮೆದೆರ ಕೊಡಿಕ್ ಪತ್ತಿಯಂಡ್, ಎನ್ನಂಗಿನ್ನನೆ ಕಾಲ್ ಕಟ್ಟುವೋಂದ್ ಕೇಪಕ, ನೆಲ್ಲ್ ಪೊಲ್‌ಂಜಿ ಬಪ್ಪಾಂದೂ, ಉಂಬ ನೆಲ್ಲ್‌ನ ದಾರೂ ಕಟ್ಟಿ ಪೋಗತನಕೆ ಚೂರಿಯ-ಪೋಲೂ, ಚಣ್ಣೂರ ಇರ್‌ಲೂ ಪಾರ ಇಪ್ಪಾಂದೆಣ್ಣಿದ್ ಇಕ್ಕಲು ನಾಕ್ ಗ್ಯಾನ ಉಂಡ್.

## ಕೊಡವಡ ಪವಿತ್ರವಾನ ನಮ್ಮೆ

ಪುತ್ತರಿಯೂ ಚಂದ್ರೋದಯ ಆನ ಪಿಂಞವೇ. ಚಣ್ಣೂರಂಡ ತಂಪ್‌ಲ್. ತಂಪಾನ ಕಾತ್, ಮಂಜಿ ಬುದ್ದ ನೆಲ್ಲ್ ಪಿತ್ಯಾಂದ್ ಪೊಲಾಕತ ಚೂರಿಯಂಡ ಪವಿತ್ರ ಬೊಳಿಲ್ ಕಾಂಜಕ ವಾರಂಡೆಕತ್ತಣೆ ಉಂಬ ನೆಲ್ಲ್‌ಕೂ, ಬಿತ್ತ್‌ಡುವ ನೆಲ್ಲ್‌ಕೂ ಪುಳು ಬುದ್ದಿತೊ, ಬೂಷಣ ಬಂದಿತೋ ಪಾಳಾಪುಲೇಂದೆಣ್ಣುವ ವೈಜ್ಞಾನಿಕತೆ

ಪೆರಿಯ ಕೊಡವಡಲ್ಲಿ ಇಂಜತ್ತ್‌ಂದ್ ಎಣ್ಣೊಲು.

ಮಂಗಲವೂ ಚಣ್ಣೂರ ಉದಯ ಆನಪಿಂಞ. ಬೇಲ್ ಆದ್ಯ ಉಪ್ಪೊ ಬಿಸುವಂದೇ. ಬಿತ್ತ್ ಇಡುವಕ, ಅಗೆ ಪೆರಿಪಕ, ಬೊಳೆ ಎಡ್‌ತಬಪ್ಪಕ ಎಲ್ಲಾ ಚಂದ್ರಬಲ – ನೋಟಿತ್ತೇ, ಕರ್ತಬಾವು ಕಯಿಂಜಿತ್ ಕಾರ್‌ಬಾರ್ ಮಾಡುವ. ತಿಂಗಳಾಚೆ ಬೇಲ್‌ಲ್ ಉಪ್ಪುಪಣಿ ಮಾಡುಲೆ. ತಿಂಗಳಾಚೆ ಎಣ್ಣಕ ಚಣ್ಣೂರಂಡ ಆಚೆಂದರ್ಥ ಅಂದ್ ಬೇಲ್ ಪಣಿಕ್ ರಜ. 82–83 ಪಯಸ್ಸೊರ್‌ಳ್ ಚತ್ತಯಿಂಗಡ ಚಾವುನ ಪೊರಡಿಚಿಟ್ಟಿತಾನಪಿಂಞ, ಓರ್ ಕೋತ್ರಿ ಕತ್ತ್‌ಚಿಟ್ಟಂಡ್ ಚಾವುರ ಮೂಡ್‌ರ ಮಿಂಞಲ್ ತಿರ್‌ಕಿ–ತಿರ್‌ಕಿ ಆಯಿರ ನೆಲಚಿ ಕಂಡಿರಾಂದ್ ಕೇಪದ್ ಪದ್ಧತಿ. ಇಲ್ಲಿ ಆಯಿರ ನೆಲಚಿಂದೆಣ್ಣಕ– ಬೊಳ್‌ತಬಾವು–ಆಯಿರಾಂದ್ ಅರ್ಥ ಆಯಿರ ನೆಲಚಿ ಕಂಡಿತ್, ಚತ್ತಕ ಪುಣ್ಯಂದ್ ಅರ್ಥ ಉಂಡ್.

# ಕೊಂಬ್ ಮೂಂದ್

## ಮಣ್ಣ್–ತೀರ್ಥ (ಪ್ರಥ್ವಿ–ಅಪ) ವೇ ಕೊಡವಡ ಪ್ರಾಣ

ಎ) ಮಣ್ಣ್– ಪ್ರಥ್ವಿ

ಪಟ್ಟೋ: ಬಾಳೋ ಚೂರಿಯ, ಕೂಡೆ ಬಾಳೋ ಚಣ್ಣುರಾಂದ್ ಪಾಡಿತಾನ ಪಿಂಞ "ಭೂಮಿ ಬಾಳೋ ಜಬ್ಬೂಮಿ" ಕನ್ನಿ ಬಾಳೋ ಕಾವೇರಿ, ಗಂಗೆ ಬಾಳೋ ತೀರ್‌ತಂದ್ ಪಾಡಿಯಂಡ್......ಕಾವೇರಿಯಮ್ಮೆ ದೇವಿರ ಸತ್ತಿಯ ಸ್ಥಳತ್‌ೕಂದ್ ಪಾಡುವ........ ಅನ್ನನೆ ಮಿಂಞಕ್ ಪಾಡಿಯಂಡ್

ಎನ್ನಮೊಳಿ ಪಾಡನ?<br>
ಏದ್‌ದಿಕ್ಕ್ ಪೋಕನ?<br>
ಆರ್‌ನ ತುದಿಕನ?<br>
ಅಲ್ಲತಾರೊ ಅಲ್ಲಲ<br>
ಕಾವೇರಿಯಮ್ಮೆ ಮಾತಾಯಿ'ಂದ್ –ಪಾಡುವ.

ಭೂಮಿ ಬಾಳೋ ಜಬ್ಬೂಮಿ, ಎಣ್ಣಕ ಕೊಡವ ಪೆರಿಯಯಿಂಗಕ್ ಈ ಭೂಮಿ ಜಬ್ಬಿತುಂಡ್‌ಂದ್ ಎಣ್ಣುವ ಜ್ಞಾನ ಇಂಜನೆಕೆ ಕಾಂಬ. ಕೊಡವ ಇಂದೆಕೂ ಭೂಮಿ–ತೀರ್ಥ ದಂಡನೋ ಕಾವೇರಮ್ಮೆ ದೇವಿರದ್– ಇದೆಲ್ಲಾ ದೇವಡ ಪ್ರಕೃತಿರೂಪ ನಂಗಡದಲ್ಲಾಂದ್ ನಂಬಿತುಂಡ್. ಮೊಟ್ಟ್–ಮೊಟ್ಟ್‌ಕೂ ಕೊಡವ ಇದ್ ಕಾವೇರಮ್ಮೆರ ಮಣ್ಣ್, ಇದ್ ಸತ್ಯತ್‌ರ ಮಣ್ಣ್– ಧರ್ಮ ಉಳ್ಳ ಮಣ್ಣ್‌ಂದ್ ಎಣ್ಣುವದ್ ನಂಗೆಲ್ಲಾರೂ

ಅರ್‌ಂಜ ವಿಷಿಯ. ಪಳಿಯ, ಪೆರಿಯ ಕೊಡವಡ ಪ್ರಕಾರ ನೇವಾನ ಬಾಗಿಯಂದ್ ಎಣ್ಣಕ, ಚೆನ್ನಂಗ್ ನೆಲ್ಲ್ ಬೊಳತುವಕುಳ್ಳ ಭೂಮಿ, ಅತ್ತಕಡಚಿಯ, ಪತ್ತಾಯ ಅಲ್ಲೇಂಗಿ ತುಳಿಯತ್ ವಾರಂಡೆಕ್ ಉಂಬಕ್ ನೆಲ್ಲ್ ಉಂಡೇಂಗಿ ಮದಿ ಅಂವನೇ ಬಾಗಿಯ ಉಳ್ಳಂವೂ- ಐಶ್ವರ್ಯ ಉಳ್ಳವೊಂದ್ ಅರ್ಥ. ಭೂಮಿರ ಸುತ್ತೂ ಕಾಡ್ ಇಪ್ಪ. ಪುಳ್ಳಿ-ಚಳ್ಳೆ, ಅತ್ತಮೇವಕ್ ಕಾಡ್, ಪಯ್ಯತ್ತ ಉಳ್ಳಲ್ಲಿ ಒಂದಂಗೂ ಕೊರವು ಇಪ್ಪುಲೆಲ್ಲಾ! ಪಾಲ್ ಮೋರ್, ನೆಯ್ಯಿ, ಬೇಲ್‌ಕ್ ಗೊಬ್ಬರ, ಬೇಲ್ ಉಪ್ಪಕ್ ಅತ್ತ! ಅಂಗಡಿಂಜ ಸಾಮಾನ್ ಉಪ್ಪು-ಬೆಲ್ಲ ಮಾತ್ರ! ಕೂಟ್‌ಕ್ ಬೋಟೆ. ತೊಪ್ಪು, ಕುಮ್ಮ್, ಕೇಂಬ್, ಕಳ್‌ಂಜಿ, ಬೈಂಬಳೆ, ಅದದ್ ಕಾಲಕ್ ಸೆರಿಯಾಯಿತ್ ಕಾಡ್‌ಲೇ ಕಟ್ಟುವಯಿಂಜತ್. ತರಕಾರಿ ಎಕ್ಕಲೂ ಬೊಳತಿಯವ ಇಂಜತ್. ಕೂಟ್‌ಕ್ ಕೋಳಿ, ಪಂದಿಯೂ ಚಾಕಿಯಂಡಿಂಜಂತ್. ಎದ್‌ಂಗೂ ಕೊರವಿಲ್ಲತ ಜೀವಮಾನ!

ಈ ಭೂಮಿನ ಕೊಡವ ದುಂಬಾ ಪವಿತ್ರವಾಯಿತ್ ಕಾಂಬ. ಕಾಫಿ ಬೊಳತುವಾಂಗಿಂಜ ಮುಪ್ಪಡೇ ಕೊಡವ ಬರೀ ನೆಲ್ಲೇ ಬೊಳತಿಯಂಡ್ ಇಂಜಿಯೆ. ಚೂರಿಯ, ಚಣ್ಣೂರಂಗಡ ಬೊಳಿ, ಕಾಲಕ್ ಸೆರಿಯಾಯಿತ್ ಮಳೆ ಪೊಜ್ಜಕನ್ನೇ ಭೂಮಿಲ್ ನಂಗಕ್ ಬೊಳೆ ಬೊಳತುವಕ್ಕ್ ಕಯ್ಯುವೊ? ನಂಗ ಉಂಬ ಕೂಳ್‌ಕ್ ಈ ಭೂಮಿಯೇ ಮೂಲತತ್ವ ಈ ಪವಿತ್ರ ಭೂಮಿರ ಸಾರವೇ ನಂಗ ಉಂಬಕೂಳ್. Earth is essence of food, Food produces energy, and from energy all beings are produced ನಂಗ ಉಂಬ ಕೂಳ್, ತಿಂಬ ತೀನಿಲ್ ನಂಗಡ ತಡಿಕ್ ಬಲ ತಪ್ಪ. ಆ ಬಲ-ತೇಜಸ್ಸ್‌ಂಜ ಮನುಷ್ಯಂಗ ಪುನಃ ಸೃಷ್ಠಿಯಾಪಾಂದ್ ಎಣ್ಣುವದ್ ಎಲ್ಲಾರೂ ಅರ್‌ಂಜ ಸಂಗತಿ. ಇಲ್ಲಿ ನಂಗಕ್ ಋಗ್ ಮಂತ್ರ – "ಅನ್ನಮ್ ಬ್ರಹ್ಮಾ"ಂದೆಣ್ಣುವದ್ ಗ್ಯಾನ ಬಪ್ಪ. ಅಕ್ಕು ಕೂಳ್ ಉಂಡಿತ್ ಬಲ ಬಪ್ಪ. ಕೂಳ್-ನಂಗ ತಿಂಬ ತೀನಿರ ಬಲತ್‌ಲನ್ನೇ ನಂಗಕ್ ಮಕ್ಕ ಆಪೊ........ಇದೇ ಅಲ್ಲವಾ ಸೃಷ್ಠಿ! ದೇವಳ ನಂಬತವನೂ ಇದ್‌ನ ಇಲ್ಲೇಂದ್ ಎಣ್ಣುವ ಕಯ್ಯುಲೆ. ಅಲ್ಲಿಕ್ "ಅನ್ನಮ್ ಬ್ರಹ್ಮಾ" ಕೂಳೇ ಸೃಷ್ಠಿಕಾರಂದೆಣ್ಣುವ ಋಗ್ ಮಂತ್ರ ಸತ್ಯ ಆಚಲ್ಲಾ. ಆಯುರ್ವೇದವೂ-ನಂಗ ತಿಂಬತೀನಿರ ಆದಾರತ್‌ರ ಮೇಲೆ ನಂಗಡ ಬುದ್ಧಿ ಬೊಳಿವಾಂದ್ ಎಣ್ಣುವ. ನಂಗ ತಿಂಬತೀನಿನ ನಿಪ್ಪುಚಿಟ್ಟ್‌ಟಕ ಅಲ್ಲೇಂಗಿ, ನಂಗಡ ಕೆಲತುಳ್ಳ ಅಗ್ನಿ ನಂಗ ತಿಂದಾನ ಕರ್‌ಕತೆ ಪೋಚೆಂಗಿ-ನಂಗಡ ಉಸ್‌ರ್ ನಿಂದ್ ಪೋಪ. ನಂಗಡ ದಂಡ್ ಕೆಮಿ ಮುಚ್ಚಿಯಂಡಕ ನಂಗಡ ತಡ್‌ರೊಳ್‌ಂಜ ಬಪ್ಪ ಸದ್ದ್ 'ವೈಸ್ವನಾರೊ' ನಂಗಡ ತಡಿರೊಳ್‌ಲ್ ಕೇಕೊಂಡುವೇಂಗಿ ನಂಗ ಕೂಳ್ ಉಂಗೊಂಡು, ಉಂಗತ ಪೋನಕ ಆ ಸದ್ದ್‌ನಿಂದ್ ಪೋಪ- ನಂಗಡ

ಪ್ರಾಣ ಪೋಚೀಂದ್ ಅರ್ಥ ಅಲ್ಲಿಕ್!

ಕೊಡವ ಭೂಮಿಲ್ ನೆಲ್ಲ್ ಬೊಳ್‌ತಿತ್ತೇ ಬೊಳತೊಂಡೂಂದ್ ಎಣ್ಣುವ ನಿರ್‌ಕ್ ಉಂಡ್. ಭೂಮಿ ಉತ್ತಿತ್ತ್ ನೆಲ್ಲ್ ಬೊಳ್‌ತ್‌ನಕ ಮಾತ್ರ ನಂಗಡ ಸಂತಾನ ಉಳಿವ್ರೋಂದೂ, ಕಾವೇರಮ್ಮೆ ಕುಶಿಪಡುವ್ರೋಂದ್ ಕೊಡವಡ ನಂಬಿಕೆ ಆಯಿತುಂಡ್.

ಇಲ್ಲಿ ಕೊಡವಡ ನಂಬಿಕೆಲ್ ವೈಜ್ಞಾನಿಕತೆ ಉಂಡ್‌ಂದ್ ಖಂಡಿತ ಎಣ್ಣೊಲು. ಉಂಬಕ್ ಕೂಳಿಲ್ಲೇಂಗಿ ನಂಗಕ್ ಶಕ್ತಿ ಇಪ್ಪುಲೆ –ಶಕ್ತಿ ಇಲ್ಲೇಂಗಿ ಸಂತಾನ ವೃದ್ಧಿ ಮಾಡೋಕ್ ಸಾಧ್ಯಇಲ್ಲೆ–ಸಂತಾನ ವೃದ್ಧಿಯಾಯಿಲೇಂಗಿ ಈ ಭೂಮಿಲ್‌ದಾರು ಇಲ್ಲತಾಯಿಪೋಕು–ಎಣ್ಣುವ– Simple logic !!

"Rice is the staple product of coorg"[7]

"The rice field is divided into a number of ridged – up plots and central Plot of the rice field is regarded as particularly sacred[8].

ಅವ್ವಂಡ ಕೆಲತಿಪ್ಪ ಕುಂಞಿಕ್ ಅವ್ವತಿಂದ ತೀನಿರ ರಸ– ಪೊಕ್ಕ್ ಬಳ್ಳಿಕಾಯಿತೆ ಪೋಯಿತ್–ಕುಂಞಿಕ್ ಊಟುವ. ಪಿಂಡಕ್ ಅಲ್ಲೇಂಗಿ ಕುಂಞಿಕ್ ಜೀಂವ ಕೊಡ್‌ಪದೇ– ಪೊಕ್ಕ್‌ಬಳ್ಳಿ. ನಂಗಡ ಪೋಕ್ಕ್‌ಬಳ್ಳಿ ಇಂಜ ಪೊಕ್ಕ್‌ನ ಬ್ರಹ್ಮಸ್ಥಾನ ಅಲ್ಲೇಂಗಿ ಸೃಷ್ಠಿಯಾನ ಸ್ಥಾನಂದೆಣ್ಣುವ. ಪ್ರಕೃತಿಲ್– ಪ್ರಕೃತಿಯಾಯಿತ್ ಬದ್‌ಕಿಯಂಡ್ ಬಂದ ಕೊಡವಡ ಯಾಕ ಎಲ್ಲಾ ಬೇಲ್‌ರ ನಡುಲ್ ಇಪ್ಪ. ಬಿತ್ತ್ ಇಡುವ ಬೇಲ್ ನಡುಲುಂಡೇಂಗಿ ಆದರೆಲ್ (ಜೂನ್ –ಜುಲೈ) ನೀರ್‌ಕ್ ತೊಂದರೆ ಆಪುಲೇಂದೂ, ನಾಟಿನಡ್‌ಪ ಸಮಯತ್ ನೇರ್ ಕಡ್‌ತಿಯುವಕ್ ಸುಲಭ ಆಪ ಎಣ್ಣುವ ವೈಜ್ಞಾನಿಕಥೆಯೂ ಇಲ್ಲಿ ಉಂಡ್. ಯಾಕ ಕೊಡವಕ್ ದುಂಬಾ ಪವಿತ್ರವಾನ ಬೇಲ್. ನೆಲ್ಲ್‌ಕುರು ಆದ್ಯ ಬಿತ್ತ್ ಇಡುವದೇ ಅಲ್ಲಿ! ಬಯ್ಯ ಬೊಳೆ ಬಂದಿತ್ ನಂಗ ತಿಂಬ ಕೂಳ್‌ಕ್ ಮೂಲವೇ 'ಯಾಕ', ಅಲ್ಲೇಂಗಿ ಬಿತ್ತ್ ಇಡುವ ಜಾಗ. "ಯಾಕ"– ಕೊಡವಡ ಲೆಕ್ಕತ್ ಬ್ರಹ್ಮಸ್ಥಾನ–ಉಂಬಕೂಳ್ ಸೃಷ್ಠಿಯಾಪ ಜಾಗ. ತಾಂಗ್ ಪುಟ್ಟ್‌ನ ಮಕ್ಕ ಯಾಕತ್‌ಲೇ ಸೃಷ್ಠಿಯಾಯಿತ್ ಪುಟ್ಟಿತ್, ಬೊಳ್‌ಂದ ಕೂಳ್‌ರ ತೇಜಸ್ಸ್‌ಲ್ ಪುಟ್ಟ್‌ನವು. ಯಾಕತ್ ಬೊಳ್‌ಂದ ಕೂಳ್ ನಂಗಡ ಸೃಷ್ಠಿಕ್ ಕಾರಣ. ತಾಂಡ ಮೂಡಿ ಮಕ್ಕ ಅದೇ ಭೂಮಿರ ಕೂಳ್ ಉಂಡಿತ್, ಈ ಭೂಮಿರ ಸೃಷ್ಠಿರ

---

7 G. Richter Gazetteer of coorg – P.No. 86.

8 Religion & Society among the coorg of south India – M.N Srinivas P.No.78

ಪುನರಾವರ್ತನೆಕ್ ಕಾರಣಂಗಳಾಪವು. ಈ ಸೃಷ್ಟಿ ಮಿಂಞಕ್ ಬೊಳಿವಕ್ ಸಾಯ ಮಾಡುವವು. ಅಂಗೇ ಕೊಡವ ತಂಗಡ ಮಕ್ಕಡ ಸೃಷ್ಟಿಕ್ ಸಾಯ ಮಾಡ್‌ನ ಮೊಕ್ಕ್ ಬಳ್ಳಿನ ಯಾಕತ್ ಪೂಪೊ!

ಕೊಡವ ಪೆರಿಯಯಿಂಡ ಬಾಯಿಲ್ "....ಮಣ್ಣ್‌ಲ್ ಮಣ್ಣಾಪ ತಡಿ....ಂದ್ ಇಕ್ಕಲೂ ನಂಗ ಕೇಕೊಲು. ಇದ್‌ಂಡ ಒಳ್‌ಲ್ ಉಳ್ಳ ಅರ್ಥತ್‌ನ ಬೆದ್‌ಕ್‌ಚೆಂಗಿಯೇ ಗೊತ್ತಾಪೊ ಅದ್‌ಲುಳ್ಳ ಬ್ರಹ್ಮಾಂಡ ಪಿಂಡಾಂಡತ್‌ರ ಸಂಮಂದ. ಋಗ್ವೇದತ್ ಎಣ್ಣನಕೆ ಈ ನಂಗಡ "ಅನ್ನಮಯ ಕೋಶ"ಕ್ ಕೂಳ್ ಇಲ್ಲತೆ ಇಪ್ಪಕ್ಕೇ ಕಯ್ಯ್‌ಲೆ. ಅನ್ನನೆ ಎಣ್ಣಿಯಂಡ್ ದಂಡ್ ಪೊತ್ತ್‌ಕುಳ್ಳಾನ ಒಮ್ಮಕೇ ಉಂಡ್‌ರೊಕ್ಕೂ ಕಯ್ಯ್‌ಲೆ! ಆರೋಗ್ಯ ಬೋಂಡುವೇಂಗಿ ಪೊತ್ತ್‌ಕ್ ಸೆರಿಯಾಯಿತ್ ಉಂಗೊಂಡು. ಕೂಳ್ ಉಂಡ ನಂಗಡ ಈ ತಡಿ, ನಿಶ್ಚಲವಾಪಕ–ಪ್ರಾಣ ಪೋನಪಿಂಞ, ಈ ಪವಿತ್ರ ಮಣ್ಣ್‌ಕೇ ಗೊಬ್ಬರವಾಯಿತ್ ಪುನಃ ಸೃಷ್ಟಿಕ್ ಕಾರಣವಾಪ. ಚತ್ತ ತಡಿರ ಗೊಬ್ಬರತ್ ಪುಟ್ಟ್‌ನ ಎದೋ ಓರ್ ಗಿಡ, ಅಲ್ಲೇಂಗಿ ಏದೋ ಓರ್ ಪಣ್ಣ್ ಮರತ್‌ರ ಬೇರ್ ಆ ಗೊಬ್ಬರತರ ರಸ ಬಲ್‌ಚವ. ಅದ್‌ಲಾನ ಪಣ್ಣ್ ತರ್‌ಕಾರಿ......ನಂಗಳೇ ತಿಂಬ. ಆ ತಿಂದ ತೀನಿಯೇ ಚೋರೆಯಾಯಿತ್ ಪೊಣ್ಣಾಳಡ ಅಂಡಕೂ– ಆಣ್‌ರ ಶುಕ್ಲಕೂ ಕಾರಣವಾಪ. ಇದೇ ಸಪ್ತಾಗ್ನಿ ತತ್ವ ಇದ್ ವೈಜ್ಞಾನಿಕ ಸತ್ಯವೂ ಅಕ್ಕು. ಕಾಕೆ– ಪಕ್ಷಿಯಳೂ– ತಿಂದಿತ್– ತೂರಿತ್, ಈ ಕಾಡ್ ಈ ಸೃಷ್ಟಿರ ಪುನರಾವರ್ತನೆಕ್ ಕಾರಣಂಗಳಾನಪವೂಂದ್ ಎಣ್ಣಲು. ಭೂಮಿಲ್ ನೆಲ್ಲ್ ಬೊಳೆಕ್– ಆದ್ಯತೆ ಕೊಡ್‌ಪ ಕೊಡವ, ಕೊಡವು ಮಣ್ಣ್‌ಲ್, ಈ ಬ್ರಹ್ಮದೇಶತ್, ಕಾವೇರಿಯಮ್ಮೆರ ಮಣ್ಣ್‌ಲ್ ಕೊಡವ ಬೇಲ್ ನಡ್‌ಕತ ಪೋನಕ ಕಾವೇರಮ್ಮೆ ಶಾಪ ಇಡುವಾಂದ್– ಕೊಡವಡ ನಂಬಿಕೆ. ಇಂದೆಕೂ ಆ ನಂಬಿಕೆ ಉಂಡ್ ಕೊಡವಡಲ್ಲಿ. ಬಿಸುಕ್ ಮೂಂದ್ ಸುತ್ತೇಂಗಿ ಉತ್ತಿತ್ತೇ ಉಕ್ಕೊಂಡೂಂದೂ, ಕಾವೇರಿ (ತುಲಾ) ಚಂಗ್ರಾಂದಿಕ್ ಬೊತ್ತ್ ಕುತ್ತಿತ್ತೇ ಕುತ್ತೊಂಡು ಎಣ್ಣುವ ನಿರ್‌ಕ್, ನಂಬಿಕೆ ಕೊಡವಡಲ್ಲಿ ಇಕ್ಕಲೂ ಉಂಡ್. ರಿಕ್ಟರ್ ಎಣ್ಣುವ ಇಂಗ್ಲೀಷ್ ವಿದ್ವಾಂಸ ಬಿಸುಕ್ ಕೊಡವ ಮೂಂದ್ ಸುತ್ತ್ ಉಪ್ಪಾನ ಇನ್ನನೆ ಎಣ್ಣುವ

"With the first showers in April and May the ploughing commences on a propitious day before sunrise, the house – lamp –Taliakki- balak. (dish – rice – lamp )- which plays conspicuous roll on all festive occasions, is lighted in the inner verandah, the house people assemble and invoke their ancestors and Kaveri amma for a blessing, The young men make

obeisance to their parents and elders and then drive a pair of bullocks into the paddy fields , where they turn the heads of the beasts towards the East. The land lord now offers coconuts and plantains, rice and milk to the presiding deity of his Nad, and lifting up his hands in adoration to the rising SUN Invokes a blessing.

The oxen are yoked and three furrows ploughed, When the work is finished for that – morning. Of the turned earth they take a clod home to the store house or granary praying god to grant them a hundred fold increase…."[9]

ಮೀನಿಯಾರ್ ಪೋಕ್‌ಲ್
ಎಡೆಮಿಯಾರೆದ್ ಪುಲ್
ಚಂಗ್‌ರಾಂದಿ ನಾಳಾಯಿ
ಪೊಂಬೋಲೆ ಪೊಲುವಕ್ಕ
ಕೈಮರುವೆಳೆ ಬಾಲ
ಮೈನೆಟ್ಟಿ ತೊರಕೆದ್ದ್
ಪೊಂಬಡಿ ತೊರಂದಿತ್
ಸೂರಿಯನ ತೊತ್ತಿತ್……….[10]

ಪಂಡ್ ಮೊನ್ನತ್ ಬಾಣ ಗೊಬ್ಬರ ಬೇಲ್‌ಕ್ ಇಟ್ಟ್‌ರುವ. ಕರೆ ಬಾಣೆಲುಳ್ಳ ಕೊಕ್ಕಲೆನೆಲ್ಲಾ ಬೇಲ್‌ಲ್ ಗುಡ್ಡೆ ಇಟ್ಟಿತ್ತ್ ಪೊಣ್ಣಾಳ್ ತಿತ್ತ್ ಕೊಡ್‌ಪಯಿಂಜತ್.ಈ ನಡ್‌ಪು ಇಕ್ಕಲೂ ಕೆಲವು ವಕ್ಕಕಾರಡಲ್ಲಿ ಉಂಡ್. ಮೀನ್ಯಾರ್ ಬೆಮ್ಮರಿವ ದಿವಸ ಬಂದನಕ್ಕೇ ತೆಕ್ಕ್– ಪಡಿಂಞಾರ್‌ಲುಳ್ಳ ಮಾಕಡ ತಿಂಜ ಪದ್‌ಕ ತಣ್‌ತಕಾತ್ ಕುಂದ್‌ರ ಕೊಡಿಯ ಬೀಜುವಕ್ ಸುರುಮಾಡುವ. ಮೋನ್ನತೂ, ಎಡಮ್ಯಾತೂ, ಬೆದ್ ಕಾಂಜಂಡುಂಡೆಂಗಿಯೂ, ಎಡೆಲೋರಮ್ಮ ಮಳೆತಾಂಡ ತಾಕತ್ತ್ ಕಾಟುವ. ಮಂದತೆ ಮೋಡ ಪಡಿಂಞ್ಞಾರ್ ಕತ್ತಟಿ ಭೂಮಿ–ಆಕಾಶ ಒಂದಾಪ ನಾಳ್ ಬಾತ್ ಎಣ್ಣುವ ಸೂಚನೆ ಕಾಟ್ಯಂಡ್ ಪಕ್ಕಲೆಲ್ಲಿಯೋ ದಾರೊ ಬೊಡಿ ಬೆಚ್ಚ ಸದ್ದ್‌ರನಕೆ, ತೆಡ್ ಬಡ್‌ಚಂಡ್, ಕೂಡೇ ಆ ಕುಯ್ಯಿರ್‌ಟ್‌ನ ಮುರ್‌ಚಂಡ್, ಬಲ್ಯೋರ್ ಒಡಿಕತ್ತಿ ಮಿನ್ನಿಯಂಡ್ ಬಂದನಕೆ ನಂಗಳ ಬೊತ್ತ್‌ಚಿಟ್ಟಿತ್ತ್ ಕಣ್ಣ್‌ಮುಚ್ಚಿಚಿಡುವ.

9 Gazetteer of coorg – G Richter 1870- P.No.88

10 ಪಟ್ಟೋಲೆ ಪಳಮೆ P.No. 241(1924)

ಎಡೆಮಳೆ ಪೊಜ್ಜಿತ್, ಬೇಲ್ ಚೆನ್ನ ಪದ ಬುದ್ದಿತಿಪ್ಪ. ಎಡಮ್ಯಾರ್ ಒಂದಾಂಗ್ ಸೂರಿಯ ಉದಿಪಾಂಗ್ ಮುಪ್ಪಡೇ, ತಳಿಯತಕ್ಕಿ ಬೊಳ್‌ಚ ಬಾಡೆಲ್ ಕತ್ತಿಚ್ಚಿತ್ ವಕ್ಕಕಾರ ಎಲ್ಲಾ ಕೂಡಿತ್ತ್ ನೆಲ್ಲಕ್ಕಿಲಕ್ಕಿ ಇಟ್ಟಿತ್ತ್ ಪೆರಿಯಯಿನ, ಗುರುಕಾರಣನ ತುದಿಚಂಡ್, ಕನ್ನಿಕಂಬ್‌ರ ಕಾಲ್‌ಪುಡಿಚಂಡ್, ಉಪ್ಪಕ್ ಪೋಪ ಬಾಲ-ಅಪ್ಪ ಅವ್ವಂಡಮು, ಪೆರಿಯಯಿಂಡದೂ ಕಾಲ್ ಪುಡ್‌ಚಂಡ್, ವಾರಕೆತ್ತಳ ಆಟಿಯಂಡ್ ಯಾಕಕ್ ಪೋಯಿತ್ತ್, ಅತ್ತಳ ಕೇಕ್‌ಕ್ ಮೂಡ್ ಮಾಡಿ ನಿಪ್ಪಿಚಿಟ್ಟಿತ್ತ್, ತೆಂಗೆವಡ್‌ತಿತ್ತ್, ಬಾಳೆಪಣ್ಣ್, ಪಾಲ್‌ಕೂಳ್ ಕೊಡಿಎಲಕಂಡತ್ತ್ ಬೆಚ್ಚಿತ್ತ್ ತಂಗಡ ಊರ್‌ರ ದೇವಳ ಬೋಡಿಯಂಡ್, ಚೂರಿಯಂಗ್ ಅಕ್ಕಿ ಇಟ್ಟಿತ್ತ್ ದಂಡೂ ಕೈ ಎಡ್‌ತ್ ತೊತ್ತ್ ಬೋಡಿಯಂಡಾನಮು. ಅತ್ತಕ್ ನೊಗ ಬೆಚ್ಚಿತ್, ನೇಂಗಿ ಕೆಟ್ಟಿತ್ತ್ ಮೂಂದ್ ಸಾಲ್ ಉಪ್ಪ. ಮೂಂದ್ ಸಾಲ್ ಉತ್ತಿತಾನಮು, ಉತ್ತ್‌ಮರ್‌ಂಜ ಮಣ್ಣ್‌ಲೋರ್ ಕಟ್ಟ ಮಣ್ಣ್‌ನ, ಮನೆಕ್ ಎಡ್‌ತ ಬಂದಿತ್ತ್, ತುಳಿಯ ಅಲ್ಲೇಂಗಿ ಪತ್ತಾಯತ್‌ರ ಪಕ್ಕ ಬೆಚ್ಚಿತ್ತ್ ಅಲ್ಲಿಯೇ ನಿಂದಂಡ್–"ಬೊತ್ತೋದ್ ಬೋಂಡ ತುಳಿಯವೇ– ನಾನ್ ಉತ್ತಿತ್ ಬಂದಿಯೇಂದೂ. ಬಿತ್ತ್ ಇಡುವ ನೆಲ್ಲ್‌ರ ಓರೋರ್ ಕುರು ನೆಲ್ಲೂ ನೂರಟ್ಟಿಯಾಡೇಂದ್" ದೇವರ ಬೋಡಿಯವ.

ಇಲ್ಲಿ ಕೊಡವ ಮಣ್ಣ್‌ರ ಕಟ್ಟಿನ ಬಿಸು ಚಂಗ್ರಾಂದಿಯಂದ್ ಮನೆಕ್ ಎಡ್‌ತ ಬಂದಿತ್ತ್ ತುಳಿಯತ್‌ರ ಪಕ್ಕ ಬೆಪ್ಪ. ತುಳಿಯತುಳ್ಳ ನೆಲ್ಲ್‌ನ ಬೇಲ್‌ಕ್ ಬಿತ್ತ್ ಇಟ್ಟಕ ಓರೋರ್ ಕುರು ನೆಲ್ಲ್ ಮೊಳಕೆ ಬಪ್ಪಕ್, ಭೂಮಿರ ಈ ಮಣ್ಣ್ ಕಾರಣ. ಆ ಪವಿತ್ರ ಬೂತಾಯಿ ಇಲ್ಲೇಂಗಿ – ಆ ಮಣ್ಣ್ ಇಲ್ಲೇಂಗಿ– ಈ ಸೃಷ್ಟಿಯೇ ಇಪ್ಪುಲೇಂದ್ ಎಣ್ಣುವ ಜ್ಞಾನತ್‌ರ ಸಂಕೇತ ಇದ್‌ಂದ್ ಎಣ್ಣೊಲು. ಕೊಡವಡ ಈ ನಂಬಿಕೆ, ಸಂಸ್ಕೃತಿ ಮಣ್ಣ್‌ಕ್ ಕೊಡ್‌ಪ ಪ್ರಾದಾನ್ಯತೆಲ್, ವೈಜ್ಞಾನಿಕ ದೃಷ್ಠಿ ಉಂಡ್‌ಂದ್ ಅರಿಯೊಲು.

## ಬಿ) ತೀರ್ಥರೂಪಿಣಿಯಾನ ಕಾವೇರಿ ಕೊಡವಡ ಕುಲದೇವ

ಈ ಸೃಷ್ಠಿಕ್– ಭೂತಾಯಿಕ್ ನೀರ್ ಇಲ್ಲೇಂಗಿ ಎನ್ನಾಕು? ಭೂಮಿ ಇಲ್ಲೇಂಗಿ ನೀರ್ ಇಲ್ಲೆ, ನೀರ್ ಇಲ್ಲೇಂಗಿ ಭೂಮಿ ಇಲ್ಲೆ ಈ ಬ್ರಹ್ಮಾಂಡತ್ ಭೂಮಿ ಎಚ್ಚಕ್ ಮುಖ್ಯವೂ ಅಚ್ಚಿಕೇ ಮುಖ್ಯ ನೀರ್. ತೀರ್ಥರೂಪಿಣಿಯಾನ ಕಾವೇರಿ ಮಾತೆ ಕೊಡವಡ ಕುಲದೇವಿ. ಕಾವೇರಿ ಉದ್‌ಚ ತಲಕಾವೇರಿಲ್ ಇಂದೂ ತೀರ್ಥರೂಪಿಣಿಯಾಯಿತುಳ್ಳ ಕಾವೇರಿಕೇ ಕೊಡವ ಕುಂಬ್ ಇಡುವೂ.

ಕೊಟ್ಟೊಂದ್ ಮರಿಕಣೆ, ಪಾಡುವ ತರ ಬೋರೆ, ಎನ್ನ ಮೊಳಿ ಪಾಡನ?

ಏದ್ ದಿಕ್ಕ್ ಪೋಕನ? ಆರ್‌ನ ತುದಿಕನ? ಂದೆಣ್ಣುವ ಎಲ್ಲಾ ಪ್ರಶ್ನೆಕೂ ಉತ್ತರ ಒಂದೇ! ಅಲ್ಲತಾರೊ..........ಅಲ್ಲಲ್ಲ....... ಕಾವೇರಮ್ಮೆ ಮಾತಾಯಿ[10]........ಕಾವೇರಿ ಮಾತೆರ ಕರುಣೆಗೊಂಡ್ ನಂಗಕ್ ಈ ಭೂಮಿ –ನೀರ್ ಉಳ್ಳೊಂದ್ ಕೊಡವ ನಂಬುವ. ಪೊಲಾಕೆದ್ದೆತ್ ಕುಳ್‌ಚಂಡ್ ಪೊಣ್ಣಾಳ್ ಬಾಡೆ ಮನೆ ಒಡ್‌ಕಿತ್ತ್– ಚಾಣತ್ತ್ ನೀರ್ ತಳ್‌ಚ್ಚಿತ್ತ್ ಬಾಡೆಕ್ ಬೊಳ್‌ಚ– ನೆಲ್ಲಕ್ಕಿ ಬೊಳ್‌ಚ ಬೆಚ್ಚಿತ್ತ್ ಕೂವ– ಕಣತರೆಂಜ ಪುದಿಯ ನೀರ್ ಕೊಂಡಬಂದಿತ್ ಮನೆರ ಎದಿಕೆ ಪಡಿರ–ಎಡ್‌ತ ಬರಿಲ್ ಓರ್ ಚೊಂಬ್ ನೀರ್‌ಕ್ ಓರ್ ಚೂರ್ ತುಳಸಿ ಇಟ್ಟಿತ್ತ್ ಬೆಪ್ಪ. ಇದ್ ಮನೆಕ್ ಬಪ್ಪ ದೇವಕೂ, ಪೆರಿಯಯಿಂಗಳಾನ ಗುರು ಕಾರಣಂಗಕೂಂದ್ ಅರ್ಥ. ಬೆಂದ್‌ಕ ದಾರೇಂಗಿ ಮನೆಕ್ ಬಾತೆಂಗಿ ಆ ಚೆಂಬ್‌ಲ್ ನೀರೆಡ್‌ತಂಡ್ ಕಾಲ್ ಕತ್ತಿಯಂಡ್ ಒಳ್‌ಕ್ ಬಪ್ಪ. ಚೆಂಬ್‌ಲ್ ನೀರ್‌ನ ಎಡ್‌ಕತೆ ಒಳ್‌ಕ್ ಬಪ್ಪಕಾಗ – ಚೊಂಬ್‌ಲ್ ನೀರ್ ತೊಟ್ಟಿತ್ತೇ ತೊಡೊಂಡುಂದೆಣ್ಣುವ ನಂಬಿಕೆ – ನಿರ್‌ಕ್ ಕೊಡವಡಲ್ಲಿ ಇಕ್ಕಲೂ ಉಂಡ್.

ಕ್‌ಣ್ಣ, ಮೂಡಿನ ನೋಟೋಕ್ ಪೋನಲ್ಲಿಂಜ "ಇಂದ್ ನೀರ್ ಬೆಚ್ಚೋಲೆ, ಎಂದೂ ನೀರ್ ಬೆಪ್ಪೇಂಗಿ, ಬೆಚ್ಚ ನೀರೆಡ್‌ಪಿನೊ, ಮೇಲೆ ನೀರ್ ಕೇಪಿನೋ"10 ಮಂಗಲತ್– ಬಾಳೆರಡಿಂಜ ಪುಡ್‌ಚಕ, ಮಂಗಲಕ್ ಬಂದ, ಚೆಂದುವಳ ಮಂಗಲಕರ್ತಿ ಮೂಡಿರವ್ವ/ಮಂಗಲಕಾರ ಕ್‌ಣ್ಣಂಡ ಅವ್ವ ಉಂಬಕ್ ಏಳಿಂದೆಣ್ಣುವದೂ ಚೊಂಬ್‌ಲ್ ನೀರೆಡ್‌ತಂಡೇ. ಮಂಗಲಕರ್ತಿ–ಕ್‌ಣ್ಣಂಡ ಪೊಣ್ಣಾಪೊ, ಕೊಂಬರೆಕ್ ಕೊಟುವೊ ಚಾಣ ನೀರ್ ಕಯಿಚ ಪಿಂಞವೇ. ಪೆತ್ತಲ್ಲಿ ಪೊಣ್ಣಾಳ್‌ಕ್ ಪೋಲೆ ನೀಂಗುವದೇ ಅರುವದ್ ನಾಳ್ ನೀರ್ ಎಡ್‌ತ ಪಿಂಞ. ಪ್ರತಿಯೋರ್ ಕೊಡವನೂ ಕಾವೇರಿ ಚಂಗ್ರಾಂದಿರ ತೀರ್ಥ ಎಡ್‌ತಬಂದಿತ್ತ್ ಮನೆಲ್ ವಾರೆಂಡೆಕತ್ತಣೆ ಬೆಚ್ಚವ. ಪ್ರಾಣ ಪೋಪ ಸಮಯತ್ ಬಾಡೆಕ್ ಎಡ್‌ತಿತ್ತ್ ಪೌನ್ ಚೂರ್ ಬಾಯಿಕ್ ಇಟ್ಟಿತ್ತ್ ತೆಂಗೆ ನೀರ್‌ರ ಕೂಟ್‌ಕ್ ಕಾವೇರಿ ತೀರ್ಥ ಬಾಯಿಕ್ ಮನೆಲೆಲ್ಲಾರೂ ಬೂಕುವದ್ ಕೊಡವಡ ಪದ್ದತಿ. ಕಾವೇರಿ ಕುಂಡಿಕೆ–ಬ್ರಹ್ಮಕುಂಡಿಕೆರ ತೀರ್ಥ ತೊಲ್ಯಾರ್ ಚಂಗ್ರಾಂದಿಯಂದ್ ಮನೆಕ್ ಎಡ್‌ತ ಬಂದಿತ್ತ್ ಬೆಚ್ಚಕ ಅದ್ ವಾರಂಡ್, ದಂಡ್‌ಕಾಲ ಆಚೆಂಗಿಂಡೂ ಒರ್ ಚೂರೂ ಪಾಳಾಪುಲೆ. ವಾಸನೆ ಬಪ್ಪದಾಡ್– ಪಾವುಂಜಿಕಟ್ಟುವದಾಡ್ ಒಂದೂ ಆಪುಲೆ. ಕೊಂಡ ಬಪ್ಪಕ ಎನ್ನನಿಂಜತ್ ಅನ್ನನೇ ಇಪ್ಪ. ಇದ್ ನೋಟ್ಟಕ ಸ್ಕಂದಪುರಾಣ ಆದಾರಿತ ಕವಿರಂಗ ವಿರಚಿತ ಕನ್ನಡ ಷಟ್ಪದಿ ಕಾವ್ಯತ್‌ರ ಸಾಲ್ ಗ್ಯಾನಬಪ್ಪ.

ಮೂರು ಲೋಕದೊಳಿಲ್ಲವೀ ಕಾ
ವೇರಿಗಂ ಸರಿಯಾದವರು ಮಿಗೆ
ಘೋರ ಪಾಪಿಗಳಘವ ನೀಗುವ ಪುಣ್ಯನದಿಯಾದಾ
ಚಾರು ಗಂಗೆಯೆ ಮದ್ಯದೇಶವಿ
ಹಾರಿಯಾಗಿಹೊಲೀ ಮಹಾ ಕಾ
ವೇರಿ ದಕ್ಷಿಣದಲ್ಲಿ ಪುಣ್ಯದೆಯಾದಳಹುದೆಂದ......... [11]

ಪವಿತ್ರ ಕಾವೇರಿ ತೀರ್ಥಕ್ ಈ ಮೂಂದ್ ಲೋಕತ್ತೂ.....ಸಮದಾರುಂಡ್? ತೊಲ್ಯಾರ್ ಚಂಗ್ರಾಂದಿಕ್ ಮೂಂದ್ ಲೋಕತ್ತ್ ಪೆದಪೋನ ಗಂಗೆ, ಯುಮನೆಯೂ ಕೂಡಿ ಪವಿತ್ರ ಏಳ್ ಪೊಳೆಯೂ ಕಾವೇರಿನ ಕೂಟಿತ್ ಏಳ್, ಮೂಲ ಕಾವೇರಿಲ್ ಕುಳಿಪಾಂದೂ – ಮೂಲ ಕಾವೇರಿ ತೀರ್ಥಕ್ ಕೂಡುವಾಂದೂ, ಕೂಡಿತ್ ಕೃಚಂಗ್ರಾಂದಿಕತ್ತಣೆ ಒರ್‌ತಿಂಗ ಏಳ್ ಮಾಪೊಳೆಯೂ ತಲಕಾವೇರಿಲೇ ಇಪ್ಪಾಂದ್ ಸ್ಕಂದ ಪುರಾಣ ಎಣ್ಣುವ. ಮೂಲ ಕಾವೇರಿ–ತಲಕಾವೇರಿಕ್ ಮೊದಲ್ಕಾವೇರಿಂದ್ ಮಡಿಕೇರಿ ಶಾಸನತುಂಡೇಂದ್(ಕ್ರಿ.ಶ.1001) ಎಣ್ಣುವ.[12] ತೆಕ್ಕ್‌ಲುಳ್ಳ ಭಾರತಕ್ ಕೋಟಿ, ಕೋಟಿ ಕಾಲತ್‌ರ ಭೂ ಇತಿಹಾಸ ಉಂಡ್. ಭೂವಿಜ್ಞಾನತ್ ಓರ್ ಕಾಲತ್ ಬಡ್‌ಕ್– ಭಾರತವೆಲ್ಲಾ ಸಮುದ್ರ ಆಯಿತಿಂಜತ್. ತೆಕ್ಕ್ ಬರಿ, ಏಷ್ಯಾ ಖಂಡತ್‌ರ ಕೂಡೆ ಡಿಕ್ಕಿ ಪೊಜ್ಜಿತ್ ಅದ್‌ನುಂಡ್ ಟಿಬೇಟ್ ಪ್ರಸ್ಥಭೂಮಿ ಪಿಂಞ ಹಿಮಾಲಾಯ ಕುಂದ್ ಆಚೇಂದ್ ಡಾ.ಆರ್. ನಿಜಗುಣಪ್ಪ "ಪ್ಲೇಟ್ ಟೆಕ್ಟಾನಿಕ್ಸ್ ಎಂದರೇನು?" ಲ್ ಎಣ್ಣುವಾಂದ್ ಡಾ.ಎಂ.ಜಿ.ನಾಗರಾಜ್ ಅಯಿಂಗ ಎಣ್ಣುವ. ಮುಂಬೆಳ್ತ್‌ಲ್ ಎಣ್ಣನಕೆ ವೈಜ್ಞಾನಿಕವಾಯಿತೂ ಚೂರಿಯ ಭೂಮದ್ಯೆ ರೇಖೆನ ದಾಟುವ ಪುಣ್ಯಕಾಲತ್, ವಿಷ್ಣುಪರಮಪಾದತ್‌ರ ಪಕ್ಕ ಚೂರಿಯನೆತ್ತುವ ಸಮಯತ್ ಕೊಡವು ನಾಡ್‌ಡ ಕನಪಟ್ಟ ನೈರುತ್ಯ ದಿಕ್ಕ್‌ಲುಳ್ಳ ಮೂಲಕಾವೇರಿ–ತಲಕಾವೇರಿಲ್, ತೀರ್ಥ ಒಕ್ಕಿ ಬಪ್ಪ. ತೊಲ್ಯಾರ್ ಚಂಗ್ರಾಂದಿ ನಡ್‌ಪ. ಪೆದಪೋನ ಏಳ್‌ಮಾಪೊಳೆಯೂ ಕೂಡಿ ಕಾವೇರಿಲ್, ಕೃಚಂಗ್ರಾಂದಿ ಕತ್ತನೆ ಇಪ್ಪಾಂದೆಣ್ಣುವದೂ ವಿಷ್ಣು ಪರಮಪಾದತ್‌ರ ಬಯಿಪೋಕ್‌ಲೇ ಭೂಮಿ ಸುತ್ತುವ ಕ್ರಿಯೆರ ಆದಾರತ್‌ೇಂದ್ ಎಣ್ಣುವದ್ ವೈಜ್ಞಾನಿಕವಾಯಿತೂ ಸತ್ಯ ಋಗ್ವೇದತ್ ತೊಲ್ಯಾರ್ ಚಂಗ್ರಾಂದಿರ ವಿಷಯವುಂಡ್. ತೊಲ್ಯಾರ್ ಚಂಗ್ರಾಂದಿಲ್ ತೆಂಗೆ ವಡತಿತ್ ಮೀದಿ ಬೆಪ್ಪದ್ ವೇದ ಕಾಲತ ಪದ್ಧತಿ.

ಕಾವೇರಿ ಮಾತೆ– ಕವೇರಂಡ ಮೋವ ಆನಂಗ್ ಕಾವೇರೀಂದ್ ಪೆದ ಬಾತ್‌ಂದೂ ಆಂಗ್ ಮಿಂಞ ಬ್ರಹ್ಮ ದೇವಂಡ ದತ್ತ್ ಕುಂಞಿ ಲೋಪಮುದ್ರೆ

11 ಕವಿರಂಗ ವಿರಚಿತ ಕಾವೇರಿ ಮಾಹಾತ್ಮೆ– P.No. 171

ಎಣ್ಣುವ ಪೆದ ಇಂಜತೂಂದೂ ಸ್ಕಂದ ಪುರಾಣ ಎಣ್ಣುವ.

ಸ್ಕಂದ ಪುರಾಣ 8ನೇ ಅಧ್ಯಾಯತ್ ಇನ್ನನೆ ಉಂಡ್.
ಸರ್ವಭೂತಹಿತಾರ್ಥಾಯ ಪೂರ್ವಾಪರಸಮುದ್ರಗಾ||
ಅಸಹ್ಯಸಾಗರಾಂತಂ ಸಾ ಸರ್ವತೀರ್ಥಮಯಿ ನದೀ|[13]

ಬ್ರಹ್ಮಗಿರಿ ಕುಂದ್‌ಂಜ ಒಕ್ಕುವ ಕಾವೇರಿ ಸಮುದ್ರಕತ್ತಣೆ ಎಲ್ಲಾ ತೀರ್ಥಕೂಡಿತುಳ್ಳ ಪೊಳೆಯಾಯಿ ಪರಿವ. ಅಲ್ಲತೆ ಎಲ್ಲಾ ಜೀವಿಯಕ್ ನಲ್ಲದ್ ಮಾಡೋಕ್ಕಾಯಿತ್ ಕೇಕ್– ಪಡಿಞರ್ ದಂಡೂ ದಿಕ್ಕ್‌ಲ್ ಸಮುದ್ರಕ್ ಒಕ್ಕುವ. ಸ್ಕಂದ ಪುರಾಣವೂ, ಪಟ್ಟೋಲೆ ಪಳಮೆಯೂ ಭೂ ವಿಜ್ಞಾನವು, ಕಾವೇರಿ ದಂಡ್‌ವಡೆಯಾಯಿ ಒಕ್ಕಿಯಂಡಿಂಜಂತ್‌ಂದ್ ಎಣ್ಣುವ.

ನುಡಿದಳೆಲೆ ಮುನಿವರನ ಶಾಪದಿ
ಮಿಡುಕುತಿಹ ವಿಪ್ರರಿರ ನಿಮಗಾಂ
ಕೊಡುವೆನಖಿಳೈಶ್ವರ್ಯಮಂ ಚಂದ್ರಾರ್ಕರಿರ್ಪನ್ನ
ಕಡುನಿಷೇಧವು ಪೊರ್ದದಿರಲೆಂ
ದೊಡನವರಿಗೊರವಿತ್ತು ತನ್ನಯ
ಪೊಡೆಯ ಪೋಳೆರಡಾಗಿ ಸೀಳ್ದಳು ಪೇಳಲೇನಂದ[14]

ಕೊಡವು ದೇಶತ್ ವಾಸ ಇಂಜ ಪಟ್ಟಮ ಅಗಸ್ತ್ಯ ಋಷಿ ಶಾಪತಿಂಜ, ಬೊತ್ತಿತ್ ಬೊರಂಡಿಯಂಡಿಪ್ಪಕ, ಕಾವೇರಿ ಮಾತಾಯಿ–ಚೂರಿಯ ಚಣ್ಣೂರಂಗ ಇರಣೆ, ಎಲ್ಲಾ ತರತ ಬಾಗಿಯ ಇಪ್ಪಾಂದೆಣ್ಣುವ ವರ ಕೊಡ್‌ತಿತ್, ತಾಂಡ ತಡಿನ ದಂಡಾಯಿ ವಡ್‌ತತ್‌ಂದ್ ಈ ಕೊಡಿಲುಳ್ಳ ಕವಿರಂಗ ವಿರಚಿತ ಕನ್ನಡ ಷಟ್ಪದಿಕಾವ್ಯತ್‌ರ ಸಾಲ್ ಎಣ್ಣುವ.

ಬೊಳ್ಳಿಕೊಂಬ್ ಕುಯ್ಯತ್
ಚಿತ್ತಾಲ್ ಮದುವಡಿ
ಅಲ್ಲಿ ಕೂಡಿ ನಿಂದಿತ್ತ್
ದೇವ– ದೇವಿ ದಂಡಾಳು
ತಕ್ಕ್‌ಬಾಕ್ ತ್‌ಪಕ್ಕ
ಚಿತ್ತಾಲ್‌ಡ ಕುಂಬ್‌ಯೊ
ವಾಯುಕಾತಡಿಕಣೆ
ತೊಪ್ಪ್‌ತೊಪ್ಪಲೆ ಪೊಜ್ಜ

ಅಲೆ ಪೊಜ್ಜ ಸದ್ದ್‌ಕ್
ತಕ್ಕ್- ಬಾಕ್ ಕೇಟ್‌ಲೆ
ಅಕ್ಕಣೆ ಮುನಿರಾಯ
ಮೈದುಂಬಿ ಚೊಡಿ ಬಂದ್
ಸದ್ದ್! ಸದ್ದ್! ಒದೆಣ್ಣ್‌ನ
ಆ ಬಾಕ್‌ನ ಕೇಟಿತ್ತ್
ಚಿತ್ತಾಲ್‌ಡ ಕುಂಞಿ‌ಯೊ
ಅಂದ್ ತೊಟ್ಟ ಇಂದೋಳ
ಸದ್ದಡ್‌ಂಗಿ ನಿಂದಿತ್..! [15]

ಈ ಬಾಳೋ ಪಾಟ್‌ಲ್ ಬೊಳ್ಳಿ ಕೊಂಬ್ ಗುಯ್ಯಂದೇ....ಪಾಡುವ. ಗುಯ್ಯಂಜ ಕಾವೇರಿ ದಂಡಾಯಿತೊಡಂಪತ್‌ಂದ್ ಎಣ್ಣುವ. ಕಾತ್ ಬೀಜೋಕ ಚಿತ್ತಾಲ್‌ಡ ಮರತ್‌ರ ಎಲೆಕಂಡತ್‌ರ ಸದ್ದ್‌ಕ್ ಮೋಪು ಕೂಟತ್ ತಕ್ಕ್ ಸೆರಿಯಾಯಿತ್ ಅಪಡ್ಡ್ ಕೇಕತಿಪ್ಪಕ ಅಗಸ್ತ್ಯಋಷಿ ಚೆಡಿ ಬಂದಿತ್ತ್ ಆಲ್ ಮರತ್‌ರ ಕುಂಞಿಕ್ ಸದ್ದ್! ಸದ್ದ್!ಂದೆಣ್ಣಿಚೀಂದೂ! ಬಾಳೋ ಪಾಟ್ ಎಣ್ಣುವ. ಇಕ್ಕಲೂ ಗುಯ್ಯತುಳ್ಳ ಆ ಚಿತ್ತಾಲ್‌ಡ ಮರಕ್ ಬಲವಾಯಿತ್ ಕಾತಡ್‌ಚಕಲೂ ಎಲಕಂಡ ಸದ್ದೇ ಮಾಡುಲೆ! ಇದ್ ಓರ್ ಆಶ್ಚರ್ಯಾಂದ್ ತೋಂದ್‌ನಕಲೂ ನಂಗಡ ಕಣ್ಣ್‌ಗೊಂಡ್ ಇಂದೂ ಕಾಂಬಳಸತ್ಯ. ಅನ್ನನೆ ಮಿಂಜಕ್ ಪಾಡಿಯಂಡ್

ಎಇೂ ಕೇಳ್ ಸಂಜಾದಿ,
ದೇವ ದೇವಿ ದಂಡಾಳೂ
ತಕ್ಕ್ ಬಾಕ್ ತ್‌ೀತಿತ್
ಕಾವೇರ್ಯಮ್ಮೆ ಮಾತಾಯಿ
ದಂಡಾಯಿ ತೊಡಂದತ್....... [15]

12 ಡಾ. ಎಂ.ಜಿ. ನಾಗರಾಜ್ ಶಾಸನ ಶಾಸ್ತ್ರಜ್ಞರು. "ಭೂ ಇತಿಹಾಸದ ಬೆಳಕಿನಲ್ಲಿ ಕೊಡಗಿನ ಕಾವೇರಿ ಮತ್ತು ಗಂಗೆ"

13 ಶ್ರೀ ಸ್ಕಾಂದಪುರಾಣಾಂತರ್ಗತ ಶ್ರೀ ಕಾವೇರಿ ಮಾಹಾತ್ಮ್ಯೆ- ತಲಕಾವೇರಿ ನಾರಾಯಣಾಚಾರ್ಯ ವಿಕಚಿತ (1948)

14 ಕವಿರಂಗ ವಿರಚಿತ ಕಾವೇರಿ ಮಾಹಾತ್ಮ್ಯೆ(ಸ್ಕಂದಪುರಾಣಾದಾರಿತ ಪ್ರಾಚೀನ ಹಸ್ತಪ್ರತಿ)

15 ಪಟ್ಟೋಲೆ ಪಳಮೆ – ನಡಿಕೇರಿಯಂಡ ಚಿಣ್ಣಪ್ಪ.

ಪಂಡ್ ಕಾವೇರಿ ಪೊಳೆ ದಂಡಾಯಿತಿಂಜತ್‌ಂದ್ ಎಣ್ಣುವ ಪುರಾಣಿಕ ಸೂಚನೆ– ಕೊಡವಡ "ಪಳಮೆ"ಕೂಡ್‌ಪನಕೆ ಎಲ್ಲಾ ಕವಿಯಡ ಮೂಲ ಸ್ಕಂದ ಪುರಾಣ ಆದಾರಿತ ಎಳ್ತ್‌ಲೂ ಕಾಂಗೊಲು. ಅನ್ನನೇ ಸುಮಾರ್ ಭೂ ವಿಜ್ಞಾನಿಯ, ಪಂಡಿತಂಗ ಕಾವೇರಿ ಕೇಕ್–ಪಡಿಂಞಲ್ಲ್ ದಂಡ್ ದಿಕ್ಕ್‌ಲೂ ಪರ್‌ಂಜಂಡಿಂಜತ್ತ್‌ಂದ್ ಎಣ್ಣುವ.

"The river Barapola originates from the peak of Tumbemale in Marenad and flows eastward upto a distance of about ten miles joined by many tributary streams like – Teralupole, Bommanjipole and Kittapole, besides several other smaller streams. At a place called Kikkat, it takes a northward turn and a little further, a Westward turn. At this point it forms a 'U' shaped bend. There is no reason why it should not have flowed eastward in the geological times, instead of taking a westerly course. This event seems to have taken place in comparatively recent times. The 'U' shaped bend near Kikkat definitely suggests "river capture" of the easterly rivers by the westerly main stream. Gradually the easterly drainage was being en croachead upon by the river Barapole" [16]

"ಕಾವೇರಿ ಹರಿವಿನ ಗತಿಯನ್ನು ನಿರ್ಧರಿಸುವಲ್ಲಿ ತಳಶಿಲೆಯ ಪ್ರಭಾವವೂ ಬಹಳ ಕಡಿಮೆ ಈ ರೀತಿಯಲ್ಲಿ ಜವ್ವನದ ನದಿ ಮತ್ತು ವೃದ್ಧನದಿಗಳ ಸ್ವರೂಪಗಳೆರಡನ್ನೂ ಒಳಗೊಂಡಿರುವ ಇಲ್ಲಿಯ ಕಾವೇರಿ, ಭೂ ವ್ಯಾತ್ಯಾಸಗಳಿಂದ ಪುನರ್‌ಯೌವನವನ್ನ ಪಡೆದಿರಬಹುದು ಎಂದು ಅನ್ನಿಸುತ್ತದೆ [17]" ಬಾಳೋಪಾಟ್‌ಲುಳ್ಳನಕೆ ಗುಯ್ಯ (ಗುಹ್ಯ) ಸಿದ್ದಾಪುರತ್‌ರ ಪಕ್ಕ ಕಾವೇರಿ–ವಾಯವ್ಯ (North – West) ದಿಕ್ಕ್‌ಕ್ ತಿರುವಲ್ಲಿ ಇಂಗ್ಲೀಷ್ ಅಕ್ಷರ 'U' ಅಕಾರತ್ ಕಾವೇರಿ ಪೊಳೆ ವೊಕ್ಕುವದ್ ಇಕ್ಕಲೂ ಕಾಂಗೊಲು. ಎಣ್ಣಕ ಭೂಪದರತ್ ವ್ಯಾತ್ಯಾಸ ಆನಕಾಲತ್ – ಹಿಮಾಲಾಯ, ಅರಬ್ಬಿ ಸಮುದ್ರ ಇಲ್ಲತಂತ ಕಾಲತ್, ಕಾವೇರಿ, ಆಫ್ರೀಕಾತ್‌ರ ಮಡಗಾಸ್ಕರ್ ಕತ್ತಣೆ ಒಕ್ಕುವಯಿಂಜತ್‌ಂದೂ ಮಡಗಾಸ್ಕರ್‌ರ ಈಶಾನ್ಯತ್ ಮಹಾಜಂಘಾದ್ ಎಣ್ಣುವ ಪೆದತ್‌ರ ನೆಲೆ ಕೊಡಗ್‌ರ ಮಹಾಂತೋಡ್‌ರ ಪೆದವಾಯಿತಿಕ್ಕುವಾಂದ್ ಭೂ ವಿಜ್ಞಾನಿಯ ಅಭಿಪ್ರಾಯ ಪಡುವ. 'ಜಂಘಾ'

---

16 Keethiyanda K Subbaiah- Archaeology of Coorg P.No.18-19

17 ಕರ್ನಾಟಕ ರಾಜ್ಯ ಗ್ಯಾಸೆಟಿಯರ್– ಕೊಡಗು ಜಿಲ್ಲೆ – P.No 14

ಎಣ್ಣ್‌ವದ್ ಸಂಸ್ಕೃತ ಶಬ್ದ – ಬಲ್ಯ ತೊಡೇಂದ್ ಅರ್ಥ. ಕಾಂಟಿನೆಂಟಲ್ ಸಿದ್ಧಾಂತ ಪ್ರಕಾರ ದಕ್ಷಿಣ, ಮಧ್ಯ ಭಾರತ–ಆಫ್ರಿಕ ಪಕ್ಕ–ಪಕ್ಕ ಜೊಡ್‌ಚಿಟ್ಟನೆಕೆ ಅರಬ್ಬಿಸಮುದ್ರ ಪುಟ್ಟುವಾಂಗ್ ಮುಪ್ಪಡೇ ಇಂಜತ್.

ದಕ್ಷಿಣ ಭಾರತತ್‌ರ ಪೊಳೆಯಲ್ಲಾ ಉತ್ತರ ಬಾರತತ್‌ರ ಪೊಳೆಕಿಂಜ ಪೆರಿಯದ್‌ಂದ್ ಎಣ್ಣುವದೂ, ಭೂ ವೈಜ್ಞಾನಿಕತ್‌ರ ಆದಾರ ಎಡ್‌ತಂಡಕ ಕಾವೇರಿಯೇ ಗಂಗೆಕಿಂಜ ಪೆರಿಯವಾಂದ್ ನಂಕಿಲ್ಲಿ ಗೊತ್ತಾಪ. ಓರ್‌ಕಾಲತ್ ಉತ್ತರ ಭಾರತ ಸಮುದ್ರ ಆಯಿಂಜತ್! ತೇತಿಸ್ ಸಮುದ್ರ. ಸ್ಕಂದ ಪುರಾಣತ್–ಚೂರ್ಯ ಪುತ್ರಿಯಾನ ಯಮುನೆ–ಗಂಗಾಮಾತೆರ ತಕ್ಕ್ ಬಾಕ್‌ಲ್ – ಗಂಗಾಮಾತೆ, ಯಮುನೆರ, ಕೂಡ ನಾನ್ ವಾರಂಡೆಕೊಮ್ಮೆ ಮೂಲ ಕಾವೇರಿಕ್ ಪೋಯಿತ್ ಓರ್ ತಿಂಗ ಇಂಜಿತ್ ಕುಳಿಚಿತ್ತ್ ಬಪ್ಪೀಂದ್ ಎಣ್ಣುವ.ಯಮುನೆ–ಗಂಗಾತೀರ್ಥಕ್ ಮುಂದ್‌ನ ತೀರ್‌ತ ಜಗತ್ ಉಂಡಾಂದ್ ಕೇಪಕ, ಗಂಗಾಮಾತೆ–ಕಾವೇರಿರ ಆದಿಮೂಲ ಪೆರ್ತ್ತ್‌ಬಲ್ಯೆದ್‌ಂದ್! ಎಣ್ಣುವ. [18]

"ಸರಿದ್ಭಿರಹಮಾರ್ಯಯಾಃ ಕಾವೇರಿಯಾಸ್ತೀರ್ಥಮಾದರಾತ್।
ದೃಷ್ಟ್ವಾ ಪುಣ್ಯಾಂಭಸಿ ಸ್ನಾತ್ವಾ ಪುನರತ್ರಾಗತಾ ವಯಮ್ ॥ [19]

ಎಲ್ಲಾ ಪೆದಪೋನ ಪೊಳೆಯೆಲ್ಲಾ ಕೂಡ್‌ಕೂಟಾಯಿ. ಶ್ರೇಷ್ಠವಾನ ಕಾವೇರಿ ತೀರ್ಥ ದರ್ಶನ ಮಾಡಿಯಂಡ್, ಪವಿತ್ರವಾನ ಕಾವೇರಿ ತೀರ್ಥತ್ ಕುಳಿಚಿತ್, ಇಲ್ಲಿಕ್ ಇಕ್ಕ ನಂಗೆಲ್ಲಾ ವಾಪಾಸ್ ಬಂದಿಯೇಂದ್ ಎಣ್ಣುವ.

ತುಲೆಗೆ ರವಿಯ್ಯೆದಲ್ಕೆ ಸಹ್ಯಜೆ
ಯೊಳಗವಧಿಯಾಗೊಂದು ತಿಂಗಳ
ಕಳೆದ ಪೆಣ್ಗಳು ಪುರುಷರ ಹರಿದ ಕುಂಟೆ ಸಂಶಯವು
ಪೊಳೆವ ಸಹ್ಯಜೆಗೊಲಿದು ಗಂಗೆಯು
ತುಲೆಗೆ ಪ್ರತಿವರ್ಷದಲ್ಲಿಹಳಾ
ಸ್ಥಳದಿ ನೋಳ್ಪರ ಕಣ್ಮನಕ್ಕಾನಂದಮೀವುತ್ತ.
ಈ ಕವೇರಜೆಯೇ ಪುರಾತನ
ದಾಕೆಯು, ಮಹಾಲಕ್ಷ್ಮೀಯಹುದಹು

18 ಸ್ಕಂದಪುರಾಣ ಆಧಾರಿತ ಶ್ರೀ ಕಾವೇರಿ ನಾಟಕ–ಅಪ್ಪನೆರವಂಡ ಅಪ್ಪಚ್ಚಕವಿ P.No. ೧೪೧
19 ಕಾವೇರಿ ಮಾಹಾತ್ಮ್ಯ (೮ನೇ ಅಧ್ಯಾಯ) ತಲಕಾವೇರಿ ನಾರಾಯಣಾಚಾರ್ಯ – ೧೯೪೮

ದೀಕೆಯೇ ಸಾಕ್ಷಾಜ್ಜಗದ್ಯೋನಿಸ್ವರೂಪಿಣಿಯು
ಈಕೆ ಸೃಷ್ಟಿ, ಸ್ಥಿತಿ, ಲಯಂಗಳ
ಸೋಕಿ ಮಾಳ್ಪುದರಿಂ ಜಗನ್ಮಯು
ಳೀಕೆ ಜಗಕಂ ಬೀಜವೇ ತಾನಾದಳಿದು ನೆಲೆಯು. [20]

ಕಾವೇರಿಯೇ ಪೆರಿಯವ, ಈ ಜಗತ್ತ್‌ರ ಸೃಷ್ಟಿ, ಸ್ಥಿತಿ, ಲಯಕೆಲ್ಲಾ ಅವಳೇ ಕಾರಣ ಈ ಬ್ರಹ್ಮಾಂಡತ್‌ರ ಪೆತ್ತ ಅವ್ವನೇ, ಪೆರುವ ಅವ್ವನೇ ಮಹಾಲಕ್ಷ್ಮಿಯಾನ ಕಾವೇರಿಂದೆಣ್ಣುವ ಕವಿರಂಗ. ಕಾವೇರಿರನ್ನಕ್ಕೇ ಕೊಡವಡ ಪಳಮೆಯೂ ಪಳಿಯುದ್. ಕೊಡವಕ್ ಕಾವೇರಿ ತೆಕ್ಕ್-ಪಡಿಞರ್ ದಂಡ್ ದಿಕ್ಕ್‌ಕೂ ಒಕ್ಕಿಯಂಡಿಂಜದ್ ಆ ಕಾಲತ್ ಅರ್‌ಂಜಿತಿಂಜತ್‌ಅಂದ್ ಎಣ್ಣಕ, ಕಾವೇರಿ ಪುಟ್ಟುವಾಂಗ್ ಮುಪ್ಪಡೇ ಕೊಡವ ಪೊಮ್ಮಾಲೆ ಕೊಡವುಲಿಂಜತ್ತ್‌ಂದೂ ಎಣ್ಣೋಲು.

ಋಗ್ವೇದತ್ ಲೋಪಾಮುದ್ರೆ ಅಗಸ್ತ್ಯಋಷಿರ ತಕ್ಕ್ ಬಾಕ್ ಉಂಡ್. ರಾಮಾಯಣತ್ ಸುಗ್ರೀವ, ವಾನರಂಗಕ್ ಬೋರೆ, ಬೋರೆ ಜಾಗತ್‌ರ ಪರಿಚಯ ಅಲ್ಲೇಂಗಿ ಬೋರೆ, ಬೋರೆ ಜಾಗತ್‌ರ ಮಹಿಮೆ ಎಣ್ಣಿಯಂಡ್ ಕಾವೇರಿ ಪೊಳೆರ ಪಕ್ಕತುಳ್ಳ ನಾಡ್‌ರ ವಿಷಯತ್‌ನ ಕೊಂಡಾಡಿಯಂಡ್ ಇನ್ನನೆ ಎಣ್ಣುವ.

**ತತಸ್ತಾಮಾಪಗಾಂ ದಿವ್ಯಾಂ। ಪ್ರಸನ್ನಸಲಿಲಾಂ ಶಿವಾಮ್॥**
**ತತ್ರ ದ್ರಕ್ಷಥ ಕಾವೇರೀಂ । ವಿಹೃತಾಮಪ್ಸರೋಗಣೈಃ ॥** [21]

ಜೀವವುಳ್ಳ ಜಲ ಸಂಸ್ಕೃತಿಯುಳ್ಳ ಜಲತಿಂಜಿಯೂ, ಅಪ್ಸರೆಯ ಜೋಕಾಯಿತ್ ಪೊಡಿ ಇಲ್ಲತೆ ಓಡಿಕಳ್ ಚಂಡುಳ್ಳ ಪವಿತ್ರ ಕಾವೇರಿ ನೆಲೆ, ತೆಕ್ಕ್ (ದಕ್ಷಿಣ) ದಿಕ್ಕ್‌ಲ್ ನಿಂಗಕ್ ಕಾಂಬಕ್ಕ್‌ಟ್ಟುವಾಂದ್, ಸೀತಾನ್ವೇಷಣೆಕ್ ಪೊರಟ ತಾಂಡ ದೂತಂಗಡ ಕೂಡೆ ಸುಗ್ರೀವ ಎಣ್ಣುವ. ಯುದಿಷ್ಟಿರಂಗ್ ದೇವರ್ಷಿ ನಾರದ, ಬೀಷ್ಮ – ಪುಲಸ್ತ್ಯಂಗಡ ವಾದತ್‌ನ ವಿವರೋಡೆ ಎಣ್ಣುವ ಸಂದರ್ಭತ್, ಬೋರೆ ಬೋರೆ ತೀರ್ಥಕ್ಷೇತ್ರತ್‌ರ ವಿಷಯ – ಅಲ್ಲಿಕ್ ಎನ್ನನೆ ಎತ್ತುಲು ಎಣ್ಣುವ ವಿಷಯ ಪರ್‌ಂದಂಡ್, ಕಾವೇರಿ ಓರ್ ಪುಣ್ಯ ಪೊಳೆಂದೂ ಅಲ್ಲಿ ಕುಳ್‌ಚಕ ಆಯಿರ ಪಯ್ಯತ್ತಳ ದಾನ ಕೊಡ್‌ತಚ್ಚಕ್ಕ್

20 ಕವಿರಂಗ ವಿರಚಿತ ಕಾವೇರಿ ಮಾಹಾತ್ಮ್ಯೆ, P.No. ೭೬ & ೧೭೭.
ಕನ್ನಡತ್ ಉಳ್ಳ ಈ ಷಟ್ಪದಿ ಕಾವ್ಯ (ಸ್ಕಂದ ಪುರಾಣ ಆದಾರಿತ)

21 ಕಿಷ್ಕಿಂದಕಾಂಡ – ೪೧ನೇ ಸರ್ಗ

ಪುಣ್ಯ ಕ್‌ಟ್ಟುವಾಂದೂ ಎಣ್ಣುವ. ಋಷಭ ಕುಂದ್ (ತಿರುಪತಿ)ಯಾತ್ರೆ ತ್‌ೕತಂಡ್ ಅಪ್ಸರೆಯು ಸೋಕಾಯಿತ್ ಓಡಿಕಳಿಪಳ ಕಾವೇರಿಕ್ ಪೋಂಡೂಂದ್ ತಕ್ಕ್‌ಪರೆವ.ರಾಮಾಯಣ ಕಾಲತ್ 'ಕಾವೇರಿ' ಪೊಳೆ ಪೆದಪೋನದಾಯಿತಿಂಜತ್ ಎಣ್ಣುವದ್ ಸುಗ್ರೀವಂಡ ಈ ತಕ್ಕ್‌ಲೇ ನಂಗಕ್ ಅರಿವಾಪ.

ಋಷಿಭಂ ಪರ್ವತಂ ಗತ್ವಾಪಾಣ್ಡ್ಯೇ ದೈವತಪೂಜಿತಮ್।
ವಾಜಪೇಯಮವಾಪ್ನೋತಿ ನಾಕಪೃಷ್ಠೇ ಚ ಮೋದತೇ॥
ತತೋ ಗಚ್ಛೇತ ಕಾವೇರಿಮಾವೃತಾಮಪ್ಸರೋ ಗಣೈಃ ।
ತತ್ರ ಸ್ನಾತ್ವಾ ನರೋ ರಾಜನ್ ಗೋಸಹಸ್ರಪಲಂ ಲಭೇತ್ ॥

ಮಹಾಭಾರತತ್‌ರ – ವನಪರ್ವತ್, ತೀರ್ಥಯಾತ್ರೆರ ಸಂಮಂದ ಶ್ರೀಮದ್ ಬಾಗವತತ್ ದೇವರ್ಷಿ ನಾರದ – ವಸುಂದೇವಂಗಕ್ ನಡ್‌ಂದ ತಕ್ಕ್ ಬಾಕ್‌ಲ್ ತೆಕ್ಕ್ ದಿಕ್ಕ್‌ರ ದೇಶತ್, ಕಾವೇರಿ ದುಂಬಾ ಪವಿತ್ರವಾನ ಪೊಳೆಂದೂ ಅದ್‌ಂಡ ಜಲ ಅಲ್ಲೇಂಗಿ ತೀರ್ಥ ಕುಡ್‌ಚಕ ಏಳೇಳ್ ಜನ್‌ಮತ್ ಕೆಜ್ಜ ಪಾಪ ಪೋಪ. ಶಾಂತಿ ನೆಮ್ಮದಿ ಕ್‌ಟ್ಟುವಾಂದ್ ಎಣ್ಣುವ. ಹಿಂದೂವಡ ಪವಿತ್ರ ಗ್ರಂಥವಾನ ರಾಮಾಯಣ ಮಹಾಭಾರತತ್ "ಕಾವೇರಿ"ರ ವಿಷಯ ಪ್ರಸ್ತಾವನೆ ಬಂದನ ನೋಟ್‌ನಕ, ಅಕ್ಕಲೇ ಕೊಡವಕ್ ಕಾವೇರಿ ಉದಿಚ ಜಾಗತ್‌ರ ಅರಿವು ಇಂಜತ್ೇಂದ್ ಎಣ್ಣೊಲು. ಕೂಟ್‌ಕ್ ದಂಡ್ ಗ್ರಂಥತೂ ಅಪ್ಸರೆಯ ಉಳ್ಳ ಕಾವೇರಿ ಪೊಳೆಂದ್ ಎಣ್ಣುವ. ಅಪ್ಸರೆಯ ಎಣ್ಣಕ ಚಾಯಿಕಾರ್ತಿಯ, ಬೋಜಕಾರ್ತಿಯಾಂದ್ ಅರ್ಥವೂ ಉಂಡ್. ಮಹಾಭಾರತ ಯುದ್ಧ ಪರ್ವತ್ ಕೊಡವು ದೇಶತ್‌ರ ಜನ ಪಾಂಡವಂಗಡ ಪರ ನಿಂದಿತ್ ಯುದ್ಧ ಮಾಡ್‌ಚೇಂದ್ ಎಣ್ಣುವ ಇಂದೂ ಚಾಯಿಕೂ, ಬೋಜಕ್ಕೂ ಪೆದ ಎಡ್‌ತ ಕೊಡವತಿಯಳೇ ರಾಮಾಯಣ, ಮಹಾಭಾರತ ಕಾಲತ್‌ರ ಅಪ್ಸರೆಯ ಆಯಿತಿಂಜಿತಿಕ್ಕುಂದೂ, ಅಪ್ಸರೆಯ–ಚಾಯಿಕಾರ್ತಿ ಪೊಣ್ಣಾಳ್ ಪೋಡಿ ಬಯ ಇಲ್ಲತೆ ಓರ್ ತೊಂದರೆಯೂ ಇಲ್ಲತೆ ಓಡಿಕಳಿಪ ನಾಡ್ ಕಾವೇರಿ ನಾಡ್‌ಂದ್ ನಂಗ ಇಲ್ಲಿ ಅರ್ಥಮಾಡಿಯವಲು. ಆಫ್ರೀಕತೂ, ದಕ್ಷಿಣ ಭಾರತ, ಕೊಡವು ಕೂಡ್‌ನನಕ್ಕೆ ಪತ್ತ್ ಲಕ್ಷ ಕಾಲ ಬಯ್ಯತ್‌ರ ಮಾಲವಂಡ ಮಂಡೆ ಕ್‌ಟ್ಟಿತ್ತ್ೇಂದ್ ಎಣ್ಣುವ ವಿಷಯ[22] ನೋಟ್ಟಕ ಕೊಡವಡ ನಂಬಿಕೆ, ಪುರಾಣತ್‌ಲ್ – ಇತಿಹಾಸ ಎಡೆಮೇಂಗ್‌ನ ಸೂಚನೆ ಕ್‌ಟ್ಟುವ.

ತೀರ್ಥರೂಪಿಣಿಯಾನ ಕಾವೇರಿನ ಕೊಡವ ತಂಗಡ ಕುಲದೇವಂದೆಣ್ಣಿಯವ.

ವಾರಾಂಡೆಕೊಮ್ಮ ಚೂರಿಯ ಕನ್ಯಾರಾಶಿ ಬುಟ್ಟಿತ್ ಶುಕ್ರಾದಿಪತ್ಯಉಳ್ಳ – ಶನಿಗ್ರಹತ್‌ರ ಉಚ್ಚಸ್ಥಾನವಾನ, ತುಲಾ ರಾಶಿಕ್ ಮೊಟ್ಟ್‌ಡುವ ಸಮಯತ್ – ತೊಲ್ಯಾರ್ ಒಂದಾಂಗ್, ಕಾವೇರಿ ಚಂಗ್ರಾಂದಿ ನಡ್‌ಪ. ತೊಲ್ಯಾರ್ ಒಂದಾಂಗ್ ಕಾವೇರಿ ಕುಂಡಿಗೆ / ಬ್ರಹ್ಮಕುಂಡಿಗೆಲ್, ತೀರ್ಥರೂಪಿಣಿಯಾನ ಕಾವೇರಿ ತಾಯಿ ಕುಂಡಿಗೆಂಜ ಪೊಕ್ಕಿ ಮರ್‌ಂಜಿತ್, ತೀರ್ಥರೂಪತ್ತೇ ನಂಗಕ್ಕೆಲ್ಲಾ ದರ್ಶನ ತಪ್ಪಾಂದೂ, ತೊಲ್ಯಾರ್ ಚಂಗ್ರಾಂದಿಂಜ ಓರ್ ತಿಂಗಕತ್ತಣೆ, ತೊಲ್ಯಾರ್ ಚಂಗ್ರಾಂದಿಂಜ – ಬಿಚ್ಯಾರ್ ಚಂಗರಾಂದಿ ಒಂದಂಗತ್ತಣೆ ಬಿಚ್ಯಾರ್ ಚಂಗರಾಂದಿನ ಕೊಡವ ತಕ್ಕ್‌ಲ್ ಕೃಚಂಗ್ರಾಂದಿಂದೆಣ್ಣುವ. ಕಾವೇರಿ ತಾಯಿರಲ್ಲಿಕ್ ಎಲ್ಲಾ ಏಳ್ ಮಾಪೊಳೆ ದೇಪಿಯಳೂ ಬಂದಿತ್ತ್, ಓರ್ ತಿಂಗ ಇಂಜಿತ್, ಕಾವೇರಿಯಮ್ಮೆರ ದರ್ಶನ ಮಾಡಿಯಂಡ್ ಕುಳಿಚಂಡ್ ಪೋಪಾಂದ್ ಕೊಡವ ನಂಬುವ.

ಕೊಡವ 'ಪಳಮೆ'ನ ಇನ್ನನೆ ಪಾಡುವ :–

ಚಂದೋಳ ಪೆರ್‌ಜಾಯಿ
ಸ್ವರ್ಗ ಮರ್ತ್ಯ ಪಾತಾಳ
ಈ ಮೂಂದ್ ಲೋಕತುಳ್ಳ
ತೀರ್‌ತೆಲ್ಲ ಬಾರೀಂದ್
ಕ್ಷೆಯೆಡ್‌ತ್ ಕಾಕಣೆ
ತೀರ್‌ತ ಪೊಳೆಯೆಲ್ಲಾ
ಅಲ್ಲಿ ಬಂದ್ ನಿಂದಿತ್
ಮುತ್ತಪ್ಪಣೆ ಕೇಟತ್
ಅದ್ ಕಂಡ ಮುನಿಯೋ (ಅಗಸ್ತ್ಯ)
ಅಪ್ಪಣೆಯೋ ಮಾಡ್‌ಚಿ
ಏಳ್‌ಕೋಟಿ ತೀರ್‌ತ
ಕಾಲೋರಾಂಡೆಕೋರಮ್ಮ
ನೇರ ಇಚ್ಚಕಾಪಕ್ಕ
ಶಂಭು ಶಿವ ದೇವಂಡ
ನೆತ್ತಿ ಕಣ್ಣ್ ಸೂರಿಯ
ತುಲಾ ರಾಶಿಕೆತ್ತಕ

ನಿಂಗೆಲ್ಲಾರೂ ಬಂದಿತ್ತ್
ಈ ಕುಂಡಿಗೆಲಿಂಜಿತ್
ಕುಂಡಿಕೆರೊಳ್‌ಲಿಂಜ
ಉಕ್ಕಿ ಉಕ್ಕಿ ಬಕ್ಕಂಡು............ [23]

ಇಲ್ಲಿ ಅಗಸ್ತ್ಯಮಹರ್ಷಿ ಮೂಂದ್ ಲೋಕತುಳ್ಳ ಎಲ್ಲಾ ತೀರ್ಥವೂ ಚೂರಿಯ ತುಲಾ ರಾಶಿಕೆತ್ವಕ ಕಾವೇರಿ ಉದಿಚ – ಬ್ರಹ್ಮಕುಂಡಿಗೆಕ್ ಬಂದಿತ್, ಕುಂಡಿಗೆರೊಳ್‌ಲಿಂಜಿತ್ತ್, ಕುಂಡಿರೊಳ್‌ಂಜ ಉಕ್ಕಿ, ಉಕ್ಕಿ ಮರಿಯೊಂಡೂಂದ್ ಮೂಂದ್ ಲೋಕತುಳ್ಳ ತೀರ್ಥಕ್ಕೆಲ್ಲಾ ಅಪ್ಪಣೆ ಮಾಡೀಚೀಂದ್ ಎಣ್ಣುವ. ತೀರ್ಥ ಉಕ್ಕಿ ಮರಿವಾಂಗ್ ಜ್ಯೋತಿಷ್ಯ ಆದಾರ ಉಂಡೆಂಗಿಯೂ, ಇಲ್ಲತಪೋಚೆಂಗಿಯೂ, ತೊಲ್ಯಾರ್ ಚಂಗರಾಂದಿಯಂದ್ ಅಚ್ಚ ಚೆರಿಯ ಬ್ರಹ್ಮಕುಂಡಿಗೆಂಜಿ ಲಕ್ಷ–ಲಕ್ಷ ಲೀಟರ್‌ಗಟ್ಟಲೆ ತೀರ್ಥ ಕೋತಿ, ಕೋತಿ ಎಡ್‌ತಂಡ್ ತಂಗಡ, ತಂಗಡ ಮನೆಕ್ ಎಡ್‌ತ ಪೋಪ! ಇದ್ ಅಂದೂ–ಇಂದೂ...ನಾಳೆಯೂ.... ನಂಗಡ ಪೆರಿಯವು ಕಣ್ಣ್‌ಗೊಂಡ್ ಕಂಡ ಸತ್ಯ, ಇಂದೂ ನಂಗಡೆಲ್ಲಾಡ ಕಣ್ಣ್‌ಗೊಂಡ್ ಕಾಂಬಳ ಸತ್ಯ! ಚೂರಿಯ ದಕ್ಷಿಣಾಯನತಿಂಜ ಭೂಮಧ್ಯ ರೇಖೆ (Equator) ಪಾಂಜಿಪೋಪ ಸಮಯ, ಅಗ್ನಿ– ವಾಯು ನಕ್ಷತ್ರಕ್ ಬಪ್ಪ ಸಮಯ–ಗಣಿತ ಸೂತ್ರ ಆದಾರತ್ ನಡ್‌ಪ ಈ ಪೊಕ್ಕುವ ನೀರ್ – ಇದ್‌ನ ನಂಗಡ ಪೆರಿಯಯಿಂಡ ನಂಬಿಕೆ ಮಾತ್ರ ಅಲ್ಲ ಇದ್ ವೈಜ್ಞಾನಿಕ ಸತ್ಯವೂ ಅಕ್ಕು. ಇದೆಲ್ಲಾ ನೋಟುವಕ ಗಣಿತ ಸೂತ್ರ ಆದಾರತ್ ಕೊಡವಡ ಸಂಸ್ಕೃತಿರ ಅಡಿಪಾಯ ನಿಂದಿತ್‌ೀಂದ್ ಎಣ್ಣೊಲು! ಈ 'ಪಳಮೆ'ಲ್ ಸಂಖ್ಯೆ ಏಳ್‌ಂಗ್ ಮಹತ್ವ ಕೊಡಿತಿತ್ತ್! ಸಂಖ್ಯೆ ಏಳ್‌ನ ದೈವೀಕ ಸಂಖ್ಯೆಂದೆಣ್ಣುವ. ನಂಗಕೆಲ್ಲಾ ಅರ್‌ಂಜನಕೆ ಚಣ್ಣೂರ – ಭೂಮಿರ ಒರ್ ಸುತ್ತು ಸುತ್ತುವಕ್ ಏಳ್ ದಿವಸತ್‌ರ ನಾಲ್ ವಾರ ಬೋಂಡು! 27.23 ದಿವಸ ಎಣ್ಣಕ 28 ದಿವಸತ್‌ರ ಲೆಕ್ಕ, ಉಳ್‌ಂಜ ಗಳಿಗೆನ ಮಾಲಮಾಸ–ಕ್ಷಯಮಾಸಾಂದ್ ಪಂಚಾಂಗತ್–ಕಾಲತ್‌ನ ಸೆರಿಮಾಡುವ ಪದ್ಧತಿ ಉಂಡ್.

ನಂಗೆಲ್ಲಾರ್‌ಕೂ ಗೊತ್ತುಳ್ಳನೆ, ಪ್ರಭಾವ ಉಳ್ಳ ಗ್ರಹ ಏಳ್! ನಂಗಡಲ್ಲಿ ಇಕ್ಕಲೂ ಚಲಾವಣೆಯುಳ್ಳ ಏಳ್ ಸ್ವರ! ಸೂರಿಯ ಕಿರಣ–ಏಳ್ ರಂಗ್! ಎಲ್ಲಾಂಗಿಂಜ ನಂಗಡ ತಡಿಲ್ ನಂಗ ತಿಂದನ ಕರ್‌ಕುವ, ನಂಗಡ ತಡಿಕ್ ಚೋರೆ ತಪ್ಪ, ಸಪಾಗ್ನಿ ತತ್ವ! ಇದ್‌ಲೆಲ್ಲಾ ವೈಜ್ಞಾನಿಕತೆ ಉಂಡ್. ಸಪ್ತದಾತು–ರಸ, ಚೋರೆ, ಯರ್ಚಿ, ನೆಯ್ಯಿ, ತಿರ್, ಮೂಳೆ, ಶುಕ್ಲ ಇನ್ನನೆ ಪೊಮ್ಮಾಲೆ ಕೊಡವು ನಾಡ್‌ನ ಮೊಮ್ಮಾಯತ್ ಈ

ವಾಯುಮಂಡಲತ ಮಾಯಾ ಅಂಡತ್, ಇಡೀ ಪ್ರಕೃತಿ ಅಂಡತ್‌ನ ಕಾವೇರಿ ಮಾತೆ ಪೊರತ್ ನಿಂದಿತ್‌ೇಂದ್ ಕೊಡವ ನಂಬ್‌ನ, ಕಾವೇರಮ್ಮೆ ಎಣ್ಣುವ ಜಪಾಕ್ಷರ, ಮೂಂದೂ ಪೊತ್ತ್ ನೆಲ್ಲಕ್ಕಿ ಬೊಳ್‌ಚ ಬೆಪ್ಪಲಿಂಜ, ನಮ್ಮೆ– ನಾಳ್, ನಲ್ಲಾಂಗೂ– ತೀಯಂಗೂ, ಚತ್ತಲ್ಲಿ– ಪೆತ್ತಲ್ಲಿ ಎಲ್ಲಾ ಕಾರ್‌ಬಾರ್‌ಕ್ ಮೊಳಿ ಇಡುವಕ ಕೊಡವಡ ಬಾಯಿಲ್ ಕೇಕೊಲು. ಕೊಡವತಿಯ ಉಡ್‌ಪ ಪೊಡ್‌ಯತ್‌ಲೂ ಉಂಡ್ ಕಾವೇರಿ ಮಹಾತ್ಮೆ. ಕೊಡವುನ ಬ್ರಹ್ಮಕ್ಷೇತ್ರಂದೂ ಎಣ್ಣುವ. ಒಮ್ಮ ಬ್ರಹ್ಮಂಗ್ ಭೂಮಿಲ್ ಓಡಿಕಳಿಕೊಂಡೂಂದ್ ಆಶೆಯಾಯಿತ್ ಬ್ರಹ್ಮಗಿರಿ ಕುಂದ್‌ಕ್ ಬಾತೂಂದೂ ಅಲ್ಲಿ ಓರ್ ಬಲ್ಯೆ ನೆಲ್ಲಿಗೆ ಮರಕ್ ಪೂಜೆ ಮಾಡ್‌ಚೀಂದೂ, ಆ ನೆಲ್ಲಿಗೆ ಮರತ್ ಮಾವಿಷ್ಣುರ ದರ್ಶನ ಆಚೀಂದೂ, ವಿಷ್ಣುನಕಂಡ ಬ್ರಹ್ಮ ಆ ನೆಲ್ಲಿಗೆ ಮರಕ್ ಸ್ವರ್ಗತ್ ಪೆದಪೋನ ವಿರಜೆ ಪೊಳೆರ ನೀರ್‌ಲ್ ಅಭಿಷೇಕ ಮಾಡಿಚೀಂದೂ ಸ್ಕಂದ ಪುರಾಣ ಎಣ್ಣುವ.ಕೊಡವ ಮಾವಿಷ್ಣುನ ಪೆಮ್ಮಯ್ಯಂದೆಣ್ಣುವ– ತಿರ್‌ನೆಲ್ಲಿ ಪೆಮ್ಮಯ್ಯ.

ಬ್ರಹ್ಮಗಿರಿ ಕುಂದ್‌ರಕೊಡಿಲ್ ಏಳ್ ಋಷಿಯಡ ಕುಂಡ್ ಇಕ್ಕಲೂ ಉಂಡ್. ಬೇನಿಲೂ ಆ ಕುಂಡ್‌ಲ್ ಚೆನ್ನಂಗೇಂಗಿ ನೀರಿಪ್ಪದ್ ಕಾಂಗೊಲು. ಇಕ್ಕಿಕ್ಕ ಪರ್‌ಮೆಂಜ ಬಂದ ಜನ ಬ್ರಹ್ಮಗಿರಿ ಕುಂದ್ ಪತ್ತಿತ್ ಆ ಏಳ್ ಕುಂಡ್‌ರ ಪವಿತ್ರತೆ ಅರಿಯತೆ ಚವುಟಿತ್ ಆ ಕುಂಡ್‌ನೆಲ್ಲಾ ಮಣ್ಣ್ ಮರ್‌ಚಿತ್ – ಆ ಎಳ್ ಕುಂಡ್ ಸೆರಿಯಾಯಿತ್ ಕಾಂಗತನಕೆ ಮಾಡಿತ್ತ್[24].

ಸ್ಕಂದ ಪುರಾಣತ್‌ನ ನಂಗ ನಂಬುವೊ–ಬುಡುವೋ ಆಚೆಂಗಿ. ಇಲ್ಲಿ ಬ್ರಹ್ಮ–ನೆಲ್ಲಿಮರಕ್ ಸ್ವರ್ಗತುಳ್ಳ ವಿರಜೆ ತೀರ್ಥ ಬೂಕಿಯೇಂದ್ ಎಣ್ಣುವ. (ನೆಲ್ಲಿಮರಕ್ ಸಂಸ್ಕೃತತ್ ದಾತ್ರಿ ವೃಕ್ಷಂದೂ ಎಣ್ಣುವ) ನಂಗಕ್ ದುಂಬಾ ನೀತಳ ಆಯಿತುಂಡೇಂಗಿ . ಓರ್ ನೆಲ್ಲಿಗೆ ತಿಂದಕ ಮದಿ ನಂಗಡ ನೀತಳ ಅಡಂಗಿ ಪೋಪ. ಅಚ್ಚಕೋರ್ ಚೆರಿಯ ನೆಲ್ಲಿಗೆಲ್ ನಂಗಡ ನೀತಳವೂ ಅಡ್‌ಂಗಿತ್, ನಂಗಡ ತಡಿಕೋರ್ ಪುರ್‌ಡೂ ಬಪ್ಪ.

ಬಾಯಿಕಿಟ್ಟನಕ್ಕೇ ಒಮ್ಮ ಚೆನ್ನ ಪುಳಿ, ಪುಳಿ ಕೈಪು ಆಚೆಂಗಿಯೂ. ಬಯ್ಯಂಜಿ ಬಾಯೆಲ್ಲಾ ಮೊದ್‌ರ– ಮೊದ್‌ರ ಆಪ. ನೀತಳ ಅನ ತಡಿಕೋರ್ ಸ್ವರ್ಗ ಸುಖ

---

22 ಡಾ॥ ಎಂ.ಜಿ. ನಾಗರಾಜ್, ಶಾಸನ ಶಾಸ್ತ್ರಜ್ಞಂಗ "ಭೂ ಇತಿಹಾಸ ಬೆಳಕಿನಲ್ಲಿ ಕೊಡಗಿನ ಕಾವೇರಿ ಮತ್ತು ಗಂಗೆ"

23 ಪಟ್ಟೋಳೆ ಪಳಮೆ – ನಡಿಕೇರಿಯಂಡ ಚಿಣ್ಣಪ್ಪ P.No. 14

24 ೧೪.೪.೨೦೧೧ಕ್ ನಾನೇ ಬ್ರಹ್ಮಗಿರಿ ಕುಂದ್ ಪತ್ತಿತ್ ಸಪ್ತಋಷಿಯಡ ಸಪ್ತಕುಂಡಂತ್‌ನ ನೋಟುವ ಪ್ರಯತ್ನ ಮಾಡ್ದಕ ನಾನೇ ಕಂಡದ್

ಕ್‌ಟ್ಟಿನನಕೆ ಆಪ (C) 'ಸಿ' ವಿಟಾಮಿನ್ ಉಳ್ಳ ನೆಲ್ಲಿಗೆ ವೈಜ್ಞಾನಿಕವಾಯಿತೂ ಎಚ್ಚಕೋ ಕಾಯಿಲೆ ವಾಸಿಮಾಡುವ ಮದ್ದ್. ದಾತ್ರಿ ಎಣ್ಣಕ ಈ ಭೂದೇವಿಂದ್ ಅರ್ಥ ಉಂಡ್. ಈ ಪುರಾಣ ಕಥೆ ಭೂಮಾತೆಕ್ ತೀರ್ಥತ್‌ರ ಅವಶ್ಯಕಥೆ ಉಳ್ಳಾನ ನಂಗಕ್ ಎಣ್ಣುವ. ಭೂಮಿ ಇಲ್ಲತೆ ನೀರಿಲ್ಲೇ! ನೀರೀಲ್ಲೇಂಗಿ ಭೂಮಿ ಇಲ್ಲೆ! ಪುರಾಣಕತೆಲೆಂತಾ Concept ! ಕಲ್ಪನೆ!.

ಅಗಸ್ತ್ಯ ಋಷಿ ಸ್ವಯಂಭೂಮನ್ವಂತರತಿಂಜಂವ. ವಾತಾಪಿ – ಇಲ್ವನ ನಾಶಮಾಡ್‌ನಂವ. ಚೂರಿಯ ಗತಿಕ್ ತೊಂದರೆ ಮಾಡ್‌ನ ವಿಂಧ್ಯ ಕುಂದ್‌ರ ಎತ್ತರತ್‌ನ ಕಮ್ಮಿ ಮಾಡ್‌ನಂವ. ರಾಕ್ಷಸಿಯಳ ನಾಶಮಾಡುವಕಾಯಿತ್ ಸಮುದ್ರತ್‌ರ ನೀರನೇ ಊತ್‌ನಂವೊ! ಕವೇರ ಮುನಿರ ದತ್ತು ಪುತ್ರಿ ಕಾವೇರಿನ ಮಂಗಲ ಆನಂವೊ. ಇದ್‌ಲೆಲ್ಲಾ ಭೂ ವೈಜ್ಞಾನಿಕತೆ ಉಂಡ್.

ಕವೇರ ಮುನಿ ಬ್ರಹ್ಮಂಡ ಕೈಯಿಂಜ ದತ್ತು ಎಡ್‌ತವಕ ಲೋಪಾಮುದ್ರೆ ಆಯಿತಿಂಜತ್. ಕಾವೇರಿ ಲೋಪಾಮುದ್ರೆ, ಎಣ್ಣಕ ಎಲ್ಲಾ ಮುದ್ರಾ ಸ್ವರೂಪಿಣಿಯಾಯಿತುಳ್ಳವ–ಲೋಕಮುದ್ರೆ, ಕರ್ಮಮುದ್ರೆ, ವೇದಮುದ್ರೆ, ಜ್ಞಾನಮುದ್ರೆ, ಧರ್ಮಮುದ್ರೆ, ರಾಜಮುದ್ರೆ....ಇನ್ನನೆ ಪಲತರ ಎಲ್ಲಾ ದೋಷತ್‌ನ ನಾಶಮಾಡುವ ಮುದ್ರೆ – ಗುರುತುಳ್ಳವಾಂದ್ ಅರ್ಥ. ಯೋಗಶಾಸ್ತ್ರತ್ ಎನ್ನನೆ ವೈಜ್ಞಾನಿಕತೆ ಉಂಡೋ ಅನ್ನನೇ, ಮುದ್ರೆಲೂ ವೈಜ್ಞಾನಿಕಥೆ ಉಂಡ್‌ಂದೆಣ್ಣುವದ್ ಈ ಕಾಲತ್ ಎಲ್ಲಾರ್‌ಕೂ ಅರ್‌ಂಜ ವಿಷಯ. ಕವೇರಮುನಿರ ದತ್ತು ಮೋವಳಾನ ಲೋಪಾಮುದ್ರೆ ಅಪ್ಪಂಡ ಪೆದತ್‌ರ– ಪೊಣ್ಣ್ ರೂಪ, ಕಾವೇರೀಂದ್ ಪೆದ ನೇಡಿಯಂಡ್ ತುಳ್ಳಿಯಂಡೊಕ್ಕಚಿ.

ಇನ್ನನೆ ಕವೇರಮುನಿರ ದತ್ತ್‌ಮೋವಳಾಯಿತ್ ಕವೇರ ಋಷಿ, ಋಷಿ ಪತ್ನಿಯಡ, ಸೇವೆಮಾಡಿಯಂಡಿರಣೆ ಕವೇರಮುನಿ–ಮುನಿಪತ್ನಿ, ತಂಗಡ ತಡಿನ ಭೂಮಿಲ್ ಬುಟ್ಟಿತ್ತ್ ಬ್ರಹ್ಮಲೋಕಕ್ ಪೋಪ. ಬ್ರಹ್ಮಗಿರಿಲ್ ಲೋಪಾಮುದ್ರೆ–ಕಾವೇರಿ ನಾರಾಯಣನ ಧ್ಯಾನಮಾಡುವ – ತಪಸ್ ಮಾಡುವ.

ಅಕ್ಕ ಅಲ್ಲಿಕ್ ಅಗಸ್ತ್ಯ ಋಷಿ ಬಪ್ಪ. ತಪಸ್ ಮಾಡಿಯಂಡಿಂಜ ಕಾವೇರಿನ "ಕವೇರಜೆ, ಬೋಜಕಾರ್ತಿ ನೀನ್ ನನ್ನ ನೀಡ ವಡಿಯನಾಯಿತ್ ಒತ್ತ. ಆದ್‌ಂಗ್ ಕಾವೇರಿ ಆಕು–ಪೋಕುಂದೆಣ್ಣಿತ್, ಓರ್ ವರ ಇನ್ನನೆ ಕೇಪ. ನನ್ನ ನೀನ್ ಬುಟ್ಟಿತ್ತ್ ಪೋನನಾಳ್ ನಾನ್ ನಿನ್ನ ಬುಟ್ಟಿತ್ತ್ ಪೊಳೆಯಾಯಿ ಪರ್‌ಂಜಿತ್ ಸಮುದ್ರಕ್ ಕೂಡುವೀಂದೆಣ್ಣುವ. ಈ ಒಪ್ಪಂದಕ್ ಆಕುಂದೆಣ್ಣ ಅಗಸ್ತ್ಯಮಹರ್ಷಿ ಕಾವೇರಿನ ಮಂಗಲಾಯಿತ್ ದುಂಬಾಕಾಲ ಬ್ರಹ್ಮಗಿರಿ ಕುಂದ್‌ಲ್ ವಾಸ ಇಂಜತ್‌ೕಂದ್ ಸ್ಕಂದ ಪುರಾಣ ಎಣ್ಣುವ.

ಇನ್ನನೆ ಇಪ್ಪಕ ಓರ್ ನಾಳ್, ಅಗಸ್ತ್ಯ ಕಾವೇರಿನ ಜಲ ರೂಪತ್ ತಾಂಡ ಕಮಂಡಲುಲ್ ದುಂಬ್‌ಚಿಟ್ಟಿತ್ತ್ ತಾಂಡ ಶಿಷ್ಯಂಗಕ್ ಕೊಡ್‌ತಿತ್ತ್ ಕನಿಕೆರಲ್ಲಿಕ್ ಪೋಪ. ಬಯ್ಯಕ್ ಬಪ್ಪದ್ ತಡುವಾಪಕ ಮೈದುಂಬ ಚೊಡಿ ಬಂದಿತ್ತ್ ನೀರಾಯಿ ವೂಕ್ಕುವಕ್ ಗ್ಯಾನಮಾಡುವ. ಅದೇ ಸಮಯತ್ ಕಮಂಡಲ ಪುಡ್‌ಚಿ ನಿಂದಂಡಿಂಜ ಶಿಷ್ಯ ಕಾಲ್ ಜಾರಿತ್ ಬುದ್ದಲ್ಲಿ, ಕಮಂಡಲುರ ಒಳ್‌ಲ್ ಇಂಜ ಲೋಪಾಮುದ್ರೆ ತೀರ್ಥರೂಪಿಣಿಯಾಯಿ ವೊಕ್ಕುವಕ್ ತೊಡುಂಗುವ. ಅದ್ ಕಂಡ ಅಗಸ್ತ್ಯಂಡ ಶಿಷ್ಯಂಗ ಚೆಲ್ಲ್‌ನ ನೀರ್‌ನ ಕೈಲ್ ಕೋತಿ, ಕೋತಿ ಕಮಂಡಲುಕ್ ದುಂಬ್‌ಚಿಡುವ ಎಚ್ಚಕ್ ಪ್ರಯತ್ನ ಮಾಡ್‌ನಕಲೂ, ಕಮಂಡಲುಂಜ ಚೆಡ್‌ಂಜಿ, ತುಳ್ಳಿಯಂಡೊಕ್ಕ್‌ಚಿ ಕಾವೇರಿ. ಎಚ್ಚಕ್ಕ್ ಅದ್ದಾನ ಬುದ್ದಕಲೂ ನೀರ್‌ರ ರಭಸತ್‌ನ ತಡ್‌ಪಕಾಯಿಲೆ, ಅಗಸ್ತ್ಯಂಡ ಶಿಷ್ಯಂಗಕ್! ಕನಿಕೆಲ್ 'ಸಂಧ್ಯೋಪಾಸನೆ' ಮಾಡಿಯಂಡ್ ಬಂದ ಅಗಸ್ತ್ಯಮುನಿ ಪೊಣ್ಣ್ ಕಾವೇರಿನ ಕಾಂಗತೆ ಕೊಡ್‌ಂಗಾಡ್‌ಲ್ ಅಲ್‌ಂಪಂಡ್ ದುಃಖಿಚಿಡುವ. ಮಾಕಡಕಪ್ಪರ ಪೊರಟ್ ಪೋಯಂಡಿಂಜ ಕಾವೇರಿನ ಎದ್‌ಮುಟ್ಟಿತ್ – ಪಳಿಯನೆಲ್ಲಾ ಗ್ಯಾನಮಾಡಿಯಂಡ್ ದುಃಖಿಚಿಟ್ಟಂಡ್, "ನಾಕೊದಿಚವಳೇ ಲೋಪಾಮುದ್ರೆಯೇ.... ಮಿಂಞಾತ್‌ರನೆಕೆ ನಾಡ ಕೂಡ ಇರ್‌ಂದ್ ಕಾವೇರಿನ ಬೋಡಿಯಂಡ್ ಬಟ್ಟೆಕ್ ಅಡ್ಡ ನಿಪ್ಪ. ಅಕ್ಕ ಕಾವೇರಿ ತಾಂಡ ನೇರಾನ ರೂಪತ್‌ನ ಕಾಟಿತ್ **"ನಾನ್ ಲೋಕಕಲ್ಯಾಣಕಾಯಿತ್ ಪೊಳೆಯಾಯಿ ಪರಿವಿಂದ್"** ಎಣ್ಣುವ. ದುಂಬಾ ಸಾಮರ್ಥಿಕೆ ಉಳ್ಳ ಅಗಸ್ತ್ಯಮಹರ್ಷಿ, ಕಾವೇರಿ ತಾಯಿನ ತಾಂಡ ತಡಿನ ದಂಡಾಯಿ ವಡ್‌ತಿತ್ ಓರ್ ತಡಿ ಲೋಕೋಪಕಾರಕಾಯಿತ್ ಕಾವೇರಿಂದೂ, ಲೋಪಮುದ್ರೆಯಾಯಿ ಅಗಸ್ತ್ಯಂಡ ಪೊಣ್ಣಾಯಿತಿಪ್ಪನಕೆ ಎಣ್ಣುವ.

ಅದ್‌ರ್‌ಂಜ ಅಗಸ್ತ್ಯನು
ಏರದುಃಖ ಮಾಡಿತ್
ಓಡಿ ಪಾರಿ ಬಂದಿತ್ತ್
ತಪ್ಪ್‌ಕೊಪ್ಪು ಮಾಡೊಂಡು
ಎಂದೆಣ್ಣಿ ಪರ್‌ಂದಿತ್
ಕೂಡ ಬಯ್ಯ ಪೋಯಿತ್
ಚೆಂಡೋಲೆ ಕಡಿಯೋಂಡ
ನಾಡ್‌ಡ ನಡುವುಲ್
ಒಕ್ಕುವಳ ನೀರ್‌ಲ್

ಕಾವೇರಮ್ಮೆ ಮಾತಾಯಿ
ಬಲಬರಿಕ್ ಸುತ್ತ್‌ಚಿ
ಆನಗುಂಡ್ ಚಂಜ್ಞಾಧಿ
ಮೊಮ್ಮಾಲೆ ಬಲಮುರಿ
ಎಂದೆಣ್ಣಿ ಪೆದಪೋನ ............... [26]

ಪಾರ್ವತಿ ಭಕ್ತನಾನ ಚಂದ್ರವರ್ಮ ರಾಜಂಗ್ ಪಾರ್ವತೀ ದೇವಿ ಅವಂಡ ಬಾಲ್ಯತ್ತೊಮ್ಮ ದರ್ಶನ ಕೊಡ್‌ತಿತ್ತ್... ಮಿಂಙ್ಞಕ್ ನಾನ್ ಕೊಡವು ದೇಶತ್ ಕಾವೇರಿ ಅವತಾರ ಎಡ್‌ತಲ್ಲಿ, ನೀಕೂ ನೀಡ ಸಂತಾನಕೂ ವರತಪ್ಪೀಂದ್ ಎಣ್ಣಂತ ತಕ್ಕ್‌ನ ನಂಬಿತಿಪ್ಪ ರಾಜ. ರಾಜಂಡ ಮೋವಂಗ್ ಓರ್ ತೊಲ್ಯಾರ್ ಚಂಗ್ರಾದಿರ ಏಳ್ ನಾಳ್‌ಕ್ ಮುಪ್ಪಡೆ ಪಾರ್ವತಿ ದೇವಿ ಕೆಣಚಿ (ಸ್ವಪ್ನ) ದರ್ಶನ ಕೊಡ್‌ತಿತ್ತ್, ಇನ್ನನೆ ಎಣ್ಣುವ "ಇಂದೆಕ್ ಏಳ್‌ನಾಳ್‌ಕ್ ತೊಲ್ಯಾರ್ ಚಂಗ್ರಾಂದಿಯಂದ್ 'ಕಾವೇರಿ'ಂದೆಣ್ಣುವ ಪೆದತ್ ಬ್ರಹ್ಮಗಿರಿ ಕುಂದ್‌ರಡಿಂಜ ತೀರ್ಥರೂಪಿಣಿಯಾಯಿ, ಪೊಳೆಯಾಯಿ ಪೊಕ್ಕುವಿಂದೂ, ನೀನ್, ನೀಡ ಸಂತಾನ ಅಡ್‌ಕ ವಲಮುರಿಲ್ (ಬಲಮುರಿ) ನಾಕಾಯಿತ್ ಕಾತ್‌ನಿಂದಿತ್ತ್ ನಾನ್ ತಪ್ಪ ವರತ್ತ್‌ನ ಎಡ್‌ತವಂಡೂಂದೆಣ್ಣುವ".

ಉತ್ಥಾಯ ತ್ವರಯಾ ಪ್ರಾತಃ ಭ್ರಾತ್ರಾದಿಭ್ಯೋನ್ಯವೇದಯತ್ । ದೂರಸ್ಥಾನಾಂ ಸ್ವಕೀಯಾನಾಮಾಗಮಾರ್ಥಂ ತು ಬುದ್ಧಿಮಾನ್ ॥ ಸ ತಂಮಟಾಷ್ಟಾದಶಕಶೃಂಗ ವಾದ್ಯಾರವೋ ಜನೈಃ । ಝಟಿತಿ ಕ್ರಿಯಾತಾಮದ್ಯ ತ್ವಿತ್ಯಾಜ್ಞಾಮಕರೋತ್ತದಾ॥ ತದ್ರವಾದಾಗತಾಸ್ಸರ್ವೇ ಸಕೋಲಾಹಲಶಬ್ದಕಾಃ । ಸ್ವಸ್ತ್ರೀ ಬಾಲಕುಮಾರಾದಿವೃದ್ಧಾಂತಾಶ್ಚಸಸಂಭ್ರಮಾಃ ॥ ದೇವಕಾಂತಾದಯಸ್ತತ್ರ ಸ್ವಸ್ವಸ್ತ್ರೀ ಸಹಿತಾ ಗತಾಃ॥ ತತಃ ಪರತರಾ ದೇವೀ ಕಾವೇರೀತ್ಯಭಿಧಾನತಃ । ಸರಿದ್ರೂಪೇಣ ನಿರ್ಗತ್ಯ ಸಹ್ಯಮೂರ್ಧಸ್ಥಕುಂಡತಃ॥ ಅಗಸ್ತ್ಯಶಿಷ್ಯಸಂರುದ್ಧಾ ಧರಿತ್ರ್ಯಂತರ್ಗತಾಗತಾ। ಕ್ವಚಿದ್ಭಾಗಂಡಕೇ ದ್ರಷ್ಟಾ ಕೈಶ್ಚಿದ್ದೃಷ್ಟಾತತಃ ಪರಮ್॥
ತತೋ ದೃಷ್ಟ್ವಾ ವಲಂಬರಿಯಾಂ। ಸ್ವಪುತ್ರೀ ಗರ್ಭಸಂಭವೈಃ।
ದೇವಕಾಂತಾದಿಭಿರ್ದೇವೀ
ಸಸಂಭ್ರಮ ವಿಲೋಕನೈಃ।
"ದೌಹಿತ್ರಾ ಲೋಕನಾದೇವ ಸುಸಂತುಷ್ಟಾ ಸುವಿಸ್ತಾರಾ........॥[27]

---

26 ಪಟ್ಟೋಲೆ ಪಳಮೆ – ನಡಿಕೇರಿಯಂಡ ಚಿಣ್ಣಪ್ಪ P.No. 11.-55-

27 ಸ್ಕಂದಪುರಾಣಂತರ್ಗತ ಶ್ರೀ ಕಾವೇರೀ ಮಾಹಾತ್ಮೆ

ಇಲ್ಲಿ ಚಂದ್ರವರ್ಮ ರಾಜಂಡ ಮೊಂವನಾನ ದೇವವರ್ಮಂಗ್ ಪಾರ್ವತಿದೇವಿ ಸ್ವಪ್ನದರ್ಶನ ಕೊಡ್‌ತಿತ್ ಅಪ್ಪಣೆ ಮಾಡ್‌ನ ಪೋಲೆ – ದೇವವರ್ಮ ಪೊಲಂಜತಿಕ್ ಎದ್ದಿತ್ ತಾಂಡ ಅಣ್ಣತಮ್ಮಣಂಗ, ಸಾಲ್ ಸಂತಾನ ಬೆಂದು – ಚಂಜದಿಯಕ್ ಪಾರ್ವತಿ ದೇವಿ ಕೆಣಚಿಲ್ ಎಣ್ಣ ವಿಷಯತ್‌ನ ಎಣ್ಣಿತ್, ಪಂಡೇತ ನಡ್‌ಪು ಪೋಲೆ ತಾಂಡ ಅಣ್ಣ ತಮ್ಮಣಂಗಡ ಕೂಡ, ಕಾವೇರಿ ತಾಯಿ ವೊಕ್ಕಿ ಬಪ್ಪ ಸಮಯತ್, ಪದ್‌ನೆಟ್ಟ್ ಕೊಂಬ್ ಊದುವಕೂ, ದುಡಿ ಕೊಟ್ಟುವಕೂ ಎಣ್ಣುವ. ಆ ಸದ್ದ್‌ಕ್ ಕುಶೀಲ್ ಕೋಲಾಹಲತ್ ಆಡಿಯಂಡ್, ತುಳ್ಳಿಯಂಡ್ ಪೊಣ್ಣಾಳ್ ಮಕ್ಕ ಆದಿಯಾಯಿತ್ ವಯಸ್ಸಾನವೂ ಕೂಡಿ ವಲಂಬುರಿಲ್ ಕೂಡುವ. ಪಾರ್ವತಿ ಸ್ವರೂಪಿಣಿಯಾನ/ಶಕ್ತಿ ಸ್ವರೂಪಿಣಿಯಾನ ಕಾವೇರಿಮಾತೆ ಸಹ್ಯಾದ್ರಿ ಕುಂದ್‌ರಡಿಲುಳ್ಳ ಕುಂಡಿಕೆಂಜ ಪೊಳೆಯಾಯಿ ಪೊರಡುವ. ಅನ್ನನೆ ಪೊರಟ ಕಾವೇರಿನ ಚೆನ್ನ ಜನ ಭಾಗಮಂಡಲತ್ ಕಾಂಬ ಎಇೂ ಚೆನ್ನ ಜನ ಭಾಗಮಂಡಲ ಕಡ್‌ಂದಿತ್ ಕಂಡತ್. ಕಾವೇರಿ ಮಾತೆರ ಮೋವಡ ಸಂತಾನ ಕೆಣಚಿ ಪೋಲೆ ವಲಂಬುರಿಲ್–ಬಲಮುರಿಲ್ ಕಾವೇರಿ ತಾಯಿನ ಕಾಂಬ.

ಇಲ್ಲಿ '18' (ಪದ್‌ನೆಟ್ಟ್) ಎಣ್ಣುವ ಸಂಖ್ಯೆಕ್ ಮಹತ್ವ ಕೊಡ್‌ತದ್ ಕಾಂಬಕ ಮಾಭಾರತತ್‌ಲ್ ವ್ಯಾದವ್ಯಾಸ ಕೊದ್‌ಚ ಸಂಖ್ಯೆ ಪದ್‌ನೆಟ್ಟ್, 18 –ಪರ್ವ, 18 ಅಕ್ಷೋಹಿಣಿ ಸೈನ್ಯ, 18 ದಿನ ನಡ್‌ಂದ ಕುರುಕ್ಷೇತ್ರ ಯುದ್ಧ...ಇನ್ನನೆ ಸುಮಾರ್ 18 ಸಂಖ್ಯೆನ – ಮಾಭಾರತತ್ ಕಾಂಗೊಲು. ಪುರಾಣತ್ ಮಾತ್ರ ಅಲ್ಲ ಕೊಡವಡಲ್ಲಿ ಇಂದೂ ಪದ್‌ನೆಟ್ಟ್ ಸಂಖ್ಯೆಕ್ ಮಹತ್ವ ಉಂಡ್. ಕೊಡವಡ ಕಕ್ಕಡ ಪದ್‌ನೆಟ್ಟ್‌ಡ – ಮದ್ದ್‌ಪುಟ್ಟ್, ಚಿಜ್ಜರ್ ಪದ್‌ನೆಟ್ಟ್‌ಂಡ ಕೈಲ್‌ಪೋಳ್ದ್!

ಇನ್ನನೆ ತೀರ್ಥರೂಪಿಣಿಯಾಯಿತ್ ವಲಂಬುರಿಲ್ ಬಂದ್ ಎತ್ತ್‌ನ ಕಾವೇರಿನ ಕಂಡ ಚಂದ್ರವಂಶರಾಜಂಡ ಸಂತಾನ – ಕಾವೇರಿ ತಾಯಿರ ಮೋವಡ ಸಂತಾನ. ಪೊಳೆರ ಮಿಂಞ್ಞಲ್ ಕಯಿತೊತ್ತಂಡ್ ನಿಂದಿತ್, ಶ್ರೀ ಕಾವೇರ‍್ಯಮ್ಮೆಡ ಪಾದಕ್ಕ್‌ಗೋವಿಂದ, ಗೋವಿಂದ, ಕನಿಕೆ–ಸುಜ್ಯೋತಿ ಪಾದಕ್ಕ್ ಗೋವಿಂದ. ಆದಿನಾರಾಯಣ ಪಾದಕ್ ಗೋವಿಂದ, ಮಹಾಲಕ್ಷ್ಮೀಪಾದಕ್ ಗೋವಿಂದ, ಸರಸ್ವತಿ ಪಾದಕ್ಕ್ ಗೋವಿಂದ, ಆದಿಮಾಯೆಯೆ, ಪಾರ್ವತಿಯೆ, ಗಂಗೆಯೆ, ಯಮುನೆಯೆ, ಗೋದಾವರಿಯೆ, ಸರಸ್ವತಿಯೆ, ನರ್ಮದೆಯೆ, ಸಿಂದೂವೇ, ಲೋಕೋಪಕಾರಿಯೆ, ಸಮುದ್ರಕ್ ಪೊರಟವಳೇ, ಆದಿಶಕ್ತಿಯೇ ಮಾಕಾವೇರಿಯೇ, ಎಂಗಳ ಕಾಪಾಡ್ ಕಾಪಾಡ್‌ಎಂದ್ ಪದ್‌ನೆಟ್ಟ್ ಕೊಂಬು ಉರುಪಿಯಂಡ್ ದುಡಿಕೊಟ್ಟಿಯಂಡ್ ಕಾತಂಡಿಂಜ ಕೊಡವಳ, ತಾಂಡ ಕ್‌ರ್‌ಮಕ್ಕಳ ಕಂಡ ಕಾವೇರಿಮಾತೆ, ಚೆನ್ನ ನಿಂದಿತ್,

ನಿದಾನತ್ ವಿಸ್ತಾರವಾನ... "ದೌಹಿತ್ರಾ ಲೋಕನಾದೇವ ಸುಸಂತುಷ್ಟಾ ಸುವಿಸ್ತಾರಾ........॥ ಪೊಳೆಯಾಯಿತ್ ಪೊರಟ್‌ನುಂಡ್, ಮದ್ಯತ್‌ತೊತ್ತಂಡ್ ನಿಂತಿಂಜ ಕಾವೇರಿ ಮಾತೆರ ಕ್‌ರ್‌ಮಕ್ಕಡ ಬೋಳೆಕತ್ತಣೆ ನೀರಾಯಿತ್, ಎಲ್ಲಾನೋ ಮರ್‌ಂದಿತ್ – ತಡಿರ ಮೇಲೆ ಪೋದ ಇಲ್ಲತೆ ಕಾವೇರಿತಾಯಿರ ಬರವು ದರ್ಶನಕ್ ಕಾತ್‌ನಿಂತಿಂಜ ಪೊಮ್ಮಕ್ಕಡ ಮಿಂಞಂಕಿಂಜಂತ ನೆರಿ, ಕಾವೇರಿ ಬಲತಬರಿಕ್ ಸುಳಿಇಟ್ಟ್ ತಿರಣೆ ಬಯ್ಯಕಾಚಿ. ತೀರ್ಥರೂಪಿಣಿಯಾನ ಕಾವೇರಿನ ನೋಟ್ಟ ಆಶೆಲ್ ಬೋಳೆಕೆತ್ತನೆ ನೀರ್ ಬಂದಿತ್ತ್ ಪೊಡಿಯನೆರಿ ಬಯ್ಯಕಾನದೂ ಮರ್‌ಂದಿತ್, ದೈರ್ಯತೂ, ಭಕ್ತಿಲೂ ಮಾನತೂ ನಿಂದದ್ ಕಂಡ ಕಾವೇರಿ ಪೆರ್ತ್ ಕುಷಿ ಪಟ್ಟಿತ್ತ್, ಚಂದೋಳ ಪೆರಜಾಯಿ – ರಾಜನೆ ನೀಡೊ, ನ್‌ಡ ವಂಶಕಾರಡೋ ಭಕ್ತಿಕ್ ಮೆಚ್ಚ್‌ನ. ನಿಂಗಕ್ ಎನ್ನಾಂಡು ಕೇಳಿತಪ್ಪಿ.....ತಡಮಾಡತೀಂದ್ ಎಣ್ಣುವ.

ತಾರೋದೀವಿಯೆ ನೀನ್ ವರವೊ॥ಪ॥ ಮರೆಯತೆಯೊ ನೀಗುಣವೊ ॥ಅ॥ಪ॥
ನೇರ ನೆಲಚಿಕೂಡ ॥ ತಾರಿತುದಿಪೋಳ॥ ಶೂರಂಗಕೀದೇಶ॥ನೇರಾಯಿತಿಪ್ಪಕ್॥1॥
ನಾಗಲೋಕಕ್‌ಡೊತ್ತ್ ॥ ಬೋಗ ಬಾಗಿಯ ಸೊತ್ತ್ ॥ ಜಗವೊಡಿಕ್ಕನೆ ತಂದ್ ।
ಸುಗತಾರೊಡೆಂಗಕ್ ॥2।
ಮೂಲಕಾವೇರಿಯೆ ಕೇಳ್ ನಂಬಿತ್ ನಿನ್ನ॥ ಬಾಳುವ ಆಶೆಯೊ ।
ಮೇಲಾಯಿತಿಪ್ಪಕ್ಕ್ ॥3॥ [28]

ಮಹದೇವಿಯೇ ನೀಡ ವರದಾನತ್ ಕೆಟ್ಟ್‌ನಂತ ಎಂಗಡ ಈ ಜನ್ಮಭೂಮಿ, ನೇರ-ನೆಲ್ಲಿ ಇಕ್ಕಣೆಕ್ ಎಂಗಡ ವಂಶಪಾರಂಪರ್ಯ ಇಪ್ಪನೆಕೆಯೂ, ಬಾಗಿಯ ಬರ್‌ಕತ್ತ್‌ಲ್ ಇಪ್ಪನ್ನನೆಯೂ, ಎಂಗಕ್ ನೀನ್ ಕುಲದೇವಿಯಾಯಿತಿಂಜಂಡ್ ಎಕ್ಕಲೂ ನಿನ್ನ ತುದಿಪಂತ ಗೇನ ಎಂಗಕ್ ತರಂಡೂಂದ್ ಬೋಡ್ಯವ.

ಕಾವೇರಿಯಮ್ಮೆ ಇನ್ನನೆ ಎಣ್ಣುವ – ನಿಂಗಡ ಆಶೆ ಪ್ರಕಾರ ಈ ಕ್ರೋಡದೇಶ ನಿಂಗಡ ಜನ್ಮ ಭೂಮಿಯಾಯಿತ್ ಇಲ್ಲಿಯೆ ಬದಿಕಿ. ಬಡತನಂದೇಣ್ಣುವದ್ ನಿಂಗಕ್ ಬರತೆ ಇರಡ್. ಕುಲದೇವತೇಂದ್ ಎನ್ನ ನಂಬ್‌ನಚ್ಚಕ್ ಕಾಲ ಸುಗತ್ ಬಾಳಿ. ದೇವ ಭಕ್ತರಾಯಿತೂ, ಪರೋಪಕಾರಿಯಳಾಯಿತೂ, ಸತ್ಯವಂತಂಗಳಾಯಿತೂ, ಧರ್ಮಿಷ್ಟಂಗಳಾಯಿತೂ, ಮಕ್ಕ ಮರ್‌ಮಕ್ಕ, ಕ್‌ರ್‌ಮಕ್ಕಳಾಯಿತ್, ಸಾಸ್ಥಿತ ಈ ದೇಶತ್ ಬದ್‌ಕೀಂದ್ ವರತಂದೊ. ಈ ವಲಮುರಿಲ್ ಇಂದ್‌ತೊಟ್ಟ್ ಈ ಕಾವೇರಿ

---

28 ಅಪ್ಪನೆರವಂಡ ಅಪ್ಪಚ್ಚಕವಿ – ಸಾವೇರಿ ರಾಗತ್ – ಕಾವೇರಮ್ಮೆನ ಕೊಡವ ವಲಮುರಿಲ್ ವರ ಬೋಡಿಯವ ಸಂದರ್ಭ.

ತೀರ್ಥ ಮಾಫಲವಾಯಿತಿಂಜಿತ್, ತೊಲೆಯಾರ್ ಚಂಗ್ರಾಂದಿ ಕಯಿಂಜ ಪಿಕ್ಯಾಂದ್ ಆರ್ ಭಕ್ತಿಲ್ ಬಂದಿತ್ ಎನ್ನ ನೆನತಿತ್ ಇಲ್ಲಿ ಕುಳಿಪೊ, ಅನ್ನತಯಿಂಡ ಸರ್ವಪಾಪ ಪರಿಯಾರ ಆಡ್. ಮೂಂದ್ ದಿನ ತಪ್ಪತೆ ಕುಳ್‌ಚವು ಮುಕ್ತಿ ಪಡೆಯಡ್, ದಂಡನೆ ಕಾವೇರಿಂದ್ ಎಲ್ಲಾರೂ ಅರಿಯಡ್. ಎನ್ನ ನೋಟುವ ಆಸೆಲ್ ಪೊಮ್ಮಕ್ಕ ಧೈರ್ಯತೂ, ಭಕ್ತಿಲೂ, ಬೋಳಿಕೆತ್ತನೆ ನೀರ್ ಬಂದ್, ಮಿಂಙಾಕಿಪ್ಪ ಪೊಡಿಯನೆರಿ ಬಯ್ಯಕಾನದು ಕೂಡ ಮರ್‌ಂದಾಂಗ್, ಪೆರ್ತ್ ಸಂತೋಷಪಡುವಿ. ಇದ್‌ಂಗಾಯಿತ್ ಎನ್ನ ಪ್ರತ್ಯಕ್ಷ ಕಂಡಂತ ಗುರ್ತ್‌ಕಾಯಿತ್, ಪೊಮ್ಮಕ್ಕಕ್ ಇಂದ್ ಬಯ್ಯಕಾನಂತ ಪೊಡೆಯನೆರಿ ಬಯ್ಯಕೆನ್ನೆ ಇಂಜಂಡ್, ಬಲತಬರಿಕ್ ಮೊಲಕೆಟ್ಟ್ ಕೆಟ್ಯವಡ್. ಇನ್ನತ ಮದಿಯ ಪೊರಪಾಡ್ ಲೋಕತ್ ಏದ್ ಪೊಣ್ಣ್‌ಜಾತಿಕ್ಕೂ ಇಲ್ಲೇಂದ್ ನಂಬಿ. ಕೊದ್‌ಚಿತ್ ಈ ವರ ನಿಂಗಕ್ ತಂದದಾಚಿ. ಈಂಡ ಮೇಲೂ ವಲಂಬುರಿಂದ್ ಈ ಜಾಗಕ್ ಇಂಜಂತ ಪೆದ ಇಂದ್‌ಂಜ ಬಲಮುರಿಂದ್ ಪೆದ ಇರಡ್ ನಿಂಗರೆಲ್ಲಾಕೂ ನಲ್ಲದಾಡ್‌ಂದೆಣ್ಣಿತ್ ಪೊರಡುವ ಕಾವೇರಿ–ಈ ಪುರಾಣ ಕಥೆ, ಕೊಡವಡ ನಂಬಿಕೆ–ಸತ್ಯಪೋಂದ್ ಎಣ್ಣುವನಕೆ, **ಬಲಮುರಿಲ್ ಕಾವೇರಿ ಪೊಳೆ ಬಾರೀ ಅಗಲತೆ ಇಕ್ಕಲೂ ವಿಸ್ತಾರವಾಯಿತ್ ಒಕ್ಕುವ.** ಭೂಮಿ ಜೂರಿಯಂಡ ಸುತ್ತು ಪ್ರದಕ್ಷಿಣೆ ಬಪ್ಪನಕೆ, ಕಾವೇರಿ ನೀರ್‌ರ ಸುಳಿ, ಬಲತೆ ಬರಿಕ್ ಪ್ರದಕ್ಷಿಣೆ ಬಪ್ಪದ್ ಬಲಮುರಿಲ್ ಇಕ್ಕಲೂ ನಂಗ ಕಣ್ಣ್‌ಗೊಂಡ್ ಕಾಂಗೊಲು.

ಪಾರ್ವತಿಯಾಯಿತೂ, ಲಕ್ಷ್ಮೀಯಾಯಿತೂ, ಸರಸ್ವತಿಯಾಯಿತೂ – ಆದಿಮಾಯೆಯಾನ ಕಾವೇರಿಯಮ್ಮೆ ಕೊಡವು ದೇಶತ್ ಪವಿತ್ರವಾನ ತೀರ್ಥ ಅವತಾರ ಎಡ್‌ತಗೊಂಡ್ ಕೊಡವು ಮಣ್ಣ್‌ಕ್ ಕಾವೇರಿತಾಯಿ ಕುಲದೇವತೆಯಾಚಿ.

ತೊಲ್ಯಾರ್ ಚಂಗ್ರಾಂದಿ ಸಮಯತ್, ನಟ್ಟ ಬೊಳೆಯೆಲ್ಲಾ ಪೊಡೆಕಟ್ಟಿತ್ ಆ ಪಚ್ಚೆರಂಗ್‌ನ ನೋಟ್ವದೇ ಓರ್ ಚಾಯಿ. ಬೇಕೋವು ಎಲ್ಲಾ ಪಚ್ಚೆ ರಂಗಾಯಿತಿಪ್ಪ ಸಮಯತ್ ಕಾವೇರಿ ಚಂಗ್ರಾಂದಿ ನಮ್ಮೆ–ದಂಡ್ ದಿನ ನಡ್‌ಪ. ತೀರ್ಥ ಬಪ್ಪಕ್ ಓರ್ ನಾಳ್ ಮುಪ್ಪಡೆ ಬೊತ್ತ್‌ಕುತ್ತುವ ಪದ್ದತಿ.

ಪೊಣೆ ಅಲ್ಲೇಂಗಿ ಪೊಂಗ ಮರತ್‌ರ ದಂಡ್ ನಾಟೆರ ತುದಿನ ಕತ್ತರಿತ ಮಾದರಿ ಕೀತಿಯಂಡ್ ಆನ ಬೇಲ್, ಬಾಣೆ, ಕಳ, ಕೂವ, ಮನೆ, ಯಾಕ ಆಕತೆಂವ ಇನ್ನನೆ ಎಲ್ಲಾಲ್ಲಿಯೂ ಕುತ್ತಿತ್, ಆಂಗ್ ಕೈಬಳ/ಬೊತ್ತ್ ಬಳ್ಳಿನ ಮೂಂದ್ ಸುತ್ತ್ ಸುತ್ತಿತ್ತ್ ನಾಟೆಕ್ ಚಿಕ್ಕ್‌ಚಿಡುವ. ಯಾಕ/ಆಕತೆಂವ, ಕೂವತ್‌ರ ಪಕ್ಕ ಏಳ್ ಮನೆರ ಪಕ್ಕ ಮೂಂದ್ ಕಾಲ್‌ರ ನಾಟೆನ ಕುತ್ತಿತ್ತ್, ಬೊತ್ತ್‌ಬಳ್ಳಿರ ಕೂಟ್‌ಕ್ ಪಾಬಳ್ಳಿ ಮೂಂದ್ ಸುತ್ತ್, ಸುತ್ತಿತ್ತ್ ಬೆಪ್ಪ. ಬೊತ್ತ್ ಕುತ್ತುವಕ "ಬೊತ್ತುಲೆ..."ಂದೆಣ್ಣುವ.

ಪಾಂಡವ–ಕೌರವ ಬೊತ್ತೋ....ನೆಲ್ಲ್ ಕಂಡೋ–ಕದ್‌ರ್–ಕಾಂಡೋಂದೆಣ್ಣಿತ್ತ್ ಕ್ಲೂ–ಕ್ಲೂ–ಕ್ಲೂಂದ್ ಮೂಂದ್ ಕೂತ್‌ಡುವ.

ಸೃಷ್ಟಿ, ಸ್ಥಿತಿ, ಲಯಕಾರನಾನ ಚೂರಿಯದೇವ ಮೂಂದು ಪೊತ್ತ್ ಮೂಂದ್ ರೂಪ ಈ ಭೂಮಿಲುಳ್ಳ ಜೀವಿಯಳ ಕಾಪಾತುವನೆಕೆ, ಕಾವೇರಮ್ಮೆ ಮಾತಾಯಿ ನಂಗಳ ಕಾಪಾಡೊಂಡೂಂದ್ ಬೋಡಿಯುವ. ಈ ಪಾಂಡವ–ಕೌರವ ಬೊತ್ತೋಂದ್ ಎಣ್ಣುವಂಗ್ ಕೊಡವವಡಲ್ಲಿ ಓರ್ ಕಥೆ ಉಂಡ್. ಸತ್ಯವಂತಗಳೂ–ದರ್ಮಿಷ್ಟಂಗಳೂ ಆನ ಪಾಂಡವಡ, (ಕೊಡವ ತಂಗಳ ಪಾಂಡವಂಗಾಂದೆಣ್ಣಿಯವ / ಕೊಡಗಿನ ಜನಪದ ಸಾಹಿತ್ಯವೊಂದರ ಪ್ರಕಾರ ಕೊಡವರು ಪಾಂಡವರ ವಂಶಸ್ಥರೆಂದೂ ಹೇಳುತ್ತಾರೆ).[29] ಆಸ್ತಿನ ದುಷ್ಟಂಗಳಾನ ಕೌರವಂಗ, ಕಾವೇರಮ್ಮೆರಲ್ಲಿಕ್ ಪೋಯಿತ್ ಪಾಂಡವಡ–ಕೊಡವಡ ಆಸ್ತಿ ನಂಗಕ್ ಬೋಡೂಂದ್ ತೊಲ್ಯಾರ್ ಚಂಗ್ರಾಂದಿಲ್, ಕೇಟಂಡಲ್ಲಿ, ಕಾವೇರಮ್ಮೆ ನಾಡಮಕ್ಕ ಕೊಡವ, ಅಯಿಂಡ ಆಸ್ತಿಕೆಲ್ಲಾ ಬೇಲಿ ಇಟ್ಟ್‌ರ್‌ತ್‌ೇಂದೂ, ಏಣೂ ಆರ್ ತಿಂಗ ಕಯಿಂಜಿತ್ ಬಾರಿ ನೋಟನಾಂದ್ ಎಣ್ಣುವ. ಆರ್‌ತಿಂಗ ಕಯಿಂಜಿತ್ ಪುನಃ ಕೌರವ, ಕೊಡವಡ ಆಸ್ತಿ ಕೇಪಕ, ಅಯ್ಯೋ ನಾಡ ಮಕ್ಕ ಉತ್ತಿತಾಯಪೋಚೇಂದ್ ನೆವಸ ಎಣ್ಣಿಯಂಡ್, ಪೊಮ್ಮಾಲೆ ಕೊಡವು ಮಣ್ಣ್‌ಲ್ ಕಾವೇರಿಯಮ್ಮೆ ಕೊಡವಳ ಉಳಿಚಿಟ್ಟಂಡ್ ಬಂದಂಡುಂಡ್‌ಂದೂ, ಆನಗೂಂಡ್ ಕಾವೇರಿ ಚಂಗ್ರಾಂದಿಕ್ ಪೊತ್ತ್ ಕುತ್ತಿತ್ತೇ ಕುತ್ತೊಂಡು, ಬಿಸುಕ್ ಮೂಂಬ್ ಸಾಲೇಂಗಿ ಉತ್ತಿತ್ತೇ ಉಕ್ಕೊಂಡೂಂದೆಣ್ಣುವ ನಂಬಿಕೆ–ನಿರ್‌ಕ್ ಕೊಡವಡಲ್ಲಿ ಇಕ್ಕಲೂ ಉಂಡ್. ಇಂಞೋರ್ ವಿಷಯ ನಾಕಿಲ್ಲಿ ಎಣ್ಣೊಂಡೂಂದ್ ತೋಂದುವ – ಬಿಸು ಚಂಗ್ರಾಂದಿ – ತೊಲ್ಯಾರ್ ಚಂಗ್ರಾಂದಿ ದಂಡೂ ಸೂರಿಯ (Equator) ಭೂಮಧ್ಯ ರೇಖೆನ ಕಡ್‌ಂದಂಡ್ ಪೋಪ ಸಮಯ! ಸರಿಯಾಯಿತ್ ನಂಗಡ ಮನೆ ಕ್‌ಕ್‌ಕ್ ಮೊಗ ಮಾಡಿತ್ತಾಂದ್ ಪರೀಕ್ಷೆ ಮಾಡಿಯವಕ್ ಇದೂ ಓರ್ ಸುಲಭ ಸೂತ್ರ ಬೊತ್ತ್ ಕುತ್ತುವಕ ಪಾಂಡವ ಕೌರವ ಬೊತ್ತೋ.....ಆನಪಿಂಞ, ನೆಲ್ಲ್‌ಕಂಡೋ...ಕದ್‌ರ್ ಕಾಂಡೋ.....ಂದೆಣ್ಣಿತ್ತ್, ಮೂಂದ್ ಕೂತ್‌ಡುವ. ಆದ್ಯ ಬೊತ್ತುಲೇಂದ್ ಎಣ್ಣಿತ್, ಬೊತ್ತ್‌ಕುತ್ತುವ. ಅಧರ್ಮತ್‌ರ ವಿರೋದ ಪಡೆ ಪೊಪ್ಪಕ್ ಬೊತ್ತುಲೇಂದ್ ಇದ್‌ಂಡ ಅರ್ಥ. ಬೊತ್ತುಲೇಂದೆಣ್ಣಿತಾನ ಪಿಂಞ ಪಾಂಡವ–ಕೌರವ ಬೊತ್ತೋಂದ್ ಎಣ್ಣಿತ್ತ್. ನೆಲ್ಲ್ ಕಂಡೋ–ಕದಿರ್ ಕಾಂಡೋಂದೆಣ್ಣುವ. ಕಾಂಡ ಓರೇ ಬುಡ ಉಂಡೆಂಗಿಯೂ ಅದ್‌ಲ್ ಕಣ್ಣ್ ದುಂಬ್‌ವಚ್ಚಕ್ ಜೊಪ್ಪೆನೆ

29 ಭಾರತದ ಗ್ಯಾಸೆಟೀಯರ್ ಕರ್ನಾಟಕ ರಾಜ್ಯ P.No. 217.

ಕೊಂಬ್ ಇಪ್ಪ. ಕಾಂಡತ್‌ರ ನೆಡಿ ಪೋಲೆ ಕದ್ ಬರಡ್–ನೆಲ್ಲ್ ಪೊಲಂಜ ಬರಡ್‌ಂದೆಣ್ಣುವ ಅರ್ಥ ಉಂಡ್ ಇಲ್ಲಿ. ಪಾಂಡವ–ಕೌರವ ಬೊತ್ತ್‌ಂದಣ್ಣಕ, ಪಾಂಡವಂಗಳಾನ ಕೊಡವಡ ಮಣ್ಣ್‌ಂದ್ ಅರ್ಥ, ಭೂಮಿಲ್ ಧರ್ಮಸ್ಥಾಪನೆ ಮಾಡ್‌ನ ಕೊಡವಾಂದ್ ಅರ್ಥ. ಅಜ್ಞಾತ ವಾಸತಿಂಜ ಪಾಂಡವಳ ತೇಡಿ ನಡ್‌ಂದಂಡಿಂಜ ಕೌರವವಂಗಡ ಬಟ್ಟೆ ತಪ್ಪ್‌ಚಿಡುವಕ್ ಪಾಂಡವಂಗ ಮಾಡ್‌ನ ತಂತ್ರ ಇದಾನನಗೊಂಡ್ ಪಾಂಡವ –ಕೌರವ (ಧರ್ಮ–ಅಧರ್ಮ) ಬೊತ್ತ್‌ಂದ್ ಎಣ್ಣುವಾಂದ್ ಪಳಮೆ ಉಂಡ್. ಚಂಗ್ರಾಂದಿ ಸಮಯತ್ ನಟ್ಟ ಬೊಳೆಯೆಲ್ಲಾ ಪೊಡೆಕಟ್ಟಿತ್ ದೂರ–ದೂರ, ಓರೊಂದ್ ಕದ್ ಕಡ್‌ಪಕ್ ಸುರು ಆಯಿತಿಪ್ಪ. ಕೊಡವ ಆದ್ಯಕದ್‌ನ ಕಂಡಸೆಕ್ಕೇ ಅದ್‌ಂಡ ಪೊಡೆ ಅಲ್ಲೇಂಗಿ ಪಾಲೆಕ್ ಕೆಟ್ಟ್ ಇಟ್ಟಿತ್ತ್, ಆಂಡ ಕಾಲ್‌ಪುಡಿಚಂಡ್–ಕಾವೇರಮ್ಮೆನ ಮನಃಸ್ಸ್‌ಲ್ ತುದಿಚಂಡ್, ನೇರೆ ಪತ್ತಾಯ ಇಲ್ಲೇಂಗಿ ತುಳಿಯತ್‌ರ ಪಕ್ಕ ಪೋಯಿತ್ "ಬೊತ್ತತೆ ಪತ್ತಾಯ/ತುಳಿಯವೇ ಕದ್‌ಕಂಡ ನಾನ್"ಂದ್ ಮೂಂದ್ ಕುರಿ ಪರಿವ. ಇದೆಲ್ಲಾ ನೋಟ್ವಕ ಕೆಲಕ್ ಕೂಳ್‌ರ ಪ್ರಾಮುಖ್ಯತೆ ಎಚ್ಚಕ್‌ಂದ್ ಎಣ್ಣುವ ಅರಿವು–ಪೋದ–ಜ್ಞಾನ ಕೊಡವಕ್ ಪಂಡೇ ಇಂಜತ್‌ಂದ್ ಎಣ್ಣೊಲು. ಇಕ್ಕಲೂ ಕೊಡವನಾನವೊ ಬೇಲ್ ನಟ್ಟತೇ ನಡ್‌ಕೊಂಡೂಂದ್ ಎಣ್ಣುವ ನಂಬಿಕೆ ನಿರ್‌ಕ್ ಕೊಡವಡಲ್ಲಿ ಉಂಡ್. ಎಞ ಪಾಬಳ್ಳಿ ಮೂಂದ್ ಸುತ್ತ್ ಬೆಪ್ಪದ್ – ಪಾಲ್ ಬಪ್ಪ ಬಳ್ಳಿ ನೀರ್‌ರ ಚಿಸ್ನೆಯಾಯಿತುಂಡ್. ನಲ್ಲ ನೀರ್ ಕ್‌ಟ್ಟುವ ಜಾಗ ಕಂಡ್‌ಪುಡಿಕೊಂಡುವೇಂಗಿ ವಾಸ್ತುಶಾಸ್ತ್ರಂಜ್ಞಂಗ ಪಾಲ್ ಬಪ್ಪ ಮರತ್‌ರ ಸೂತ್ರ ನೋಟುವ. ಮೂಂದ್‌ಕುರಿ ಕೂತ್‌ಡುವೊ, ಮೂಂದ್ ಸುತ್ತ್ ಬಳ್ಳಿ ಇದೆಲ್ಲಾ ಮೂಂದ್ ಪೊತ್ತ್‌ರ ಸೂರಿಯಂಡ ಬೋರೆ, ಬೋರೆ ರೂಪವೂ – ಆ ಮೂಂದ್ ಪೊತ್ತ್ ಮನುಷ್ಯ ತಡಿಕ್ ಅವಶ್ಯ ಉಳ್ಳ "ತೀನಿ"ರ ಸೌಕರ್ಯ ಮಾಡಿತಂದ ಕುಲದೇವಿ ಕಾವೇರಿನ ಮೂಂದ್ ಪೊತ್ತೂ ನೆನತಿಯಂಡ್ ತೊತ್ತಂಡ್ ಆ ದೇವಿರ ಋಣಕ್ ಕೊಡವ ಕುಂಬ್‌ಡುವ.

ತೊಲ್ಯಾರ್ ಚಂಗ್ರಾಂದಿಲ್ ಬ್ರಹ್ಮಕುಂಡಿಕೆಲ್ ಮಾತ್ರ ಅಲ್ಲ ಇಡೀ ಕೊಡವುರ ಪ್ರತೀಯೋರ್ ಕೂವತೂ, ಕೆರೆಲೂ ತೀರ್ಥ ಉಕ್ಕಿ ಬಪ್ಪಾಂದ್, ಕೊಡವ ನಂಬುವ. ತೀರ್ಥ ಬಂದಿತಾನ ಪಿಂಞ ಕಣಿ ಪೂಜುವೂ. ಬೊತ್ತ್‌ಕುತ್ತ್‌ನಂದ್ ಬೈಟ್ ಕಣಿ ಪೂಜೊಕುಳ್ಳ ಪೂನೆಲ್ಲಾ ಮುತ್ತೈದೆ ಪೊಣ್ಣಾಳ್ ಕೊಜ್ಜಿತ್ ಮಂಜಿಲ್ ಬೆಪ್ಪ. ತೀರ್ಥ ಉದ್ಭವ–ಆನಂಡ ಪಿನಿಯಾಂದ್ ಪೊಲಂಜತಿಕೆದ್ದ್‌ತ್ ಕುಳಿಚಿತ್, ಮನೆನೆಲ್ಲಾ ಒಡ್‌ಕಿತ್, ತ್‌ಟಿತ್ ಚಾಣತ್ತ್ ನೀರ್ ತಳಚಿತ್ತ್, ಬಾಡೆಲ್ ನೆಲ್ಲಕ್ಕಿ ಬೊಳಚ ಕತ್ತ್‌ಚಿಟ್ಟಿತ್ತ್, ಸುಮಾರ್ ಐನ್ ಮನೆಲ್ ತೂಕ್ ಬೊಳಚ ಇಪ್ಪ, ತಳಿಯಕ್ಕಿ ಬೊಳಕ್ ಸರಿಮಾಡಿತ್

ಕತ್ತಿಚಿಟ್ಟಿಂಡ್, ತೆಂಗೆ ಅಲ್ಲೇಂಗಿ ಚೌತೆನ ಚೋಂದ ರೇಷ್ಮೆ ವಸ್ತ್ರತ್ ಸುತ್ತಿತ್ತ್ ಬೊಳ್ಳಿ ಅಲ್ಲೇಂಗಿ ಕಚ್ಚಿ ತಳಿಯಕ್ ಅಕ್ಕಿ ಇಟ್ಟಿಂಡ್ ಅಕ್ಕಿರ ಕೊಡಿಲ್ ಅಳ್‌ಪ್‌ಚಿಡುವ. ಅದ್ ಪೊಣ್ಣ್ ರೂಪಾಯಿತ್ ಕಾಂಬನೆಕೆ ಮಾಡಿತ್ತ್ ಆಂಗ್ ಪತ್ತಾಕ್, ಕೊಕ್ಕೆತಾತಿ ಬಳೆ...ಇನ್ನನೆ ಎಲ್ಲಾ ಮಾಲ್‌ಟ್ಟಿತ್ತ್ ಪೂಜೆಚ್ಚಿತ್ ಬಾಡೆಲ್ ನೆಲ್ಲಕ್ಕಿರಡಿಲ್‌ಬೆಪ್ಪ. ಸೆರಿಮಾಡ್‌ನ "ಕಣಿ" ಕಾವೇರಿಯಮ್ಮೆನ ನೆಲ್ಲಕ್ಕಿರಡಿಲ್ ಮುಕ್ಕಾಲಿಲ್ ಬೆಪ್ಪ. ತಳಿಯಕ್ಕಿ ಬೊಳಕ್‌ಲುಳ್ಳ ಬೊಳತ ಅಕ್ಕಿ ಎಡ್‌ತಿತ್ತ್ 'ಕಣಿ' ಪೂಜ್‌ಸಾಂಗ್ ಅಕ್ಕಿನ ಇಡುವ ಮಂಗಲತ್ ಮಂಗಲಕಾರ, ಮಂಗಲಕಾರ್ತಿಕ್ ಅಕ್ಕಿ ಇಟ್ಟನಕೆ ಅಕ್ಕಿ ಇಟ್ಟಿತ್ತ್, ಕಣಿರ ಕಾಲ್ ಪುಡಿಚವ. (ಕೊಡವ ನಲ್ಲ ಕಾರ್ಯಕ್ ಅಕ್ಕಿಕ್ ಮಂಜ ಮೇಕುಲೆ) ಮನೆಲುಳ್ಳ ವಕ್ಕಕಾರ ಎಲ್ಲಾರೂ ಕಣಿರ ಕಾಲ್ ಪುಡಿಚಿತಾನ ಪಿಂಞ ವಕ್ಕತ್‌ರ ಪೆರಿಯಯಿಂಡ ಕಾಲ್‌ನ ಎಳಿಯವು ಪುಡಿಪ. ಇದ್‌ಂಗ್ ಪೊಣ್ಣಾಳ್, ಅಣಾಳ್ ಬೇದ ಇಲ್ಲೆ. ಎಲ್ಲಾರೂ ಅಪ್ಪರಿಪ್ಪರ ಕಾಲ್ ಪುಡಿಪ. ವಕ್ಕತ್ ಮೂತ ಮೋಲಿ 'ಕಣಿ'ಕ್ ಅಕ್ಕಿ ಇಟ್ಟಿತ್ತ್ ಕಣಿರ ಕಾಲ್‌ಪುಡಿಚಿತಾನಪಿಂಞ 'ಮುಂದ್‌ಲ್' ಉಳ್ಳ ಕನ್ನಿಕಂಬ್‌ರ ಕಾಲ್ ಪುಡಿಚವ. ಅವಗಿಂಜ ಪೆರಿಯಯಿಂಗ ದಾರೂ ಇಲ್ಲತನಗೊಂಡ್ ಐನ್‌ಮನೆಲ್ 'ಕಾರಣಂಡ ಸ್ಥಾನವಾನ ಕನ್ನಿಕಂಬ್‌ರ ಕಾಲ್‌ಪುಡಿಪದ್ ಪದ್ಧತಿ. ಈ ಎಲ್ಲಾ ಚಡ್‌ಂಗ್ ಕಯಿಂಞಪಿಂಞ, ಮುತ್ತೈದೆ ಕೊಡವತಿ, ಕೂವ ಅಲ್ಲೇಂಗಿ ಕಣಾತರೆಕ್ ಪೋಯಿತ್, ಚೂರಿಯಂಗಕ್ಕಿ ಇಟ್ಟಿತ್ತ್, ತೆಂಗೆವಡ್‌ತಿತ್ತ್, ಕೊಡಿಯಲೆ, ಅಡಿಕೆ, ಕುಂಕುಮ, ಪೂವು–ನೀರ್‌ಕ್ ಬುಟ್ಟಿತ್ತ್ ದೂಪ ತಿರಿ ಕತ್ತ್‌ಚಿಟ್ಟಿತ್ತ್, ಪುದಿಯ ನೀರ್ ಕೊಂಡ ಬಂದಿತ್ತ್ ಅಡಿಗೆ ಮಾಡುವ. ಓರೂರ್ ವಕ್ಕಕಾರ ಕೊವತ್ತ್‌ರಲ್ಲಿಯೂ ದೋಸೆ ಪುಟ್ಟ್ ಬೆಪ್ಪ ಪದ್ಧತಿ ಉಂಡ್ ಮೂಂದ್‌ನಾಟೆ ಕುತ್ತಿತ್ತ್ ಪಾಬಳ್ಳಿ ಬೆಚ್ಚಲ್ಲಿ–ಯಾಕ/ಆಕತೆಂವ ಮೂಂದ್ ದೋಸೆಪುಟ್ಟ್, ತೇನ್, ನ್ಯೆಯಿ, ತೆಂಗೆಪೊಳಿ, ಬಾಳೆಪಣ್ಣ್‌ನ–ಬಾಳೆರ ಕೊಡಿ ಎಲಕಂಡತ್ ಎಡ್‌ತಂಡ್ ಆಣಾಳ್‌ದಾರೇಂಗಿ ಕೊಂಡಪೋಯಿ ಬೆಚ್ಚಿತ್ತ್ ದೂಪತಿರಿ ಕತ್ತಿಚಿಟ್ಟಿತ್ತ್ ಕ್ಯೂ–ಕ್ಯೂ–ಕ್ಯೂಂದ್ ಮೂಂದ್ ಕೂತ್‌ಡುವ. ಈ ಚಡಂಗ್ ಪೊಲ್‌ಂಜಿತಿಕ್ ಕಾಕೆ ಪಕ್ಷಿ ಏವಾಂಗ್ ಮುಪ್ಪಡೆ ಆಂಡು. ದೋಸೆಪುಟ್ಟ್‌ನ ಗರುಡ ಕೊಂಡಪೋಪಾಂದ್ ಕೊಡವ ನಂಬುವ. ಗರುಡಂಗ್ ಮೋದಿ ಬೆಪ್ಪಾತೂ, ಕೊಡವ ಚೂರಿಯ ದೇವಕ್ ಕುಂಬ್‌ಡ್‌ವವೂಂದ್ ಅರಿಯೊಲು. ಪುರಾಣತ್, ಶ್ರವಣ ನಕ್ಷತ್ರ ಮಾಪಿಷ್ಣುರ ಜನ್ಮ ನಕ್ಷತ್ರ. ಚೂರಿಯ ನಾರಾಯಣಂದೇ ಎಣ್ಣುವ ಚೂರಿಯ ದೇವ ಉಳ್ಳ ಶ್ರವಣ ನಕ್ಷತ್ರ ಉಳ್ಳಲ್ಲಿ. ಇಕ್ಕತ ಖಗೋಳ ವಿಜ್ಞಾನಿಯಳೂ ಇದ್‌ನ್ನೇ ಅಕ್ಕುಂದೆಣ್ಣುವ. ಎಲ್ಲಾ ನಕ್ಷತ್ರ ರಾಶಿನ ಓರೋರ್ ಪ್ರಾಣಿರ ರೂಪತ್ ವೇದ–ಪುರಾಣ ಗುರ್ತ್‌ಚಿಡುವ. ಅನ್ನನೇ ಶ್ರವಣ ನಕ್ಷತ್ರತ್‌ನ

ಗರುಡಾಂದ್ ಎಣ್ಣುವ. ವಿಷ್ಣು ಪರಮಪಾದಂ ತುಲಾರಾಶಿಂಜ ಮಕರರಾಶಿ ಶ್ರವಣ ನಕ್ಷತ್‌ರ ಕತ್ತನೆ ಉಳ್ಳೂ! ಇದ್ ವೈಜ್ಞಾನಿಕ ಸತ್ಯವೂ ಅಕ್ಕು. ನಂಗಡ ಪೆರಿಯಂಗಡ ಗಣಿತ ಸೂತ್ರಕ್ ಕುಂಬ್‌ಡೊಂಡು ಎಂಗ. ಕಣಿಪೂಜ್‌ನಾನ ಮೂಂದ್, ಅಂಜಿ, ಏಳ್ ನಾಳ್ ಬೆಚ್ಚಂಡಿಂಜಿತ್, ಬಾಡಿಪೋಸ ಪೂವುನ-ಪೊಳೆಕ್ ಇಲ್ಲೇಂಗಿ ಪಾಲ್ ಬಪ್ಪ ಮರತ್‌ರಡಿಕ್ ಇಡುವದ್ ಪದ್ಧತಿ. ತೊಲ್ಯಾರ್ ಚಂಗ್ರಾಂದಿ ಪತ್ತ್ ದಿವಸತ್‌ರ ನಮ್ಮೆ. ಕಾವೇರಿ ಕುಳಿಪಕ್ ಪೋಪವು ಕೃಚಂಗ್ರಾಂದಿಕತ್ತಣೆ  ಓರ್ ತಿಂಗ ಪೋಪ. ಕಾವೇರಿ ತಾಯಿ ಓರ್ ತಿಂಗ ಪೊಮ್ಮಾಲೆ ಕೊಡವು ತಲಾಕಾವೇರಿಲ್ ಇಪ್ಪಾಂದ್ ಕೊಡವ ನಂಬುವ. ತೊಲ್ಯಾರ್ ಚಂಗ್ರಾಂದಿ ಕಯಿಂಜಿತ್ ತಾಮನೆ ಮೂಡಿಯ ಮಂಗಲಾನ ಎಲ್ಲಾರೂ ವಯಸ್ಸ್‌ರ ಲೆಕ್ಕ ಆಂಗಿಲ್ಲೆ ಅಯಿಂಡಯಿಂಡ ತಾಮನೆಕ್. ಪತ್ತಲೋದಿರೊಳಿಯ ಪತ್ತ್ ದಿವಸ ಪೋಯಿತ್ ಅಯಿಂಡ ತಾಮನೆಲ್ ಪೆರಿಯಂಗಡ ಕಾಲ್‌ಪುಡಿಚಿತ್ ಬಪ್ಪದ್ ಪದ್ಧತಿ. ಇದ್‌ನ ಅಕ್ಕಿ ಇಡುವಕ್ ಪೋಪೊಂದೂ ಎಣ್ಣುವ. ತೊಲ್ಯಾರ್-ಚಂಗ್ರಾಂದಿ ಕಯಿಂಜಿತ್ ಪತ್ತನೇ ನಾಳ್‌ನ ಪತ್ತಲೋದಿಂದೆಣ್ಣುವ. ಕೊಡವಕ್ ಪತ್ತಲೋದಿ ಹಿಂದೂವಕ್ ಶಾಸ್ತ್ರತ್ ಮೂಂದರೆ ಮೂರ್ತ ಉಳ್ಳನೆಕೆ, ಅಂದೇತ ದಿನ ಏದೇ ನಾಳ್ ನಕ್ಷತ್ರ ನೋಟತೆ ಕೆಮಿಕುತ್ತುವೊ, ಆದ್ಯ ಮಕ್ಕಡ ಕೈತಿದ್ದುವೊ (ಪಂಡ್ ಅತ್ತ ಕಡಚಿ ಇಪ್ಪಕ ಮಂಡಂಗಳ ಪದಕ್ ಕೊಂಡಾಪ ಇಂಛತ್) ಇನ್ನನೆ ಪಲತರ ಚಡ್‌ಂಗ್  ನಡ್‌ತುವ. ಪತ್ತಲೋದಿಯಂದ್ ಸುಮಾರ್ ಪಕ್ಕಕಾರ ಕಾರಣಂಗ್ ಕೊಡಪ. ಎಞ ಚೆನ್ನ ವಕ್ಕಕಾರ ಬಿಸು ಚಂಗ್ರಾಂದಿಲ್ ಕಾರಣಂಗ್ ಕೊಡಪ.

ಪಾಂಡವಕೌರವ "ಬೊತ್ತ್‌ಕ್" ಸಾಕ್ಷಿಂದೋ...ಮಹಾಂತೋಡ್‌ರ ಪಕ್ಕತ ನೆಲೆಂದೋ... ಇಕ್ಕಲೂ ಕುಂದತ್ ಬೊಟ್ಟ್‌ಲ್ ತೀರ್ಥ ಬಂದ ಪಿನಿಯಾಂದ್ ಕಾವೇರಿ ತೀರ್ಥ ಎಡ್‌ತಂಡ್-ಕುದುರೆ ಎಡ್‌ತಂಡ್ ಕುಂದ್ ಪತ್ತುವ ಚಡ್‌ಂಗ್, ಅಲ್ಲಿ ನಡ್‌ಪ ಬೋಡ್‌ನಮ್ಮೆ ನೋಟ್ಟಕ, ಪಂಡೇತ ಕಾವೇರಿರ ಬೌಗೋಳಿಕ ಸಂಗತಿ ಕೊಡವಡ ಪೆರಿಯಂಗಕ್ ಅರಿಂಜಿತಿಂಜಿತಿಕ್ಕೂಂದೂ, ಕಾವೇರಿ ಪಡ್‌ಂಞಾರ್‌ಕ್ ಒಕ್ಕಿಯಂಡಿಂಜಂಗ್ ಈ ನಮ್ಮೆ ಓರ್ ಸಂಕೇತವಾಯಿತೂ ನಂಗಕಿಲ್ಲಿ ಕಾಂಬ. ಅಲ್ಲಿಯತ್‌ರ ಪರಿಸರ-ಬಲ್ಯ ಕುಂಡ್ ಕಡುಪು, ಅಲ್ಲಿ ಪಂಡ್ ಪೊಳೆ ವೊಕ್ಕಿಯಂಡಿಂಞಂಗ್ ಸೂಚಕವಾಯಿತ್ ಕಾಂಬ.

For seven days before the Tulasakramana in the village Mugutageri at the foot of the hill, the ryots assemble one from each house at the Mand and Sing coorg chants in praise of God.

On the night of the 7th day the inhabitants of the whole Nad come together disguising themselves in masks of 18 various descriptions, then they go to the ambala and dance and sing to the sound of dudikot[30]

ಇಲ್ಲಿಯೂ ಸಂಖ್ಯೆ ಪದ್‌ನೆಟ್ಟ್‌ಂಗ್ ಮಹತ್ವ ಕೊಡತದ್ ಕಾಂಗೊಲು. ಇಕ್ಕಲೂ ಕುಂದತ್ ಬೊಟ್ಟ್‌ಲ್ ಕಾವೇರಿ ತೀರ್ಥ ಬಂದ ಪಿನಿಯಾಂದ್, ಪದ್‌ನೆಟ್ಟ್ ತರಕಳಿ ಇಟ್ಟಂಡ್ ಬೋಡ್‌ನಮ್ಮೆ ಮಾಡುವ. ಕಾವೇರಿ ತೀರ್ಥ ಎಡ್‌ತಂಡ್ ಕುಂದ್ ಪತ್ತುವ. ಇಕ್ಕಲೂ ಅಲ್ಲಿ ಬೀಮಪಾರೆ, ಪಾಂಡವಪೊರೆಂದೆಣ್ಣುವ ಕಲ್ಲ್‌ರ ಮನೆಯೂ ಉಂಡ್. ಇದ್ ಪಾಂಡವಂಗ ಇಂಜಂಗ್ ಸಾಕ್ಷಿಯಾಯಿತುಂಡ್. ಆ ಬಲ್ಯ ಕುಡುಪುರ ನಡುಲೋರ್ ಕಲ್ಲ್ (2 ಅಡಿ ಅಗಲ x 5 ಅಡಿ ಉದ್ದ) ಉಂಡ್. ಅದ್‌ನ "ದೇರಟ್" ಕಲ್ಲ್‌ಂದ್ ಎಣ್ಣುವ

ನಾರಾಯಣಂ ದೇವಯ್ಯ
ತಾನೆನ್ನ ಪಣಿ ಕೆಜ್ಜ
ಅಲ್ಲತೊಂಡು ಅಲ್ಲಲ್ಲ
ಅಣ್‌ರೂಪ ಬುಟ್ಟಿತ್ತ್
ಮೋಹಿನಿರ ರೂಪಾಯಿ
ಪೊಣ್ಣಾಯಿತ್ ನಿಂದತ್
ಅಕ್ಕಣೆಕ್ ಚಂಜಾದಿ
ಲಕ್ಷ್ಮಿದೇವಿ ಮಾತಾಯಿ
ಪಾರ್ವತಮ್ಮೆ ದೇವಿರ
ಮೊಮ್ಮಾಯತವತಾರ
ಲೋಪಾಮುದ್ರೆ ದೇವಿನ
ಕೂಟ್‌ಕ್ ತೊಣೆಯಾಯಿ
ಅಲ್ಲಿಕೆ ಅಯಿಬತ್
ದೇವಿಯಳುದಂಡಾಳು
ಜೋಡುತ್ತಿತ್ ಪೋಕಣೆ
ರಾಕ್ರಾಸಿಯಕಂಡಿತ್
ಚಾಯಿಕ್ ಮರ್‌ಳಾಯಿ

ನಾಕ್ ನಾಕ್‌ಂದೆಣ್ಣಿತ್
ಅಮ್ಮೃತೋಡೆ ಪಾತ್ರನ
ಮೋಹಿನಿಕೊಡ್‌ತತ್
ಅದ್‌ಕಂಡ ಮೋಹಿನಿ
ಪೊಂಗಲಶ ಪಾತ್ರನ
ದೇಬುವಕ್ ಕೊಡ್‌ತತ್
ದೇಬುವಕ್ ಕೊಡ್‌ತಿತ್
ಅಲ್ಲಿಂಜ ಪೊರಟಿತ್
ಸಹ್ಯಮಲಕ ಊರ್‌ಲ್
ಕಲ್ಲಾಯಿ ಮರ್‌ಂಜಿತ್
ಕೇಳೋ ಕೇಳೋ ಬೆಂದುವೇ
ಆ ಕಲ್ಲ್ ನಡುಕಾಲೆ
ನುಗ್ಗೊಲು ಪೊರಡಲು
ನುಗ್ಗಿತ್ ಪೊರಟಿನೊ
ಕೆಜ್ಜ ಪಾಪ ಪೋಪಲ
ಮೇಲೆ ಪಾಪ ಪೊದ್ದುಲೆ
ಅನತ ನೆಲೆಯಾಪ
ಎಞೂ ಕೇಳ್ ಚಂಜದಿ
ಲೋಪಮುದ್ರೆ ದೇವಿನ
ಲಕ್ಷ್ಮೀದೇವಿ ಕೊಂಡಿತ್ತ್
ನಾಲ್ ಮಂಡೆ ಬ್ರಹ್ಮಂಗ್
ದತ್ತ್ ಮೋವಂದೆಣ್ಣಿತ್
ಕೈನ್‌ಟಿ ಕೊಡ್‌ತತ್ ... [31]

ಈ ಪ್ರಕೃತಿರ ಮಾಯೆಯೋ ಕಾವೇರಿಯಮ್ಮೆ ಆ ಕಲ್ಲ್‌ರ ಕೊಡಿಲ್ ಪ್ರದಕ್ಷಿಣೆ ಬಪ್ಪಯಿಂಗಕ್, ಎಂತ ಶಕ್ತಿ ಕೊಡುಪೋ...ಅಂತೂ ಮೋಹಿನಿ ಕಲ್ಲಾಯಿ ಮರ್‌ಂಜ ಆ ಕಲ್ಲ್‌ರ ಕೊಡಿಕ್ ಪತ್ತಿತ್ತ್ ಮೂಂದ್ ಸುತ್ತ್ ಪ್ರದಕ್ಷಿಣೆ ಬಪ್ಪ. ದುಂಬಾ ಜನಳ

30 G Richter :- Gazether of Coorg P.No. 174.

31 ಪಟ್ಟೋಲೆ ಪಳಮೆ – ನಡಿಕೇರಿಯಂಡ ಚಿಣ್ಣಪ್ಪ

ಆ ನಮ್ಮೆಂದ್ ಕಾಂಗೋಲು! "ದೇರಟ್ ಕಲ್ಲ್" ಸುತ್ತ್‌ನಕ ನಲ್ಲದಾಪ – ಬಾಗಿಯ ಬರಕತ್ತ್ ಬಪ್ಪಾಂದ್ ಕೊಡವ ನಂಬುವ. ದೇರಟ್ ಕಲ್ಲ್‌ಲ್ ಸುತ್ತುವದ್ ಪ್ರಪಂಚತ್‌ರ ಓರ್ ವಿಸ್ಮಯಾಂದೇ ಎಣ್ಣೊಲು! ನೋಟುವವಯಿಂಗಡ ಮೇಲ್ ಜುಂದೆಣ್ಣುವ! ಆನೆ ದ್ಯೆರ್ಯವೇ ಬೋಂಡು ಆ "ದೇರಟ್ ಕಲ್ಲ್" ಸುತ್ತುವಯಿಂಗಕ್. ಪಂಡ್ ದೇವಾಸುರಂಗ ಪಾಕಡ ಕಡಿವಕ್ಕ ಅಲ್ಲಿ ಪೊರ್‌ಟ ಅಮೃತ ಕೊಡತ್‌ನ ದುಷ್ಟ ಲೋಕಕಂಟಕಂಗಳಾನ ರಾಕ್ಷಾಸಿಯ ಕುಡಿಪಕ್ಕಾಗಾಂದ್ ಎಣ್ಣುವ ಉದ್ದೇಶತ್ ಮಾವಿಷ್ಣುರ ಅಂಶತ್ ಮೋಹಿನಿ, ಪಾರ್ವತಿ ದೇವಿರ ಅಂಶತ್ ಲೋಪಾಮುದ್ರೆಂದೆಣ್ಣುವ ಕುಂಞಿರ ರೂಪ ಪುಟ್ಟುವ. ತಂಗಡ ಕಾರ್‌ಬಾರ್ ತೀಂದ ಪಿಂಞ ಅಮೃತ ದೇವಕ್ ಮಾತ್ರ ಕ್‌ಟ್ಟುವನೆಕೆ ಮಾಡಿತಾನಪಿಂಞ ಲೋಪಾಮುದ್ರೆ – ಕಾವೇರಿ ಪೊಳೆಯಾಯಿವೊಕ್ಕುವ. ಮೋಹಿನಿ ಕಲ್ಲಾಯಿ ಮರ್‌ಂಜದೇ 'ದೇರಟ್ ಕಲ್ಲ್‌ಂದ್' ಕೊಡವ ನಂಬುವ. ಕೊಡವ, ಕೊಡವತಿಯಡ ಆಟ್‌ಪಾಟ್‌ಲೆಲ್ಲಾ ಮೋಹಿನಿ–ಕಾವೇರಿಕ್ ಸಂಮಂದ ಪಟ್ಟ ಆಟ್‌ಪಾಟ್ ಇಕ್ಕೂಲೂ ಕಾಂಗೋಲು.

"..................ಶ್ವೇತ ಪುಷ್ಪಧರಚ್ಛತ್ರಾಂಕಾಶಚಾಮರವೀಜಿತಾಮ್ ॥[32]

ಇಲ್ಲಿ ಕಾವೇರಮ್ಮೆನ ಬೊಳ್‌ತ ಪೂ ಕೊಡೆಪುಡಿಪವಂದೂ, ಕೊಳಪರನಕೆಉಳ್ಳ ಪೂವ್, ಉಮ್ಮತ್ತಪೂವ್‌ರ ಚಾಮರತಿಂಜಿ ಬೀಜಿಚಿಟ್ಟವವಂದೂ.......ಪಾಡಿ ಪೊಗಳುವ.

ಕೊಡವಡ ಮಂಗಲತ್ ಬೊಳ್‌ತ ಕೊಡೆ ಇಕ್ಕಲೂ ಪುಡಿಪ...ಕೊಳಪೆ–ಪೂವುಲ್ ಕಾವೇರಿತಾಯಿಕ್ ಚಾಮರ ಬೀಜುವ, ಆಟ್‌ನ ಕೊಡವತಿ ಪೊಂಗ ಇಕ್ಕಲೂ ಆಡುವ – ಅದ್‌ನ ಉಮ್ಮತಾಟ್‌ಂದೇ ಇಕ್ಕಲೂ ಎಣ್ಣುವ. ಉಮ್ಮತ್ತ ಪೂವ್ ಕೊಳಪೆ ಪೂವು ಆಯಿತುಂಡ್. ಇಕ್ಕತ ಉಮ್ಮತ್ತಾಟ್‌ಲ್ ಕೊಳಪೆ ಪೂವುರ ಬದ್‌ಲ್‌ಕ್ ತಾಳ ಕೊಟ್ಟಿಯಂಡಾಡುವ. ಪಂಡ್ ಉಮ್ಮತ್ತಾಟ್‌ನ ದೇವನೆಲೆಲ್ ಮಾತ್ರ ಆಡಿಯಂಡಿಂಜಿಯೆ. ಚೂರ್‍ಯನಿಲ್ಲೇಂಗಿ ಚಣ್ಣುರನಿಪ್ಪುಲೆ – ಇವು ದಂಡೂ ಇಲ್ಲೇಂಗಿ ಈ ಭೂಮಿಲ್ ಜೀವಿಯ ಒಂದೂ ಇಪ್ಪಲೆ. ಅನ್ನನ್ನೇ ಕಾವೇರಮ್ಮೆ ಇಲ್ಲೇಂಗಿ ಕೊಡವಡ ವಂಶವೇ ಇಪ್ಪುಲ್ಲೇಂದ್ ಕೊಡವ ನಂಬುವ. "ಕಲ್ಲ್ ಕಾವೇರಿ – ಪಿಲ್ಲ್ ಭೂಮಿ"ಂದೆಣ್ಣುವ ಚೊಲ್ಲುಂಡ್ ಕೊಡವಡಲ್ಲಿ. ಮಂಗಲತ್, ಕ್‌ಣ್ಣಂಗೂ–ಮೂಡಿಕೂ ಚೋಮುರಂಗ್‌ರ ಉಡುಪು! ಕೊಡೆ ಮಾತ್ರ ಕಾವೇರಮ್ಮೆರನೆಕೆ ಬೊಳ್‌ತದ್!

ಪುದಿಯ ಮಂಗಲಾನ ಪುತ್ತಂಗರ್ತಿ–ಪುತ್ತಂಗಾರ ಒರ್ ಕಾಲತ್‌ರೊಳ್‌ಲ್

ತಲಕಾವೇರಿಲ್ ಕುಳಿಚಿತ್ತೇ ಕುಳಿಕೊಂಡು. ವಡಿಯ ಅಲ್ಲೇಂಗಿ ಪೊಣ್ಣ್ ಚತ್ತಕ್ಕಲೂ. ಪೆತ್ತಕಲೂ ಕುಂಞಿನ ಎಡ್‌ತಂಡ್ ಕಾವೇರಿಕ್ ಪೋಯಿತೆ ಪೊಂಡುಂದೆಣ್ಣುವ ನಿರ್‌ಕ್ ನಂಬಿಕೆ ಕೊಡವಡಲ್ಲಿ ಇಕ್ಕಲೂ ಉಂಡ್.

ಪಂಡ್ ವಕ್ಕತ್‌ಲ್ ಪರ್‌ಂಬಡಿ ಬೆಚ್ಚವು – ಅಯಿಂಡ ಸೀಕ್ಷೆ (ಶಿಕ್ಷೆ) ತೀಂದ ಪಿಞ ಕಾವೇರಿಲ್ ಪೋಯಿತ್ ಕುಳಿಚಿತ್ ಬರೊಣೆಂಜತ್.

"Serious offences were punished by the offenders being excommunicated from caste. Such a punishment was usually for a prescribed period, during which the offender was not entitled to stay or dine even in his natal house ...Not only was he prohibited from attending dance or hunt, but he was also prohibited from going into any house in the village. After the prescribed period of punishment was over, the offender had to go on a pilgrimage to Cauvery" [33]

---

32. ಶ್ರೀ ಸ್ಕಂದ ಪುರಾಣಾಂತರ್ಗತ – ಶ್ರೀ ಕಾವೇರಿ ಮಾಹಾತ್ಮ್ಯೆ – ತಲಕಾವೇರಿ ನಾರಾಯಣಾ ಚಾರ್ಯ – ೧೯೪೮

33 Religion & Society among the coorgs of south India. Dr. M.N. Srinivas P-64

# ಕೊಂಬ್ ನಾಲ್

## ಕೊಡವಡ ದೇವಕಾಡ್

ಸೂರಿಯ, ಚಣ್ಣೂರ, ಭೂತಾಯಿ, ತೀರ್ಥತ್‍ನ ತುದಿಪದೂ, ಕುಂಬ್‍ಡುವದೂ ಮಾತ್ರ ಅಲ್ಲ–ಈ ಭೂಮಿಲ್. ಮಳೆ ಪೊಯ್ಯುವಕ್ ಸಾಯ ಮಾಡುವ ಮರಕಾಡ್‍ನೆನ್ನನೆ ಪೋತೊಂಡು, ಪೊಜ್ಜಮಳೆ ನೀರ್‍ನ ಭೂಮಿಲೆನ್ನನೆ ಇಂಗ್‍ಚಿಡೊಂಡೊಂದ್ ಎಣ್ಣುವ ಜ್ಞಾನವೇ ಕೊಡವಡ ದೇವಕಾಡ್. ಬೆಲೆ ಕಟ್ಟುವಕ್ ಸಾಧ್ಯವಾಗದ ಮದ್ದ್–ಮರ–ಬಳ್ಳಿ, ಪ್ರಾಣಿ–ಪಕ್ಷಿಯಳ ಪೋತುವ–ಉಳಿಚಿಡುವ ದೇವಕಾಡ್. ಈ ಸೃಷ್ಠಿನ–ಪ್ರಕೃತಿನ ಕೋಟಿ ಕಾಲಕೆತ್ತಣೆ ಉಳಿತಿ ಪೋತುವಕುಳ್ಳ ದೇವಕಾಡ್.

ಕೊಡವುಲುಳ್ಳ ವಿಶೇಷ ಪಟ್ಟ ಮರ, ಬಳ್ಳಿ ಗಿಡ ಎಲ್ಲಾ ಚೂರಿಯ ಕಿರಣತ್‍ನ ಚಾಯಿಲ್ ಊತಿಯವ ತಾಕತ್ತ್ ಉಳ್ಳದಾಯಿತುಂಡ್ – ಇದ್ ಸಸ್ಯಶಾಸ್ತ್ರಜ್ಞಂಗಡ ಅಭಿಪ್ರಾಯವೂ ಅಕ್ಕು. ಈ ಸಸ್ಯಕೋಟಿ ಗಿಡ, ಮರ, ಬಳ್ಳಿ ನೀರ್‍ನ ಪಿಞ ಇಂಗಾಲಾಮ್ಲ ವಾಯುನ ಪರಿವರ್ತನೆ ಮಾಡಿತ್ತ್ ಎಲ್ಲಾ ಜೀವಿಯಕ್ ಆದಾರ ಆಯಿತುಂಡ್. ಪ್ರಾಣಿ ಪ್ರಪಂಚತ್‍ನ ನರ ಮನುಷ್ಯನೋ ಕೂಟ ಪಣಿಕೂಟುವ ಇಂಗಾಲಾಮ್ಲ ವಾಯುನ ಈ ಸಸ್ಯ ಊತಿಯಂಡ್, ಪ್ರಾಣಿಯಡ ಪ್ರಾಣವಾಯು ಆನ ಆಮ್ಲಜನಕತ್‍ನ ವಾತಾವರಣಕ್ ಬುಡುವ – ಆಮ್ಲಜನಕತ್‍ನ ವಾತಾವರಣತ್‍ಲ್ ಪರಟುವ. ಪಂಡ್ ಕೊಡವ ಪೆರಿಯವು ಕೊಡವುರ ಕೇರಿ, ಕೇರಿಲೂ ನೆಲೆಕೊಂಡಬಂದ ಅಯ್ಯಪ್ಪ,

ಬೋಟೆ ನಾಯಿಂಯಳ ಕೂಟಿಯಂಡ್, ಅಯ್ಯಪ್ಪ ಬೋಟೆಕಾರ ದೇವ ಬೋಟೆಯಾಡುವಂದೆಣ್ಣುವ ನಂಬಿಕೆಲ್ ಅಯ್ಯಪ್ಪ ಕಾಡ್ ಅಲ್ಲೇಂಗಿ ದೇವಕಾಡ್‌ಂದ್ ಸೃಷ್ಟಿಮಾಡಿತ್, ಕಾಡ್‌ನ ಪೋತ್‌ಚಿ. ಕೊಡವುರ ಪ್ರತಿಯೋರ್ ಕೇರಿಲೂ ಅಯ್ಯಪ್ಪ ಕೋಟ, ಅಯ್ಯಪ್ಪ ವನ ಇಕ್ಕಲೂ ಉಳ್ಳದ್ ನಂಗ ಕಾಂಗೋಲು. ಪಂಡ್ ದೇವಕಾಡ್ ಎಣ್ಣಕ ಅದೋರ್ ಪವಿತ್ರಜಾಗ. ಅದೋರ್ ಕೊಡ್‌ಂಗಾಡ್ ಆಯಿತಿಪ್ಪಯಿಂಜತ್. ಆಂಡೊಳ್‌ಕ್ ಪೋಪಕ್ ಎಂತವನೂ ನೆಟ್ಟುವಯಿಂಜತ್. ಪಂಡ್ ದೇವಕಾಡ್ ಎಣ್ಣಕ ಅಲ್ಲಿ ಬೋಟೆಯಾಡುವನೆಕೆ ಇಲ್ಲೆ, ಮರ ಕೆತ್ತುವದಾಡ್, ಕೊಕ್ಕಲೆ ಒಡುವಕುವದಾಡ್ ಮಾಡೊಕಯ್ಯ. ಮರತ್‌ಂಜ ಬುದ್ದ ಕಡ್ಡಿ, ಕಸ, ಪಿಲ್ಲೆ ಕೂಡಿ ಎಡ್‌ತ ಬಪ್ಪಕಯ್ಯಾಂದೆಣ್ಣುವ ನಿರ್‌ಕ್, ನಿಯಮ ಇಂಜತ್. ಈ ನಿರ್‌ಕ್ – ನಂಬಿಕೆಲ್ ವೈಜ್ಞಾನಿಕತೆ ಉಳ್ಳದರ್‌ಂಜಕ ಆಶ್ಚರ್ಯ ಆಪ! ಇನ್ನನೆ ನಿರ್‌ಕ್ – ನಿಯಮ ಉಳ್ಳ ದೇವಕಾಡ್‌ಲ್ ನೆಲಕ್ಕ್ ಬೂವ ಕೊಕ್ಕಲೆ ಒಣಕ್‌ಮರ ಕಡ್ಡಿ, ಪಣ್ಣ್ ಫಲ ಎಲ್ಲಾ ಸೂಕ್ಷ್ಮ ಬ್ಯಾಕ್ಟೀರಿಯಾತ್‌ನುಂಡ್ ಕೀಂಜಿತ್ ಅಲ್ಲಿಯೇ ಗೊಬ್ಬರ ಆಯಿತ್. ಪುನಃ ಗಿಡ ಮರತ್‌ರ ಸೃಷ್ಟಿಕೂ, ಬೊಳಿವ ಮರತ್‌ರ ಬೊಳ್‌ಚೆಕೂ, ಪಚ್ಚೆಕಾಡ್ ಉಳಿವಕ್ಕೂ ಪ್ರಾಣಿ ಪಕ್ಷಿಯಡ ತೀನಿಕೂ ಸಾಯ ಮಾಡ್ವ ಈ ನೈಸರ್ಗಿಕ ವಿದಾನವೇ ಪೊಮ್ಮಾಲೆ ಕೊಡವುಲ್ ಇಂದೂ ನೆಲೆನಿಂದಿತುಳ್ಳ ದೇವಕಾಡ್. ಪೊಮ್ಮಾಲೆ ಕೊಡವುಲ್ ಉಳ್ಳಂತ ದೇವಕಾಡ್ ಪ್ರಪಂಚತ್ ಎಲ್ಲಿಯೂ ಇಲ್ಲೇಂದ್ ಪ್ರೊ॥ ಚೆಪ್ಪುಡಿರ ಕುಶಾಲಪ್ಪ, ಪಾರೆಸ್ಟ್ ಕಾಲೇಜ್, ಅಯೆಂಗ ರೇಡಿಯೋತೊಮ್ಮ ಎಣ್ಣಿಚಿ.

ಈ ತರತ್‌ರ ಕೊಕ್ಕಲೆ ಗೊಬ್ಬರತ್‌ರ ಪದರ, ಭೂಮಿರ ಪದರ ಮಳೆ ನೀರ್‌ನ ಪುಡ್‌ಚಿ ಬೆಚ್ಚಿತ್ ಭೂಮಿಲೇ ಇಂಗುವನಕೆ ಮಾಡುವ. ಕೊಡಿಂಜ ಬುದ್ದ ಮಳೆನೀರ್ ಒಮ್ಮಕೇ ರಭಸತ್ ಒಕ್ಕತನಕೆ ಪುಡ್‌ತತ್ ಬೆಚ್ಚಿತ್ತ್ ತೇವಾಂಶತ್‌ನೆಲ್ಲಾ ಊತಿಯಂಡ್ ಪದ್‌ಕ, – ವಾರಂಡೆಕತ್ತಣೆ ಕುಂಡ್, ಕುಡ್‌ಪುಲ್, ಅಲ್ಲಿಯೇ ಚೆರಿಯ, ಚೆರಿಯ ತೋಡ್‌ರ ಮಾದರಿ ನೀರ್ ಅಲ್ಲಿಯೇ ಇಪ್ಪ. ಇದೆಲ್ಲಾ ಕಾರಣಗೊಂಡ್ ಭೂಮಿರ ಕೊಡಿಲುಳ್ಳ ಪದರತ್‌ರ ಒಳ್ ಬರಿಲ್ ಕಲ್ಲ್‌ರ ಸಿರೆಲೆಲ್ಲಾ ಜಲ–ಅಂತರ್ಜಲ ನಿಪ್ಪ. ಈ ತರ ಜಲ ನಿಪ್ಪಕ್ ವೈಜ್ಞಾನಿಕವಾಯಿತ್ ಜೂನ್ – ಆದರೆ ಕಾತ್ ಮಳೆರ ಆರ್ದ್ರವಾಯುಗುಣ ಕಾರಣ. ಕೊಡವ ಪೆರಿಯವು, ಆರಿದ್ರಾ ಮಳೆ ಸುರುವಾನಲ್ಲಿಂಜ ಮೂಂದ್ ನಾಳ್ ಬಿತ್ತ್‌ಇಡುಲೆ! "ಕಾವೇರಮ್ಮರ ಮಣ್ಣ್‌ಕ್ ಭಾಷೆ ತಂದ ಮಳೆ ಅರಿದ್ರಾ ಮಳೆ", ಅರಿದ್ರಾ ಮಳೆ ಭೂಮಿಕ್ ಪೂಜ್ಜಿತ್ತೇ ಪೊಯ್ಯುವಂದೆಣ್ಣುವ ನಂಬಿಕೆ ಇಕ್ಕಲೂ ಉಂಡ್ ಕೊಡವಡಲ್ಲಿ. ಇದ್ ಇಂದೆಕೂ ಸತ್ಯವೂ ಆಯಂಡುಳ್ಳದ್ ಪೊಮ್ಮಾಲೆ ಕೊಡವುಲುಳ್ಳ ಎಲ್ಲಾರ್‌ಕೂ ಅರ್‌ಂಜ ವಿಷಯವೇ

ಆಯಿತುಂಡ್. "ದೇವರಕಾಡುಗಳು ನೀರಿನ ಮೂಲಗಳಾದ ಹೊಳೆ ಮತ್ತು ಜರಿಗಳನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸುತ್ತಮುತ್ತಲಿನ ಪ್ರದೇಶಕ್ಕೆ, ಸಮಕಾಲಿನ ನೀರು ಸಿಗುವಂತೆ ಮಾಡುವಲ್ಲಿ ಸಹಾಯಕವಾಗಿದೆ" 34

ದೇವಕಾಡ್ ಮಾತ್ರ ಅಲ್ಲ ಕೊಡವಡ ಮನೆರ ಪಕ್ಕ, ಬೇಲ್ ಕರೆಲ್ ಮರ, ಗಿಡ ಬಳ್ಳಿ ದುಂಬಿತ್ ಕಾವೇರಿಮಾತೆ ಪಚ್ಚೆ ಪಟ್ಟ್ ಪೊಡಿಯ ಉಡ್‌ತನಕೆ ಇಪ್ಪ. ಇಂದೆಕೂ ಇದ್ ಕಣ್ಣ್‌ಗೊಂಡ್ ಕಾಂಬಳ ಸತ್ಯ.

ರೆವರೆಂಡ್ ಜಿ ರಿಕ್ಟರ್ ಎಣ್ಣುವ ಇಂಗ್ಲೀಷ್ ವಿದ್ವಾಂಸ ಕೊಡವಡ ಐನ್‌ಮನೆರ ನೆಲೆನ ಇನ್ನನೆ ಎಣ್ಣುವ.

"As we approach the coorg houses, we come upon groves of orange, lime, Guava, Rose apple, Pomegranate, and clumps of plantain trees, all of which thrive remarkably well. The Bastard sago is much esteemed for its toddy and the Areca palm occasionally keeps its company, and their foliage blended with the dense crown of the stately mango or Jack tree, forms a beautiful back ground to the large paddy flats below." 35

ಬೋಟೆ ಅಯ್ಯಪ್ಪಂಡ ದೇವಕಾಡ್‌ಂದೆಣ್ಣಿತ್, ಮದ್ದ್-ಮರ ಉಳಿಚಿಟ್ಟದಲ್ಲತೆ ನೆಲ್ಲ್ ಬೊಳೆಕಾರಂಡ ಕೂಟ್‌ಕಾರ ಪಾಂಬುನೋ, ನೆಲ್ಲ್‌ಬೊಳೆನ ನಾಶಮಾಡುವ ಎಲಿನ ತಿಂಬ ಪಾಂಬುನ ಉಳಿಚಿಡುವ ಪೆರ್ಮೆ ಕೊಡವ ಪೆರಿಯಯಿಂಗಡಲ್ಲಿ ಕಾಂಗೊಲು. ಪೊನ್ನ್ ಚಂಗ್‌ರೊಳ್‌ಂಜ ಏಳ್ ಮಂಡೆರ ಪಾಂಬುವೂ, ಬೊಳ್ಳಿ ಚಂಗ್‌ರೊಳ್‌ಂಜ ಬೊಳ್ಳಿ ಬಿಲ್ಲ್ ಅಯ್ಯಪ್ಪನೂ-ಏಳ್ ಕೆನ್ನ್ಯಾಯಿಯ ಪೊಮ್ಮಾಯತ್ ಪಾಕಡತ್ ಪುಟ್ಟ್‌ಚೀಂಟ್ ಪಳಮೆಲ್ ಪಾಡುವ. ಏಳುಳ್ಳ ಕೆನ್ನಾಯಿಯಡತ್ ಮೂತ ನಾಯಿ ಬೊಳ್ಳುರ ಅಹಂಕಾರಕ್ ಪಾಂಬು ಕಡಿಚಿ ಕೊಂದ ಬೊಳ್ಳು ನಾಯಿನ ದಹನ ಮಾಡಿತ್ ಬಾಕಿ ಆರ್‌ನಾಯಿಯಳ ಕೂಟಿಯಂಡ್ ಅಯ್ಯಪ್ಪ, ನೆಲೆ ತೇಡಿಯಂಡ್ ಪೊರಡುವ. ಆರ್ ನಾಯಿಯಳ ಕೂಟಿಯಂಡ್ ನೆಲೆ ತೇಡಿಯಂಡ್ ಪೊರಟ ಬೊಳ್ಳಿಬಿಲ್ಲ್ ಅಯ್ಯಪ್ಪ, ಮಹಾಭಾರತತ್ ಬಪ್ಪ ಉಪಕಥೆರ ಕಾಮ್ಯಕ ವನತ್ ಬೋಟೆಕಾರನಾಯಿತ್ ಬೋಡ್ ಕಳಿ ಇಟ್ಟಂಡ್ (ವೇಷ ಮಾತಿಯಂಡ್) ಅರ್ಜುನಂಡ ಕೂಡ ಯುದ್ಧ ಮಾಡ್‌ನ ಸಾಕ್ಷಾತ್ ಶಿವಾಂದ್ ಕೊಡವಡಲ್ಲಿ ನಂಬಿಕೆ ಉಂಡ್. ಆದ್ಯ ಬೈತೂರಪ್ಪಂಡಲ್ಲಿ ನೆಲೆ

34 ಭಾರತದ ಗ್ಯಾಸೆಟೀಯರ್ ಕರ್ನಾಟಕ ರಾಜ್ಯ

35 **Gazzetetters of Coorg – G. Richter (Year 1870) P.N.21**

ಕೇಪಕ, ಬೈತೂರಪ್ಪ ಪೊಮ್ಮಾಲೆ ಕೊಡವುಲ್ ಪೆರುವಾಳು-ಸಾರ್ತಾವುರಲ್ಲಿ ನೆಲೆ ಕೇಪಕ್ ಎಣ್ಣುವ. ಪೆಗ್ಗಳತ್ ಕಂಡಿಲ್ ಪೆರುವಾಳು ಸಾರ್ತಾವುರಲ್ಲಿ ನೆಲೆ ಕ್‌ಟ್ಟನಪಿಂಞ, ಪೆಗ್ಗಳತ್ ಸಾರ್ತಾವುರ ಪಕ್ಕ ಬಂದಿತ್. ಅಲ್ಲಿಯೂ ನೆಲೆ ಕೇಟಿತ್, ನೆಲೆ ಕ್‌ಟ್ಟಿತಾನದು, ಚೋಮಗಿರಿ ಮೋಳ್‌ಲ್, ತುಂಬೆ ಮಲೆ ದೇವಂಡ, ಕ್‌ಗ್ಗಾಲ್ ನಡೆಲೂ ನೆಲೆ ಕೊಂಡ ಬಂದಿತ್ತ್ ಇಗ್ಗುತ್ತಪ್ಪಂಡಲ್ಲಿ ಪೋಯಿ ನೆಲೆ ಕೇಕಣೆ ಇಗ್ಗುತಪ್ಪ ಇನ್ನನೆ ಎಣ್ಣುವ

ಕೇಳೂ ಕೇಳೂ ಅಯ್ಯಪ್ಪ
ಉದ್ದಕೊಡೆ ತಾವುಲ್
ಕಾವೇರಿಯಮ್ಮ ಮಾತಾಯಿ
ನೀರಾಯಿ ಪರಿಯವ
ಅಲ್ಲಿ ಪೋಯಿ ಬೋಡಿನೊ
ನಿಪ್ಪಕ್ ನೆಲೆತಕ್ಕು
ಎಂದೆಣ್ಣಿ ಪರಿಯಣೆ
ಚಂದೋಳ ಪೆರ್‌ಜಾಯಿ
ಆರುಳ್ಳ ಕಡಿನಾಯ
ಕೂಟಿಂಗೊಡ್ ಪೋಯಿತ್
ಕಾವೇರಮ್ಮೆ ದೇವಿಯೋ
ಪುಟ್ಟ್‌ನ ಸ್ಥಳವಾಪ
ಸೀತಕೊಳನಲ್ಲಾಲ್
ಮುಂಜೆತ್ ಕುಳಿಚತ್
ಮುಂಜೆತ್ ಕುಳಿಚಿತ್
ಅಲ್ಲಿಂಜ ಪೊರಟಿತ್
ಅಲ್ಲಿಂಜ ಪೊರಟಿತ್
ಕಾವೇರಿ ಕನಕೆಯೂ
ದೇವ ಕನ್ನಿ ಸುಜ್ಯೋತಿ
ಸಂಗಮಾನ ಕುಂಡ್‌ಲ್
ಮುಂಜೆತ್ ಕುಳ್‌ಚಿತ್
ಅಲ್ಲಿಂಜ ಪೊರಟಿತ್
ಹರಿಶ್ಚಂದ್ರ ಕೆತ್ತಿತ್

ಮುಂಜತ್ ಕುಳ್‌ಚಿತ್
ಅಲ್ಲಿಂಜ ಪೊರಟಿತ್
ಚೆಂಡೋಲೆ ಕಡಿಯೊಂಡ
ಬಟ್ಟೊತ್ತ ಬಲಂಬೇರಿ
ಅಲ್ಲಿ ಬಂದ್ ನಿಂದಿತ್ತ್
ಮುಂಜೆತ್ ಕುಳ್‌ಚಿತ್
ಅಲ್ಲಿಂಜ ಪೊರಟಿತ್
ಅಮ್ಮಂಜುತ್ತಿನಾಡೋಂಡ
ಬೊಳ್ಳಿಕೊಂಬ್ ಕುಯ್ಯತ್
ಅಲ್ಲಿಪೋಯಿ ನಿಂದಿತ್
ಮುಂಜೆತ್ ಕುಳ್‌ಚಿತ್ತ್
ಕುಯ್ಯತ್ ತಿರಿಕೇಲ್
ನಿಪ್ಪಕ್ ನೆಲೆಯಾಂಡು
ಎಂದೆಣ್ಣಿತ್ ಬೋಡ್‌ಣೆ
ಕಾವೇರಮ್ಮೆ ಮಾತಾಯಿ
ಈ ಬಾಕ್ ಪರ್‌ಂದತ್ತ್
ಕೇಳೋ ಕೇಳೋ ಅಯ್ಯಪ್ಪ
ಪೊಮ್ಮಾಲೆ ಕೊಡವುಲ್
ನುಪ್ಪತ್ತಂಜಿ ನಾಡ್‌ನ
ದೇಬುವ ಪುಡಿಚತ್
ಶಂಬು ಶಿವ ದೇವಂಡ
ಮೊಮ್ಮಾಯ ತವತಾರ
ನಾಡೆಲ್ಲಾ ಪುಡಿಚತ್
ಪಾರ್ವತಮ್ಮೆ ದೇವಿರ
ಮೊಮ್ಮಾಯತವತಾರ
ಊರೆಲ್ಲಾ ಪುಡಿಚತ್...
ನೀನೂ ಎಡವತಾರ
ಆನಂಗುಂಡ್ ಅಯ್ಯಪ್ಪ
ಕೇರಿಯಣ್ಣ ನಿಂದೊಳೊ..... [36]

ಇಲ್ಲಿ ಬಿಲ್ಲ್‌ಕಾರ ಅಯ್ಯಪ್ಪನ ಕೂಟ ಏಳ್ (6 ಕೆನ್ನಾಯಿಯ+ಓರ್ ಅಯ್ಯಪ್ಪ =7) ಆಳ್‌ಕುಳ್ಳ ನೆಲೆ. ಇಲ್ಲಿಯೂ ಸಂಖ್ಯೆ ಏಳಂಗ್ ಕೊಡವ ಮಹತ್ವಕೊಡ್‌ತದ್ ಕಾಂಗೊಲು. ಮಲಬಾರ್‌ಂಜ ಬಂದ ಕೊಡವಡ ದೇವ ಏಳ್. ಏಳ್ ಸಂಖ್ಯೆಕ್ ಮಹತ್ವ ಕೊಡಿತೀಯೆಂದೆಣ್ಣಕ, ಅದ್ ಏಳ್ ಪ್ರಭಾವವುಳ್ಳ ಗ್ರಹಕ್ ಸಂಮಂದ ಪಟ್ಟಿದಾಂಯಿತುಂಡ್‌ೕಂದ್ ನಂಗ ಎಡ್‌ತವಲು. ಬೋಟೆಕಾರ ಅಯ್ಯಪ್ಪ ಅವಂಡ ಕೂಟ್‌ಕ್ 6 ನಾಯಿಯಳೂ ಕೊಡವುರ ಎಲ್ಲಾ ಕೇರಿಲೂ ನೆಲೆಕೊಂಡಬಂದದೇ – ಈ ಸೃಷ್ಟಿನ ಉಳಿಚಿಟ್ಟಿತ್ತ್ ಬೊಳತುವ – ಪವಿತ್ರ ದೇವಕಾಡ್. ಇಂದೂ ಇದ್ ಎಲ್ಲಾಡ ಕ್‌ಣ್ಣ್‌ಗೊಂಡ್ ಕಾಂಬಳ ಸತ್ಯ.

ಇಂಞೋರ್ ಪ್ರಶ್ನೆ ನಂಗಡ ಮನಸ್ಸ್‌ಕ್ ಬಪ್ಪದ್ ಕೊಡವ, ಸಾರ್ತಾವೂ ಅಯ್ಯಪ್ಪನೂ ಒಂದೇಂದ್ ತಕ್ಕ್ ಪರಿವದ್ ಎಲ್ಲಾರ್‌ಕೂ ಅರ್‌ಂಜ ವಿಷಯ. ಆಚೇಂಗಿ ಇಲ್ಲಿ ಅಯ್ಯಪ್ಪಂಗೂ ಕೂಡೆಉಳ್ಳ ಆರ್ ಕನ್ನಾಯಿಯಕೂ ನೆಲೆ ಕ್‌ಟ್ಟೊಂಡುವೇಂಗಿ ಅಯ್ಯಪ್ಪ ಸಾರ್ತಾವೂರಲ್ಲಿ ಅಪ್ಪಣೆ ಕೇಪ!! ಇದೋರ್ ಯಕ್ಷ ಪ್ರಶ್ನೆಯಾನಕಲೂ ಉತ್ತರ ಉಂಡ್! ಶಬರಿ ಮಲೆ ಅಯ್ಯಪ್ಪಂಡ ನಕ್ಷತ್ರ ಉತ್ತರ ಪಲ್ಗುಣಿ ನಕ್ಷತ್ರ. ಶಬರಿಮಲೆಲ್ ಕೋಟಿ, ಕೋಟಿ ಭಕ್ತಂಗಡ ಕಣ್ಣ್‌ಕ್ (ಮಕರ ಸಂಕ್ರಾಂತಿ) ಮಲ್ಯಾರ್ ಚಂಗ್ರಾಂದಿಯಂದ್ ಕಾಂಬ ನಕ್ಷತ್ರ "ಉತ್ತರ ಪಲ್ಗುಣಿ". ಈ ನಕ್ಷತ್ರ ಬಾಕಿ ಎಲ್ಲಾ ನಕ್ಷತ್ರಕಿಂಜ ದುಂಬಾ ಥಳಥಳನೆ ಮಿನ್ನುವಳ ನಕ್ಷತ್ರ. ಈ ನಕ್ಷತ್ರ ವೈಜ್ಞಾನಿಕವಾಯಿತ್ ಮೃಗಶಿರಾ– ಬೋಟೆಕಾರಂಡ, ನಕ್ಷತ್ರ ಪುಂಜಕ್ ಕೂಡ್‌ನ ನಕ್ಷತ್ರ ಆಯಿತುಂಡ್. ಉತ್ತರ ಪಲ್ಗುಣಿ, ಮೃಗಶಿರಾ ನಕ್ಷತ್ರ ಓರೇ ವಕ್ಕ (ಪುಂಜ)ಕ್ ಕೂಡ್‌ನವು ಆನಪಿಂಞ ಸಾರ್ತಾವೂ, ಬೋಟೆಕಾರ ಅಯ್ಯಪ್ಪನೂ ಒರೇ ವಕ್ಕಕಾರ ಆಚಲ್ಲಾ!!. ಒಂದೇ ಆಚಲ್ಲಾ !! ದೇವಳ ನಂಬುವೋ... ನಂಬುಲಿಯೋ...ಆಚೆಂಗಿ ನಂಗಡ ಪೆರಿಯಯಿಂಡ ಗಣಿತ ಸೂತ್ರತ್‌ನ ಗ್ಯಾನಮಾಡಿಚೆಂಗಿಯೇ ವಿಜ್ಞಾನಿಯಳೂ ಚೋತ್‌ಪೋಕು! ಮಾಭಾರತತ್‌ರ ಕಾಮ್ಯಕ ವನ ಇಕ್ಕತ್‌ರ ಬೈತೂರ್. ಬೋಟೆಕಾರನಾಯಿತ್ ವೇಷ ಮಾತಿಯಂಡ್ ಬೋಡ್ ಕಳ್‌ಚಾಂಗ್ ಕೊಡವ, ಶಿವನ ಬಿಲ್ಲ್‌ಕಾರ ಅಯ್ಯಪ್ಪಂದೆಣ್ಣುವ.

ಕುಳಿಯಂಡ ಸ್ಥಾನವೂ ಪಾಲ್‌ಬಪ್ಪ ಚೆಕ್ಕೆ ಮರತ್‌ರಡಿಲ್. ಆ ಮರತ್‌ನ ಕೆತ್ತುವನೆಕೆ ಇಲ್ಲೆ. ಇದ್ ನಂಬಿಕೆರ ಕೂಟ್‌ಕ್ ಪ್ರಕೃತಿನ ಉಳಿಚಡುವ ಓರ್ ಚಮತ್ಕಾರಂದೂ ಎಣ್ಣೊಲುವಲ್ಲಾ! ಪಂಡ್ ಕಾರಣಂಡ (ಕೈಮಡ) ಸ್ಥಾನವೂ ಪಾಲ್ ಬಪ್ಪ ಮರತ್‌ರಡಿಲಿಂಜತ್‌ೕಂದ್ ಎಣ್ಣುವ.

---

36 ಪಟ್ಟೋಲೆ ಪಳಮೆ – ನಡಿಕೇರಿಯಂಡ ಚಿಣ್ಣಪ್ಪ.

ಓಣಿಲೋರ್ ನಾತ (ಪಾಂಬು) ನೆಲೆಕೊಂಡ ಬಂದ ಕಥೆನೋ ಕೊಡವ ಪಳಮೆಲ್ ತಾಳತಪ್ಪತೆ ರಸತ್ತ್ ಪಾಡುವ. ಏಳ್ ತಲೆ ನಾಗಣ್ಣ, ಪೊನ್ನ್ ಚಂಗ್‌ರೊಳ್ಂಜ ಪಾಕಡತ್ ಪುಟ್ಟ್‌ಚೀಂದ್ ಪಾಡುವ. ಅನ್ನನ್ನೇ ಪಾಡಿಯಂಡ್ ಕಲ್ಲಕೇರಿ ಅಪ್ಪಯ್ಯಂಡ ತಂಗೆ ಕಲ್ಲಕೇರಿ ದೇವಿನ ಮಂಗಲಾಕೊಂಡೂಂದೆಣ್ಣಿತ್ – ನಾರಾಯಣದೇವ ವೈಕುಂಠತಿಂಜ ಬಾತ್‌ಂದೂ, ಏಳ್‌ತಲೆ ನಾಗಣ್ಣ ಕಲ್ಲಕೇರೆ ದೇವಿಕ್ ಮಾಣಿಕ್ಯ ವೈರ ಕಲ್ಲ್, ಕೊಡ್‌ತತ್‌ೇಂದೂ ಅಣ್ಣಂಡ ಪೊಣ್ಣ್, ಕಲ್ಲಕೇರಿ ದೇವಿನ ಚದಿಚಕಲೂ ಪರ ಇಂಜನಗೊಂಡ್. ಚತ್ತ್‌ಲೇಂದೂ, ಕಾಟಾಳಂಡ ಮಕ್ಕಡ ಚೆಂಬುದುಡಿಯಾಯಿತ್– ಚೆಂಬು ದುಡಿ ರೂಪತ್ತ್ ಪುನಃ ಅಣ್ಣಂಡ ಪಕ್ಕ ಬಂದಿತ್ತ್ – ನಾರಾಯಣ ದೇವನ ಮಂಗಲಾಚೀಂದ್ ಕೊಡವ ಪಳಮೆಲ್ ಪಾಡುವ.

ಬೋಟಿಕಾರ ಅಯ್ಯಪ್ಪ ನೆಲೆ ನಿಪ್ಪಕಲೂ, ನಾತ ನೆಲೆ ಕೊಂಡಾಪಕಲೂ ಕಾವೇರಮ್ಮೆರ ಅಪ್ಪಣೆ ಇಲ್ಲತೆ ನೆಲೆ ಇಪ್ಪಕ್ ಆಪುಲೇಂದ್ ಕೊಡವ ಪಳಮೆಲ್ ಪಾಡುವ. ಕಾವೇರಮ್ಮೆಯೇ ಎಲ್ಲಾರ್‌ಕೂ ಪೆರಿಯವ – ಅವಡ ಅಪ್ಪಣೆ ಉಂಡೇಂಗಿ ಮಾತ್ರ ಇಲ್ಲಿ ನೆಲೆ ನಿಪ್ಪಕ್ ಸಾದ್ಯಂದ್ ಎಣ್ಣುವ ಅರ್ಥ ಈ "ಪಳಮೆ"ರ (Oral Heritage) ಸಾಲ್‌ಲ್ ನಂಗ ಕಾಂಗೊಲು. 'ಪಳಮೆ'ಲ್ ನಾತ, ನಾಕ್ ನೆಲೆ ತಾತೆಂಗಿ "ಮನ್‌ಸಂಗಕೂ ಅತ್ತ ಕಡ್‌ಚಿಯಕೂ ಪಾಂಬು ತೇಳ್ ತ್‌ೇಂಡುಲೆಂದುಣ್ಣುವ" ಕಾವೇರಮ್ಮೆರ ಮೊಮ್ಮಾಯವೋ ಎನ್ನೋ.... ಈ ಕಾವೇರಮ್ಮೆರ ಮಣ್ಣ್‌ಲ್ ಪಾಂಬ್, ಆಕಾಸ್ಮಾತ್ತಾಯಿತ್ ಮನಸಂಗ ಚವುಟಿ ಪೋಚೆಂಗಿ ಕಡಿಚಿರುವದಲ್ಲತೆ, ಪಾಂಬ್ ಕಡಿಪದ್ ದುಂಬಾ ಕಮ್ಮಿ. ಅತ್ತ ಕಡಚಿಯಂತೂ, ಕುಂದ್ ಕಾಡ್‌ಲೇ ಮೆಂಜಂಡಿಪ್ಪ. ನಾನಂತೂ ಅತ್ತಕಡ್‌ಚಿಯಕ್ ಪಾಂಬ್ ಕಡ್‌ಚದ್ ಕೇಟಿತ್ತೇ ಇಲ್ಲೆ. ನರಿ–ಕ್‌ರ್‌ಕನರಿ ಅತ್ತಳ ಪುಡಿಪ, ಆಚೆಂಗಿ ಪಾಂಬುಕಡಿಪದಿಲ್ಲೆ!. ಇದ್ ನೋಟೋಕ ಕೊಡವಡ ಪಳಮೆರ ಸಾಲ್ ಸತ್ಯಾಂದೂ ತೋಂದುವ ! ಇನ್ನನೆ ಕೊಡವಡ ಪ್ರತಿಯೋರ್ ವಕ್ಕತೂ, ಎಲ್ಲಾ ಐನ್‌ಮನೆರ ಓಣಿಲೂ ನಾತಂಡ ನೆಲೆ ಉಂಡ್.

"..... Cobra – deities are represented by unhewn stones and fixed in platforms built round the trunks of milk exuding trees. The vegetation growing near a Cobra-platform is considered sacred, and it is not permitted to cut it down.[37]

ಕೊಡವಡ ಐನ್‌ಮನೆರ ಎದಿಕೆ ಬೇಲ್ ಇಪ್ಪ. ಮನೆಕ್ ಬಪ್ಪ ಓಣಿಲೇ ನಾತಂಡ ನೆಲೆ ಇಪ್ಪ. ನಾತಂಡ ನೆಲೆ ಪಾಲ್ ಬಪ್ಪ ಮರತ್‌ರಡಿ/ಪಲ್‌ಚಿ ಮರತ್‌ರಡಿಲ್. ನಾತ ಇಪ್ಪ ಜಾಗ ಪವಿತ್ರವಾನದ್ – ಪೊಣ್ಣಾಳ್‌ರ ಪೊಲೆ–ತಲೆ

ಅಲ್ಲಿಕ್ ತಟ್ಟುವಕಾಗ–ಎಣ್ಣುವ ನಿರ್‌ಕೂ ಉಂಡ್. ಪಾಂಬುನ/ನಾತನ ಕೊಂದಯಿಂಗಕ್ ಪಾಂಡ್ ಪೋಪ ಕಾಯಿಲೆ ಬಪ್ಪಾಂದ್ ಎಣ್ಣುವ ನಂಬಿಕೆ ಉಂಡ್ ಕೊಡವಡಲ್ಲಿ. ರೈತಂಗಕ್ ಉಪಕಾರ ಮಾಡುವ ಪಾಂಬುನ ಉಳಿಚಿಡುವ ವೈಜ್ಞಾನಿಕತೆ ನಂಗ ಇಲ್ಲಿ ಕಾಂಗೊಲು.

"During the month of scorpio (November-December) a lamp is lighted every evening to the Natha, and coconuts are offered as oblations..."[38]

ಬಿಚ್ಯಾರ್ ತಿಂಗತ್ ನಾತಂಡ ಸ್ಥಾನಕ್ ಅಂದಿ–ಮುಂದಿ ನೇರತ್ ಬೊಳ್‌ಚ ಕತ್ತ್‌ಚಿಡುವ ಪದ್ದತಿ ಇಕ್ಕಲೂ ಕೊಡವಡಲ್ಲಿ ಉಂಡ್. ಬಿಚ್ಯಾರ್ ತಿಂಗತೇ ನಾತಂಗ್ ಬೊಳ್‌ಚ ಬೆಪ್ಪ ಎನ್ನಂಗ್? ಎಣ್ಣುವ ಪ್ರಶ್ನೆಕ್ ಎಲ್ಲಾರಕೂ ಅರ್‌ಂಜ ಅಬಿಜಿತ್‌ಂದೆಣ್ಣುವ ಬಲ್ಯೆ ನಕ್ಷತ್ರ ಪುಂಜತ್ ನಂಗಡ ಸೌರಮಂಡಲತ್‌ರ ಪದಿಮೂಂದನೇ ರಾಶಿಕ್ ಚೂರಿಯಂಡ ಪಥ ಇದೇ ಸಮಯತ್ ಬಿಚ್ಯಾರ್‌ಲ್ ವೈಜ್ಞಾನಿಕವಾಯಿತೂ ಬದಲಾಪ. ಇದ್ ಓರೇ, ಓರ್ ನಕ್ಷತ್ರ ಪುಂಜ ಮಾಲವಂಡ ಚಿತ್ತ್‌ರತ್‌ರ ಮಾದರಿ ಉಳ್ಳೂ. ಬಲ್ಯ ಪಾಂಬು ಮಾಲವಂಡ ಕೈ ಪುಡ್‌ತತ್ತ್ ಉಳ್ಳನೆಕೆ ಕಾಂಬ ಚಿತ್ತ್‌ರ ಉಳ್ಳ ನಕ್ಷತ್ರ ಪುಂಜ!.

Ophiuchus-ಎಣ್ಣುವದ್ ಗ್ರೀಕ್ ಶಬ್ದ–ಇದ್‌ಂಡ ಅರ್ಥ-serpent-bearer ಇದೆಲ್ಲಾ ನೋಟ್ಟಕ ಕೊಡವಡ ಪ್ರತಿಯೋರ್ ನಂಬಿಕೆ – ಸಂಸ್ಕೃತಿ, ಚೂರಿಯ ಪಥತ್‌ರ ಅದಾರತ್‌ಲ್ ಉಂಡ್‌ಂದ್ ನಂಗಕಿಲ್ಲಿ ಅರ್ಥ ಆಪ.

ಈ ಸೌರಮಂಡಲ–ಚೂರಿಯ, ಚಣ್ಣೂರ, ಭೂಮಿ, ತೀರ್ಥ, ಮರ–ಕಾಡ್, ಪಾಂಬ್...ಇನ್ನನೆ ಪ್ರಕೃತಿರ ಪ್ರತಿಯೋರ್ ಅಂಶತೂ ದೇವಳ ಕಾಂಬ ಕೊಡವಡ ನಂಬಿಕೆ ಈ ಸೃಷ್ಠಿರ ಉಳಿಚೆ–ಬೊಳ್‌ಚೆಕೂ ಸಾಯ ಮಾಡುವಾಂದೂ ಈ ಎಲ್ಲಾ ನಂಬಿಕೆ ಸಂಸ್ಕೃತಿಲ್, ವೈಜ್ಞಾನಿಕತೆ ಉಂಡ್‌ಂದ್ ಎಣ್ಣೊಲು.

---

37 Dr. M.N, Srinivas Religion & society among the Coorgs of South India P.No. 77,78

38 G.Richter – Gazzatter of Coorg 1870 P.N. 167

# ಕೊಂಬ್ ಅಂಜಿ

# ಕೊಡವ ಪುಟ್ಟ್‌ನಲ್ಲಿ

ನಲ್ಲೋರಾಚೆ ನಾಳಾಯಿ
ಅಯ್ಯಪ್ಪ ಚನಿಯಾಚೆ
ಸೂರಿಯಂಡುದಯಕ್
ಪೊನ್ನ್ ಚಂಗೊಡಂದತ್!
ಅಣ?ಪೊಣ್ಣ? ನೋಟಣೆ
ಮಾಣಿಕ್ಯ ಪರಂಬೋಲೆ
ತಿತ್ತ್‌ಡ ತೆಡಿಪೋಲೆ
ಅಣಾಯಿ ಪರಂದತ್
ಬೀರಿಯ ಪರಕಣೆ
ದೇವ್ವಯ್ಯ ಬಯಿಂಬನ್
ಚಂದೋಳ ಪೆರ್‌ಜಾಯಿ
ನೆಯಿತೋಕ್ ಕಯಿಕೊಂಡ್
ತಿತ್ತ್‌ಬೊಡಿ ಬೆಚ್ಚತ್
ಈನಗುಂಡ್ ಪೋರಾಂದ್

ಬೀರಿಯತ್ ಕುಂಞಿರ
ಕೆಂದಾವರೆ ಕೈಯಿಕ್
ಅಂಬ್ ಬಿಲ್ಲ್‌ಡ್‌ಟ್ಟತ್...... [39]

ಈ "ಪಳಮೆ" ರ ಸಾಲ್‌ಲ್, ಕುಂಞಿ ಪುಟ್ಟ್‌ನ ನಾಳ್‌ನ ಸತ ದೇವ ಪುಟ್ಟ್‌ನ ನಾಳ್, ಅಯ್ಯಪ್ಪ ಪುಟ್ಟ್‌ನ ನಾಳ್‌ಂದೆಣ್ಣಿಯಂಡ್ – ಚೂರಿಯನ ನೆನತಿಯಂಡ್, ಪೊಣ್ಣಾಳ್‌ಡ ಗರ್ಭಗೋಶತ್‌ನ ಪೊನ್ನ್‌ರಚಂಗ್‌ಂದೆಣ್ಣಿಯಂಡ್ ಪಾಡ್ವದ್ ಕಾಂಗೊಲು. ಮಾಣಿಕಪರತ್‌ರಚ್ಚಕ್ ಗಟ್ಟಿಯಾಯಿತ್, ಮಾಣಿಕಪರ ಮಿನ್ನುವನೆಕೆ–ತಿತ್ತ್‌ರ ತೆಡಿರಚ್ಚಕ್ ಚುರುಕ್ ಆಯಿತ್ ಉಳ್ಳ ಆಣ್ ಕುಂಞಿ ಪುಟ್ಟ್‌ಚಿಂದೆಣ್ಣುವ. ಆಣ್ ಕುಂಞಿ ಪುಟ್ಟಿಚಿಂದೆಣ್ಣಿಯಂಡ್ ಆ ಬೀರಿಯ, ಆ ಕೇಳಿ ಊರೆಲ್ಲಾ ಅರಿಚಿಡುವಕ್ ಆದ್ಯ ಕುಂಞಿರಪ್ಪ ಬೊಡಿ ಬೆಪ್ಪ, ಬೊಡಿಬೆಚ್ಚದ್ ಪೋರಾಂದ್ ಅವಣೆಕೆಣ್ಣೆ ಗಿಡತ್‌ರ ಕಡ್ಡಿಲ್ ಚೆರಿಯ ಬಿಲ್ಲ್ ಮಾಡಿತ್ತ್ ಆಂಡೇ ತೊಪ್ಪುರ ಓರ್ ಕೊತ್ತ್‌ಲ್ ಅಂಬ್ ಮಾಡಿತ್ತ್ ಪುಟ್ಟ್‌ನ ಆಣ್ ಕುಂಞಿರ ಕೈಲ್ ಬೆಪ್ಪ. "ಕೆಂದಾವರೆ ಕೈಕ್ ಅಂಬ್‌ಬಿಲ್ಲ್"ಂದೆಣ್ಣುವ ಸ್ವರಮೇಳತ್, ಪುಟ್ಟ್‌ನ ಕುಂಞಿರ ಚೆರಿಯ ಕೈನ ಕೆಂದಾವರೆ–ಚೋಂದ ರಂಗ್‌ರ ತಾವರೆ ಪೂವುಂದ್ ಎಣ್ಣದ್ ವಿಸ್ತಾರವಾನ ಅರ್ಥ ಉಳ್ಳದ್. ತಾವರೆ ಪೂವು ಕೆತ್ತೆಲ್ಲೇ ಪುಟ್ಟ್‌ನಕಲೂ ಕೆತ್ತೆ ಅಲ್ಲೇಂಗಿ ಬಂಡ್‌ನ ತಾಂಡ ಮೇಲ್‌ಕ್ ಚೂರೂ ಪತ್ತ್‌ಚಿಟ್ಟವತೆ, ಇಪ್ಪದ್ ನಂಗೆಲ್ಲಾರ್‌ಕೂ ಅರ್‌ಂಜ ವಿಷಯ. ಈ ಭೂಮಿಲ್ ಅಸತ್ಯ–ಅಧರ್ಮ ಎಣ್ಣುವಳ ಕೆತ್ತೆನ ತಾವರೆ ಪೂರನಕೆ ಉಳ್ಳ ಕೈಕ್ ಪತ್ತಿಚಿಟ್ಟವತೆ, ಸತ್ಯ–ಧರ್ಮತ್‌ನ ಈ ಭೂಮಿಲ್ ನೆಲೆ ನಿಪ್ಪಿಚಿಡ್ ಕ್ಷತ್ರಿಯನೇ... ಶೂರನೇ....ವೀರ ಪರಂಪರೆ ಉಳ್ಳ ಕೊಡವನೇ.....ಂದೆಣ್ಣುವ ಅರ್ಥ ಉಂಡ್ ಇಲ್ಲಿ .

ಕೊಡವ ತಂಗಡ ಕುಂಞಿಯಡ ಪೊಕ್ಕ್ ಬಳ್ಳಿನ ಬೇಲ್‌ಲ್ ಯಾಕ, ಬಲ್ಯೆತೆಂವ, ಮಂದ್‌ಲ್ ಪೂಪದ್ ಪಂಡೇತ ಪದ್ಧತಿ.

ಕೊಡವತಿ, ಮೂಡಿ ಕುಂಞಿ ಪೆತ್ತಕ, ಕಚ್ಚಿ ತಳಿಯ ಬಡಿಪ, ಅಮೃತ ಸಮಾನವಾನಕೂಳ್‌ನ ಬಳ್‌ಂಬುವ ಕೈಯುಳ್ಳ ಪೊಣ್ಣ್ ಕುಂಞಿ ಪುಟ್ಟ್‌ನಕ, ಕೊಡವ ಉಂಬ ಕಚ್ಚಿತಳಿಯತ್ತ್‌ನೇ ಬಡಿಚಿತ್ ಕುಂಞಿ ಪುಟ್ಟ್‌ನನ ಊರ್–ನಾಡ್‌ಕ್ ಅರಿಚಿಡುವ.

---

39 ಪಟ್ಟೋಲೆ ಪಳಮೆ – ನಡಿಕೇರಿಯಂಡ ಚಿಣ್ಣಪ್ಪ

ಪೆತ್ತ ಕುಂಞಿಯಳ ಕುಳಿಪಿಚಿಟ್ಟಿತ್ತ್ ಆನನ್ನಕೇ ಬೆಲ್ಲ, ತ್ಯೇನ್, ನೆಯ್ಯಿ ನಲ್ಲಮಳು ಮಿಶ್ರಮಾಡಿತ್ತ್ "ಬೆಲ್ಲ ಅಲಿವನಕೆ ಅಲಿ, ನೆಯ್ಯಿ ಉರುವನೆಕೆ ಉರ್, ಮಳುರನ್ನನೆ ತಂಪಾಯಿತಿರ್‌ಂದೆಣ್ಣಿಯಂಡ್ ತಿಂಬಿಚಿಟ್ಟಿತ್ ಕುಂಞಿನ ಬಾಳೆ ಎಲಕಂಡತ್ ಬುದ್ಧವಕಾಕುವ.

ಈ ನಂಬಿಕೆ ಸಂಸ್ಕೃತಿಲ್ ಕುಂಞಿರ ಎದೆಲ್ ಕಪಕಟ್ಟಿಯವತೆ ಸ್ವರ ಚಾಯಿತೆ ಉತ್ತುವನೆಕೆಯೂ, ಪುಟ್ಟ್‌ನ ಕುಂಞಿ ಬೆಕ್ಕನೆ ಇಪ್ಪನಕೆ-ಬಾಳೆಎಲಕಂಡತ್ ಬುದ್ಧವಾಕುವತೂ, ವೈಜ್ಞಾನಿಕ ಹಿನ್ನಲೆ ಉಂಡ್‌ಂದ್ ಎಣ್ಣೊಲು. ಪೆತ್ತಲ್ಲಿ ಪನ್ನೆರಂಡ್ ನಾಳ್ ಸೂತಕ. ಪನ್ನೆರಂಡ್ ನಾಳ್, ಮಂದ್. ತಿರಿಕೆಕ್ ಪೋಪನೆಕೆ ಇಲ್ಲೆ. ಪನ್ನೆರಂಡನೇ ನಾಳ್ ಕುಳಿಚಿತ್ ಮನೆಕೆಲ್ಲಾ ಕಾವೇರಿ ತೀರ್ಥತಳ್‌ಚಿತ್ ಅಂದೇ ಕುಂಞಿಕ್ ಪೆದಲ್‌ಟ್ಟಿತ್ತ್ ಕುಂಞಿನ ತೊಟ್ಟಿಕ್ಕ್‌ಡುವ. ಆಣ್ ಕುಂಞಿಯಾಚೆಂಗಿ ಕುಂಞಿರ ನಡು, ಕೈಕಾಲ್‌ಕ್ ಕರ್ತ ನೂಲ್‌ನ ಕೆಟ್ಟುವ. ಪೊಣ್ಣ್ ಕುಂಞಿಯಾಚೆಂಗಿ ಕೈಕ್ ಮಾತ್ರ ಕರ್ತ ನೂಲ್ ಕೆಟ್ಟುವ. ತೊಟ್ಟ್‌ಕ್ ಇಡುವಾಂಗ್ ಮುಪ್ಪಡೆ ಪಾಲ್‌ಪೆರೆಕ್ ಪೌನ್ ತಯಿಚಿತ್ ಕುಂಞಿರ ಬಾಯಿಕ್ ಕೊಡ್‌ಪ. ಚೆರಿಯ ಪುಡಿ ಕಲ್ಲ್‌ಕ್ ಬೊಳತ ಬಟ್ಟೆ ಸುತ್ತಿತ್ತ್ ಮೂಂದ್ ಕುರಿ ತೊಟ್ಟ್‌ಕ್ ಇಟ್ಟಿತ್ತ್ ಪೊರಮೆ ಎಡ್‌ತಿತ್ತ್ ಪೆದ 'ಮಂದಣ್ಣ'ಂದಾಯಿತುಂಡೇಂಗಿ ಮಂದಣ್ಣ, ಮಂದಣ್ಣ ಪಾಲ್ ಕೂಳುಂಬಕ್ ಏಳ್‌ಂದೆಣ್ಣುವ. ಕಲ್ಲಾಯುಷ್ಯಾಯಿತ್ ಬಾಳ್, ಆರೋಗ್ಯವಂತನಾಯಿತ್ ಬಾಳ್‌ಂದ್ ಎಣ್ಣಿರೊಂಜಿ ತೊಟ್ಟ್‌ಲ್ ಕುಂಞಿನ ಇಟ್ಟಿತ್ತ್ ಕುಂಞಿರ ಇಟ್ಟ ಪೆದತ್‌ನ ಮೂಂದ್ ಕುರಿ ಕಾಕುವ. ಪೆತ್ತವಕೂ, ಕುಂಞಿಕೂ ಆರುವದ್ ನಾಳ್ ತಾಮನೆಲ್ ಆರೈಕೆ ಮಾಡುವ. ಆರೈಕೆ ಆಯಿತ್ ಅರುವದ್ ನಾಳ್ ಆನಪಿಂಞಿಊ ನಾಳ್ –ನಕ್ಷತ್ರ ನೋಟಿತ್ತ್ ನೀರೆಡ್‌ಪ ಪದ್ಧತಿ. ಪೆತ್ತವ ನೀರೆಡ್‌ತ ಪಿಂಞಿ ಅವ ಮಡಿಪಾಂದತ್‌ಂದ್ ಅರ್ಥ. ಇಲ್ಲಿಯೂ ನೀರ್ – ತೀರ್ಥರೂಪಿಣಿಯಾನ ಕಾವೇರಿ ಮಾತೆಕ್ ಪ್ರಾಮುಖ್ಯತೆ ಕೊಡತದ್ ಕಾಂಗೊಲು. ತಾಮನೆಲ್ ನೀರ್ ಎಡ್‌ತಿತ್ ಆನಪಿಂಞಿ ಅವ ಬಾಕ್ಯಮನೆಕ್ ಪೋಪೊ. ಆರುವದ್ ನಾಳ್ ಕಯಿಂಜಿತ್ ಕುಳಿಚಿತ್ ಪಟ್ಟ್‌ಪೊಡಿಯ, ಮಾಲ್ ಎಲ್ಲಾ ಅಣ್‌ಂಜಂಡ್ ಪೊರಡುವ. ಗುಡ್ಡತ್ ಇಚ್ಚಿಕ್ ನಾಳ್ ಕುಳ್‌ಚ ಕಲತ್‌ನ ಒಲೆಂಜ ಎಡ್‌ತ್‌ರೊಂಜಿ ಕಲ ತಂಪಾನನಕ್ಕೆ ಕೆಲ ತಂಪಾಡ್‌ಂದ್ ಎಣ್ಣುವ. ಕೂವ ಅಲ್ಲೇಂಗಿ ಕಣತರೆಕ್ ಪೋಯಿತ್ ತೋರಳೆ ತೊಪ್ಪುರ ಕೊತ್ತ್ ಪಡಿಂಞಿಊರ್‌ಕ್‌ತ್ತಟಿ ಇಪ್ಪನೆಕೆ, ಮೂಂದ್ ತೋರಳ ತೊಪ್ಪುನ ಬೋರೆ, ಬೋರೆಯಾಯಿತ್ ಬೆಚ್ಚಿತ್ತ್, ಆಂಗ್ ಚೆನ್ನ ಚೆನ್ನ ಅಕ್ಕಿ ಇಟ್ಟಿತ್ತ್ ಮೂಂದ್ ಕೊಡಿಯಲೆ, ಮೂಂದ್ ಅಡಿಕೆನ ಬೆಚ್ಚಂಡ್ ಆದ್ಯ ಚೂರಿಯಂಗಕ್ಕಿ ಮೂಂದ್ ಕುರಿ ಇಟ್ಟಿತ್ತ್ ಮೂಂದ್ ಕುರಿ ನೀರ್‌ಕ್ ಅಕ್ಕಿಲ್‌ಟ್ಟಿತ್ತ್, ಕೊಡಿಯಲೆ

ಅಡಿಕೆ ಮರ್‌ಂಜಿ ಪೋಗತನಕೆ ನೀರ್‌ಕ್ ಬುಡುವ. ತೆಂಗೆ ವಡ್‌ತಿತ್ತ್ ನೀರ್‌ಕ್ ಬುಡುವ. ಕಣತೆರೆ / ಕೂವತ್ ಕೋತ್‌ನ ಪುದಿಯ ನೀರ್‌ನ ಪೆತ್ತವ ಮೂಂದ್ ಕುರಿ ಕೈಕ್ ಬೂಕಿಯಂಡ್ ಕುಡಿಚಿತ್ ದಂಡ್ ಚೆಂಬುನ ಮೇಲೆ ಮೇಲೆ ಬೆಚ್ಚಂಡ್ ಎಡತ ಪೋಯಿತ್, ಪೆತ್ತವಡ ಕೂಡ ದಂಡಾಳ್ ಓರೋರ್ ಚೆಂಬು ನೀರ್ ಎಡ್‌ತಂಡ್ ಕೂಡೇ ಪೋಯಿತ್ ಅಡಿಗೆ ಮನೆಲ್ ಬೆಚ್ಚಿತ್, ಬಾಡೆಲ್ ನೆಲ್ಲಕ್ಕಿ ಬೊಳ್‌ಚಕ್ ಅಕ್ಕಿ ಇಟ್ಟಿತ್ತ್, ಪೆರಿಯಯಿಂಡ ಕಾಲ್ ಪುಡಿಪ. ಇಕ್ಕ ಸುಮಾರ್ ವಕ್ಕಕಾರ ಅರುವದ್ ನಾಳ್ ಕಯಿಂಜಿತ್ ಕುಂಞಿನ ತೊಟ್ಟ್‌ಕ್ ಇಡುವದೂ ನೀರೆಡ್‌ಪದೂ ವಕ್ಕಚೆ ಮಾಡುವದುಂಡ್.

*****

# ಕೊಂಬ್ ಆರ್

# ಕೊಡವಡ ಕೈಮಡ

ಚೂರಿಯ, ಚಣ್ಣೂರ ಕಾವೇರಮ್ಮೆ ಈ ಪ್ರಕೃತಿರ ಕೂಟ್‌ಕ್ "ಪೆರಿಯಂಗಳೇ ದೇವ" ಕೊಡವಕ್. ಪೆರಿಯಯಿಂಗಕಿಂಜ ಬಲ್ಯೆವು ದಾರೂ ಇಲ್ಲೆ, ವಕ್ಕತ್‌ರ ಮೂಲಪುರುಷನೇ "ಕಾರಣ." ಮೂಲ ಅವ್ವನೇ "ಕಾರಣಚ್ಚಿ" ಐನ್ ಮನೆರ– ಕನ್ನಿಕೊಂಬರೆಲ್ ವಕ್ಕತ್‌ರ ಪೆರಿಯಯಿಂಗಳ ನೆನತಿತ್ ಕೊಡವ ಎಕ್ಕೋಲೂ ಬೊಳ್‌ಚಬೆಪ್ಪ ಮೀದಿ ಬೆಪ್ಪ. ಎಂತ ಕಾರ್ಯ ಉಂಡೆಂಗಿಯೂ ಕನ್ನಿಕೋಂಬರೆ, ಕನ್ನಿಕಂಬ, ಕೈಮಡಕ್ ಪೋಯಿತ್ ಕತ್ತಿಚಿಟ್ಟ ಬೊಳ್‌ಚಕ್ ಅಕ್ಕಿ ಇಟ್ಟಿತ್ತೇ ಆಂಡು. ಮಂಗಲ ಕಾರಿಯತ್ ಮಾತ್ರ ಅಲ್ಲ, ಮಕ್ಕ ಪಟ್ಟಾಳಕ್ ಪೋಪಕ ಅಥವ ಇಂಇಂತೇಂಗಿ, ಕೆಲಸಕ್ ಕೂಡ್ವಕ, ಗುರುಕಾರಣಂಡ ಪೆದಲೆಣ್ಣಿತ್ತೇ ಆಂಡು. ಐನ್ ಮನೆರ ಐಮರವೂ ಕಾರಣಂಗ್ ಸಂಬಂಧಪಟ್ಟದ್. ಅಲ್ಲಿ ಪೊಣ್ಣಾಳ್ ಅಳ್‌ಪನೆಕೆ ಇಲ್ಲೆ. ಐನ್ ಮನೆರ ಮುಂದ್‌ಲುಳ್ಳ ಐಮರಕ್ ಆಣಾಳ್ ಬುದ್ದಂಡಕ, ಕಾಲ್‌ಲ್ ಚವುಟ್‌ನಕ, ಕಾರಣಂಗ್ ಚೆಡಿಬಪ್ಪ ಎಣ್ಣುವ ನಂಬಿಕೆ ಉಂಡ್ ಕೊಡವಡಲ್ಲಿ.

ಐನ್ ಮನೆರ ಚೆನ್ನ ದೂರತೇ ಕೇಕ್‌ಕ್ ಮೊಗವಾಯಿ ಕೈಮಡ ಇಪ್ಪ. ಮಣ್ಣ್‌ರ ತೆರೆ ಮಾಡಿತ್ತ್ ಮಿಂಞ ಬರಿಲ್ ಕನ್ನಿಕಂಬ ಆಯಿತ್ತ್, ಬಯ್ಯ ಬರಿಕ್

ಪೂರ್ತಿ ಗೋಡೆ ಆಯಿತ್ ಎಡತೆ ಬರಿ, ಬಲತ ಬರಿ, ಪಾದಿ ತೊರಂದಿತ್ ಕೈಮಡತ್‌ನ ಕಟ್ಟಿತಪ್ಪ. ಕೈಮಡತ್‌ರ ಕೊಡಿಲಿಪ್ಪ ಗುಬ್ಬಿಲ್ ಚೂರಿಯ, ಚಣ್ಣೂರಂಗಡ ಚಿತ್ತ್‌ರ ಇಪ್ಪ. ಪಂಡ್, ಪಂಡ್ ಕಾಲತ್ ಪಾಲ್‌ಬಪ್ಪ ಮರತ್‌ರಡಿಲೇ ಕಾ..ಂಡ ಕಲ್ಲ್. ಅದ್‌ನ ಕಾರಣವೋತೆರೆಂದ್ ಎಣ್ಣುವ. ಇಕ್ಕಲೂ ಈ ತರತ್‌ರ ಕಾರಣವೋತೆರೆ ಸುಮಾರ್ ವಕ್ಕತ್‌ವುಂಡ್. ಸುಮಾರ್ ವಕ್ಕಕಾರ ತೊಲ್ಯಾರ್ ಚಂಗ್ರಾಂದಿ ಕಯಿಂಜಿತ್ ಪತ್ತಲೋದಿಯಂದೂ ಇಂಞೂ ಚೆನ್ನ ವಕ್ಕಕಾರ ಬಿಸು ಚಂಗ್ರಾಂದಿಕೂ ಕಾರಣಂಗ್ ಕೊಡ್‌ಪದ್ ಕೊಡವಡ ಪದ್ಧತಿ. ಪಂಡ್ ಕೊಡವಡ ಕೈಮಡತ್‌ರ ಮಿಂಞಲೋರ್ ಕೊಡಿಮರ ಇಪ್ಪಯಿಂಜತ್. ವಕ್ಕತ್ ಮಕ್ಕ ಪುಟ್ಟ್‌ನ ಸಮಯತ್ ಕೊಡಿಮರಕ್ (ನಲ್ಲಮಳು) ಕುರುಮಳುರ ಚೊಪ್ಪೆ-ಪಚ್ಚೆ ಎಲ್‌ಕಂಡ ಕಟ್ಟುವಯಿಂಜತ್. ಪಡೆಪೊತ್ತಿತ್ ಗೆದ್ದಿತ್ ಬಂದಕ ಕೊಡಿಮರತ್‌ರ ಸುತ್ತೂ ಪಕ್ಷಿಯಡ ರೆಕ್ಕೆರ ತೂವತ್‌ನ ಕೆಟ್ಟಿತ್ ಬೊಳ್‌ತ ಪಚ್ಚಡ ಬಟ್ಟೆ ಬಾವುಟ ಪಾರ್‌ಚಿಡುವೋ, ಇನ್ನನೆ ಕೊಡಿಕೀತುವೋ, ಕಲ್ಲ್‌ಮರ ಕೈಪೋ..... ಎಲ್ಲಂಗೂ ಓರೋರ್ ಚಿನ್ನೆಃ ಇಂಜತ್. ವಕ್ಕತ್ ದಾರೇಂಗಿ ಚತ್ತಕ ವಣ್‌ಂಗ್‌ನ ಮರತ್‌ರ ಕೊಂಬುನ ಚಿಕ್ಕಿಚಿಡುವೋ ಇನ್ನನೆ ಕೈಮಡ ಓರ್ ಪವಿತ್ರವಾನ ನೆಲೆ ಕೊಡವಕ್.

*******

# ಕೊಂಬ್ ಏಳ್

# ಕೊಡವಡ ಮಂಗಲ

ಕೊಡವಡಲ್ಲಿ ಏಳ್ ತರತ ಮಂಗಲ ಉಂಡ್.

1. ಪೊಲೆ ಕಂಡ ಮಂಗಲ
2. ಕೆಮಿ ಕುತ್ತಿ ಮಂಗಲ (ಆಣಾಳ್‌ಕ್ ಮಾತ್ರ ಕೆಮಿಕುತ್ತಿತ್ತ್ 'ಪತ್ತೋಂಟಿ' "ಕಡಕ್" ಕೆಮಿಕ್ ಇಡುವ. ಇದೂ ಮಂಡೆಲಕ್ಕಿ ಇಟ್ಟಿತ್ ಕಯಿಪ ಮಂಗಲ)
3. ಕನ್ನಿಮಂಗಲ
4. ಕುಳಿಮ ಮಂಗಲ (ತವ್ವಡೆ ಪೆರುವಕ್ ತಾಮನೆಕಾರ ಕೂಪದಿಕೂಳ್ ಗದ್ದಾಳ ಅಯಿತ್ ಮೂಡಿರ ಬಾಮನೆಕ್ ಬಂದಿತ್ತ್ ಕೂಟಿಯಪೋಪದ್)
5. ಬಾಳೆ ಮಂಗಲ (ದಂಡ್ ಪೊಣ್ಣ್ ಚತ್ತ್‌ಮೋಚೆಂಗಿ, ಮೂಂದನೆ ಕುರಿ ಬಾಳೆ ಮಂಗಲ ಕಯಿಚಿತ್ತೇ ಪುನಃ ಪೊಣ್ಣ್ ಕೊಂಡಾಪೊ)
6. ನರಿ ಮಂಗಲ (ಆಣೇ ಆಡ್ ಪೊಣ್ಣೇ ಆಡ್ ನರಿ ಬೊಡಿಚಿಟ್ಟಕ ಮಾಡುವ ಮಂಗಲ–ಇಕ್ಕ ಮಾಡುಲೆ)
7. ಮನೆ ಮಂಗಲ (ಪುದಿಯ ಮನೆ ಕಟ್ಟ್‌ನಲ್ಲಿ ಕಯಿಪ ಮಂಗಲ)

ಪೊಲೆಕಂಡ ಮಂಗಲ ಪಂಡ್ ಮೂಡಿ ಕುಂಞಿಯ ಪೊಲೆ ಕಂಡಕ,

ಪೊಲೆಕಂಡ ಮಂಗಲ ಪಂಡ್ ಮೂಡಿ ಕುಂಞೆಯ ಪೊಲೆ ಕಂಡಕ, ಅಲೆಪೊರೆಲ್ ಒಯಂಬದ್ ನಾಳ್ ಆರೈಕೆ ಮಾಡಿತ್, ಪತ್ತನೆ ನಾಳ್ ಮದಿ ಪಾಂದಿತಾನ ಪಿಂಞ ಮನೆರೊಳ್‌ಲೂ ದಂಡ್ ತಿಂಗ ಆರೈಕೆ ಮಾಡುವ ಇಂಜತ್. ದಂಡ್ ತಿಂಗ ಕಯಿಂಜ ಪಿಂಞ, ಬೊಳ್ಳಿಯಾಚೆ, ಚೆವ್ವಾಚೆ ಬುಟ್ಟಿತ್ ಬಾಕಿ ಏದೇಂಗೋರ್ ನಲ್ಲ ನಾಳ್ "ಪೂಕೋಲ್ ನೆರ್‌ಪೊ", ಪೂ–ಕೋಲ್‌ರ ಕಳಿ. ಪೊಲೆ ಕಂಡ ಮಂಗಲ, ಕಯಿಚಂಡಿಂಜತ್.

ಕೊಡವಡ ಮಂಗಲತ್‌ರ ಪದ್ಧತಿ. ಸ್ವಯಂವರ ಪದ್ಧತಿಂದ್ ಎಣ್ಣೊಲು. ಕ್‌ಣ್ಣ ಕೂಪದಿ ಕಟ್ಟಿಯಂಡ್, ಪಂಡ್ ಪೊಂದೇಡಿಯಂಡ್ ಪೋಯಿತ್, ಪೊಣ್ಣ್ ತೇಡಿಯಂಡ್ ಬಪ್ಪಯಿಂಜತ್. ಅಂತೂ ಕ್‌ಣ್ಣನೇ ನೋಟ್‌ನದೋ, ತಂದ್‌ಕಾರ ತಂದ್ ಪರ್‌ಂದದೋ, ಜಾತಕ ನೋಟಿತ್ ಒತ್ತ್ ಬುದ್ಧತೇಂಗಿ ಮಂಗಲತ್‌ರ ತಕ್ಕ್ ಪರೆವ. ಕೊಡವ ಮಂಗಲ ಕೈಕೊಂಡುವೇಂಗಿ ಗಣಕೂಟಕ್ ಒತ್ತ್ ಕೊಡ್‌ಪ "ಮನಸ್ಸ್ ಒತ್ತತ್ತೇಂಗಿ ಗಣ ಒತ್ತತ್‌ೕ"ಂದ್ ಎಣ್ಣುವ ನಂಬಿಕೆ ಉಂಡ್ ಕೊಡವಡಲ್ಲಿ. ಕ್‌ಣ್ಣ –ಮೂಡಿನ ನೋಟ್ಟಕ, ಮನಸ್ಸ್‌ಕ್ ಪುಡ್‌ಚಕ–ಚೋರೆ (ಬ್ಲಡ್ ಗ್ರೂಪ್) ಹೊಂದಿ ಬಪ್ಪ. ಚೋರೆ ಹೊಂದಿ ಬಂದಕ ಗಣ ಕೂಟವೂ (ಕ್ಷತ್ರಿಯಂಗ ಗಣಕೂಟಕ್ ಪ್ರಾಮುಖ್ಯತೆ ಕೊಡ್‌ಪಾಂದೂ, ಪಟ್ಟಮ ವರ್ಣಕೂಟಕ್ ಪ್ರಾಮುಖ್ಯತೆ ಕೊಡ್‌ಪಾಂದೂ ವೇದ ಎಣ್ಣುವ) ಸೆರಿಬಪ್ಪಾಂದ್ ಕೊಡವಡ ನಂಬಿಕೆ. ಅಪ್ಪರಿಪ್ಪರ ಆಣ್–ಪೊಣ್ಣ್ ಮಂಗಲಕ್ ಒತ್ತ್ ಬಂದಕ ಮಂಗಲ ಕುರಿಪೊ. ಮಂಗಲ ಕುರಿಪಂಡ್. ಕ್‌ಣ್ಣಂಡ ಮನೆಂಜ ಅರುವನ ಕೂಟಿಯಂಡ್ ಮೂಂದಾಳ್, ಅಂಜಾಳ್ ಮೂಡಿರ ಮನೆಕ್ ಪೋಯಿತ್ ಮೂಡಿರ ವಕ್ಕಕಾರಳೂ ಅಯಿಂಡ ಅರುವನ ಕಾಕ್‌ಚಿಟ್ಟಂಡ್ ಬೋಂಡಿಯಾನಯಿಂಗಳ ಕಾಕಿ ಕೂಟಿಯಂಡ್, ನೆಲ್ಲಕ್ಕಿ ಬಾಡೆನ ಓಡ್‌ಕಿ, ಜಾಣತ್ ನೀರ್ ತಳ್‌ಚಿತ್ ನೆಲ್ಲಕ್ಕಿ ಬೊಳ್‌ಚ ಕತ್ತಿಚಿಟ್ಟಿತ್ತ್–ತಳಿಯಕ್ಕಿ ಬೊಳಕ್ ಬೆಚ್ಚಿತ್ತಿರೋಂಡು. ಆಣ್–ಪೊಣ್ಣ್ ದಂಡ್ ಕಡೆಕಾರಳೂ ನೆಲ್ಲಕ್ಕಿ ಬೊಳ್‌ಚತ್‌ರ ಆಬರಿ ಈಬರಿ ನಿಂದಂಡ್ ನೆಲ್ಲಕ್ಕಿಲಕ್ಕಿ ಇಟ್ಟಿತ್ತ್ ದಂಡ್ ಕಡೆರ ಅರುವಂಗ ಅಪ್ಪರಿಪ್ಪರ ತಕ್ಕ್‌ಪರೆವ. ಮಂಗಲ ಕುರ್‌ಚಿತರಂಡೂಂದ್ ಮೂಡಿರ ಅರುವನ ಕ್‌ಣ್ಣಂಡ ಅರುವ ಕೇಟವ. ಮಂಗಲ ಕುರ್‌ಚಿತಾನದು, "ಕ್‌ಣ್ಣ–ಮೂಡಿಕೂ, ಇಲ್ಲವಂಗೂ, ಬೆಂಮುಕೂ, ಅಂಗಂಗೂ– ಅರುವಂಗೂ ಓರ್ ತಟ್ಟ್, ಮುಟ್ಟ್ ಬರತನಕೆ ನಡ್‌ತಿ ತಪ್ಪ ಭಾರ ಕಾವೇರಿಯಮ್ಮೆಕೂ ದಂಡ್ ವಕ್ಕಡ ಗುರುಕಾರಣಂಗಕೂ ಕೂಡಿತುಂಡ್‌ಂದ್" ಕಾವೇರಿಯಮ್ಮೆ, ಗುರು ಕಾರಣಂಗಡ ಮೇಲೆ ಬಾರ ಇಡುವ. ಇಲ್ಲಿಯೂ ಸತ ಕಾವೇರಮ್ಮನ ಬೋಡಿಯಂಡೇ ಮಿಂಞಕುಳ್ಳ ಕಾರ್‌ಬಾರ್.

ಕ್‌ಣ್ಣಂಡ ಅರುವನೋ, ಅಲ್ಲೆಂಗಿ ಕ್‌ಣ್ಣಂಡಕಡೆರ ಪೆರಿಯವು ದಾರೇಂಗಿ ಮಂಗಲ ಕುರ್‌ಚಂಗ್ ಕ್‌ಮರಿಯಾದಿ ಪ್ರಕಾರ ಈಡ್‌ಚಿಪ್ಪ. ಈಡ್ ಎಣ್ಣಕ ಪಣ ಅಲ್ಲೆಂಗಿ ಪೊನ್ನ್‌ರ ಮಾಲ್ ಮಂಗಲ ಕುರ್‌ಚಂಗ್ ಸಾಕ್ಷಿಯಾಯಿತ್ ಮೂಡಿಕ್ ಕೊಡ್‌ಪ ಪಣ ಅಲ್ಲೇಂಗಿ ಪೊನ್ನ್. ('ಈಡ್' ಎಣ್ಣುವ ಧಾತುಋುಗ್ವೇದ ಮಂತ್ರತ್ ಬಪ್ಪ). ಇದಾನದು ಊಟೋಪಚಾರ ತ್‌ೕತಂಡ್ ಕ್‌ಣ್ಣಂಡವು ಕ್‌ಣ್ಣಂಡ ಮನೆಕ್ ಪೋಪ. ಮಂಗಲ ಕುರಿಪೊ ಪದ್ಧತಿ  ಇಕ್ಕಲೂ ಉಂಡ್. ಮಣ್ಣ್ ಅರುವ, ಅಲ್ಲೆಂಗಿ ಪೊನ್ನ್ ಅರುವ, ಕ್‌ಣ್ಣ/ಮೂಡಿರ–ಅರಿವವು, ಪೆರಿಯವು ನೆಲ್ಲಕ್ಕಿರಡಿಲ್ ತಕ್ಕ್ ಪರ್‌ಂದಿತ್ತ್ ಅಕ್ಕಿ ಇಟ್ಟಿತ್ತೇ ಆಂಡು. ಇಕ್ಕತ ಕಾಲತ್ ಬೆಂದುವಡ ಊಟೋಪಚಾರಕ್ ತಂಗಡ ಸೌಕರ್ಯ ಪೋಲೆ ಕೊಡವ ಸಮಾಜತ್ತೊ, ಪೊಟೇಲ್‌ಲೋ ಮಾಡಿಯವುದುಂಡ್. ಪಂಡ್ ಆಣ್‌ಕ್ ಕೆಮಿಕುತ್ತಿ ಮಂಗಲ ಆಚೆಂಗಿ ಮಾತ್ರ ಅವಂಗ್ ವಕ್ಕತ್, ನಾಡ್‌ಲ್ ಮಂದ್‌ಲ್ ಸ್ಥಾನ–ಮಾನ. ಕೆಮಿಕುತ್ತಿ ಮಂಗಲ ಆಣ್‌ಕ್ ಆದ್ಯ ಮಂಗಲ. ಕೆಮಿಕುತ್ತಿ ಮಂಗಲ ಆನ ಪಿಂಞ ಪೊಣ್ಣ್‌ನ ಕೂಟಂಯ ಬಪ್ಪ ಮಂಗಲ. ಮೂಡಿ ಕುಂಞಿಯ ಪುಟ್ಟಿತ್–ಕಾಲತ್‌ರೊಳ್‌ಲ್ ಪತ್ತಲೊದಿಕ್ ಕೆಮಿಕುತ್ತಿತಿಪ್ಪ. ಪೊಣ್ಣ್ ಕುಂಞಿಯಕ್ ಕೆಮಿಕುತ್ತಿ ಮಂಗಲ ಇಲ್ಲೆ.

"The Girls have their ears pierced in early child hood." 40

"Formerly Mangala was performed to mark the attainment of social adult hood by a boy when his ears were ritually bored by the Goldsmith" 41

ಇನ್ನನೆ ಮಂಗಲ ಕುರಿಚಿತಾನ ಪಿಂಞ ಆಣ್ ಆಡ್ ಪೊಣ್ಣೇ ಆಡ್ ಪೊಳಿ ಇಳ್‌ಂಜಿತ್ ದಾಟ್ವಕ್ಕಾಗ. ಮಂಗಲ ಮನೆಕ್ ಚಾವು ಸುದ್ದಿ ಎಣ್ವಕ್ಕಾಗ. ಆಕಸ್ಮಾತ್ ಎಣ್ಣಿ ಪೋಚೆಂಗಿಯೂ, ಮಂಗಲ ಮನೆಂಜ ಕೆಲ್ಲಿಟ್ಟಿಯಾಡ್, ಮುರಿಯಾಡ್, ಸೆಮಯ ಆಡ್ ಕೊಂಡ ಪೋಪಕ್ಕಾಗ. ಪನ್ನಂದಂಗೂ, ಮಾದಕ್ಕೊ ಪೊಡಿ–ಬಾಳೆ, ಮಂಗಲ ಮನೆಂಜ ಕೊಂಡ ಪೋಪಕ್ಕಾಗ. ಕ್‌ಣ್ಣ ಚೌರ ಮಾಡವಕ್ಕಾಗ, ಕುಪ್ಯಚ್ಯಾಲೆ ಇಡುವಕ್ಕಾಗ. ಮಂಗಲಕರ್ತಿ ಕಟ್ಟೋಳೆ ಕಡ್‌ಪ್ಪಕ್ಕಾಗ. ಕ್‌ಣ್ಣ ಅಲ್ಲೇಂಗಿ ಮೂಡಿರ ಸ್ವಂತ ಜನ ಚತ್ತಕಲೂ ನಿಪ್ಪು ತುಣಿ ಕಟ್ಟುವಕ್ಕಾಗ...... ಮನೆಕಾರ ಕರಿಕ್ ಮುರಿಪ ನಾಳ್‌ಕ್ಕಂಜ ಮಿಂಞ ಚತ್ತ್‌ಪೋನಕ ಪನ್ನೊಂದು ದಿವಸಕತ್ತಣೆ ಸೂತಕ ಇಪ್ಪಾನುಂಡ್ ಮಧ್ಯತ್ ಮಂಗಲ ಕೈಪಕ್ಕಯ್ಯಂದೆಣ್ಣುವ ನಿರ್‌ಕ್ ಇಕ್ಕಲೂ ಉಂಡ್. ಈ ಸೃಷ್ಟಿರ ಪುನರಾ

40 Gazzatter of Coorg G. Richter P.No. 132

41 Religion and society among coorg P.No.70

ವರ್ತನೆಕ್ ಕಾರಣವಾಪೊ ಮಂಗಲತ್‌ನಂತ ಕಾರ್ಯಕ್ ಅಣ್‌ಂಜ ಪಿಂಞ ಮದ್ಯತ್ ಆ ಮನಸ್ಸ್ ಮೊಡ್‌ಂಗ್‌ಚೆಂಗಿ ನಲ್ಲ ಮನಸ್ಸ್ ಉಳ್ಳ ಮಕ್ಕ ಪುಟ್ಟ್‌ವಕಿಲೇಂದೆಣ್ಣುವ ವೈಜ್ಞಾನಿಕತೆ ಉಂಡ್ ಈ ಕೊಡವ ಪದ್ದತಿಲ್‌ಂದ್ ಎಣ್ಣೊಲು. ಕರಿಕ್ ಮುರಿಪ ನಾಳ್, ಮಂಗಲ ದಿವಸ ಅಲ್ಲೇಂಗಿ ಬೈಮಂಗಲ ದಿವಸ ಚತ್ತ್ ಪೋನಕ ಚಾವುನ, ಮನೆರ ಬೆಂಬರಿಕಾಲೆ ಕೊಂಡಪೋಂಡು. ಚಾವು ಪೋಲೆ ಎಡ್‌ಪಕ್ಕಾಗ, ಎಣ್ಣುವ ನಿರ್‌ಕ್ ನಂಬಿಕೆ ಕೊಡವಡಲ್ಲಿ ಇಕ್ಕಲೂ ಉಂಡ್. ಮಂಗಲ ನಿಶ್ಚಿಚಿಡುವತ್ ದುಂಬಾ ಕಷ್ಟ, ನಷ್ಟ ಆಪಾಂದೆಣ್ಣುವ ಉದ್ದೇಶತ್ ಏಳ್ ದಿವಸತ್ ಮಾದ ಕಯಿಚಿರೊಂಜಿ ಚಾವು ಪೊಲೆ ಎಡ್‌ಪ ಪದ್ಧತಿಯೂ ಉಂಡ್.

ತೇರಣ ಮಂಗಲ, ಕರಿಕ್ ಮುರಿಪ–ಊರ್‌ಕೂಡುವ ಮಂಗಲ ಮೂರ್ತಕ್ ಓರ್ ನಾಳ್‌ಕ್ ಮುಪ್ಪಡೇ ನಡ್‌ಪ. ಪದ್ಧತಿ ಪ್ರಕಾರ ಕ್‌ಣ್ಣಂಡ ಮನೆಲ್ ಕ್‌ಣ್ಣಂಡ–ವಕ್ಕ, ಊರ್, ನಾಡ್‌ಕಾರಳೂ, ಪೊಣ್ಣ್‌ರ ಮನೆಲ್ ಪೊಣ್ಣ್‌ರ ವಕ್ಕ, ಊರ್, ನಾಡ್‌ಕಾರಳೂ, ಊರ್‌ಕೂಡುವ ಮಂಗಲತ್ ಕೂಡಿಯಾಡುವ. ಕರಿಕ್ ಮುರಿಪನ ಊರ್‌ಕಾರ ಮಾಡುವ. ಪಂದ ಇಡುವದ್ ಅರುವ ಮಾಡುವ. ಮನೆರ ಮೊಟ್ಟ್ ಒಳ್‌ಕ್ ಕೂಡುವನಕೆ ಪಂದ ಇರೊಂಡು. ಮನೆರ ಮೊಟ್ಟ್‌ರ ಆಬರಿ–ಈಬರಿ ಇಪ್ಪ ಪಂದತ್‌ರ ಕಂಬಕ್, ಬಾಳೆ ಕೊಲೆ ಇಪ್ಪ, ಬಾಳೆ ಕಂದ್‌ನ ಕಟ್ಟುವ. ಮಾಂಗೆ ಎಲಕಂಡತ್‌ರ ತೋರಣವೂ ಕಟ್ಟುವ. ಪಂದ ಅಂಜಿ ಕಾಲ್‌ರದಾಯಿರೊಂಡ್. ಅದ್‌ಲ್ ಓರ್ ಕಾಲಾಚೆಂಗಿಯೂ ಪಾಲ್ ಬಪ್ಪ ಮರತ್‌ರದಾಯಿತಿಕ್ಕೊಂಡೂಂದ್ ನಿರ್‌ಕ್ ಉಂಡ್. ಮಂಗಲ ಕಾರಿಯತೂ ಪಾಲ್‌ಬಪ್ಪ ಮರಕ್ ಪ್ರದಾನ್ಯತೆ ಕೊಡ್‌ತದ್ ಕಾಂಗೊಲು. ಪಾಲ್‌ಬಪ್ಪ ಮರ ಭೂಮಿಲ್ ಜಲತ್‌ರ ಚಿನ್ನೆಯಾಯಿತುಂಡ್. ಕಾವೇರಿ ಜಲವೇ ಕುಲದೇವ ಆನನುಂಡ್ ಕೊಡವ ಮಂಗಲತ್‌ನಂತ ನಲ್ಲ ಕಾರ್ಯಕ್ ಪಾಲ್‌ಬಪ್ಪ ಮರತ್‌ನ ಪಂದಲ್ ಇಡುವಕ್ ಬಳಸುವ. ಈ ಅಂಜಿ ಕಾಲ್ ಪಂಚಮಹಾಭೂತತ್‌ನ ಪ್ರತಿನಿಧಿಚಿಡುವಾಂದ್ ಎಣ್ಣೊಲು.

ಮಂಗಲತ ಪಂದಕ್ಕಾಡ್, ಮಂಗಲತ್ ಏದೇ ಕಾರ್‌ಬಾರ್‌ಲೂ ಪನೆ ಮರತ್‌ರ ತೊಪ್ಪ್‌ನ ಕೂಟುವಕ್ಕಾಗ.

ಮಂಗಲತ್ ಅಡಿಗೆಲ್ ಮಾದಕ್ ಮಾಡುವ ಕಾಯಿಬಾಳೆ, ದೋಸೆ, ಎಸ್‌ರ್–ಪಾಯಿಸ, ಕೂಟುವಕ್ಕಾಗಂದೆಣ್ಣುವ ನಂಬಿಕೆ ಉಂಡ್ ಕೊಡವಡಲ್ಲಿ. ಇದೆಲ್ಲಾ ಇಂದೂ ನಡ್‌ಪುಲುಳ್ಳ ಪದ್ಧತಿ. ಪಂಡ್ ಮನೆಲ್ಲೇ ಮಂಗಲ ಕಯಿಪಯಿಂಜೆಯೆ. ಊರು ಕೂಡುವಂದ್ ಕರಿಕ್ ಮುರ್‌ಚಿತ್ತ್ ಆನಪಿಂಞ ಅಜ್ಜಪ್ಪ ಗುರುಕಾರಣಂಗ್–ಕಲಿಯ ಕೊಡ್‌ಪ ಪದ್ಧತಿ ಉಂಡ್. ಆಚೆಂಗಿ ಇಕ್ಕ ಕೊಡವ ಸಮಾಜತ್ ಮಂಗಲ ಕೈಪಾನುಂಡ್

ಊರ್ ಕೂಡುವಾಂಗ್ ಓರ್ ನಾಳ್‌ಕ್ ಮುಪ್ಪಡೇ, ಕಾರಣಂಗೂ ಅಜ್ಜಪ್ಪಂಗೂ ಕಲಿಯ ಕೊಡ್‌ಪ. ಎಲ್ಲಾ ಕಾರ್‌ಬಾರ್‌ಕ್ ಮೊಟ್ಟುಡುವಕ್ ಮುಪ್ಪಡೆ ವಕ್ಕತ್ ಪೆರಿಯವು ನೆಲ್ಲಕ್ಕಿಲಕ್ಕಿ ಇಟ್ಟಿತ್ತ್, "ಇಲ್ಲವಂಗೂ, ಬೆಂದುಕೂ ಅಂಗಂಗೂ ಅರುವಂಗೂ ಓರ್ ತಟ್ಟ್‌ಮುಟ್ಟ್ ಬರತನ್ನನೆ ನಡಿತಿತಪ್ಪ ಬಾರ ಕಾವೇರಮ್ಮೆಕೂ, ಇಗ್ಗುತಪ್ಪಂಗೂ ಒಕ್ಕಡ ಗುರುಕಾರಣವಂಗೂ ಕೂಡಿತುಂಡ್"ಂದ್ ಬೋಡಿಯವದ್ ಕೊಡವಡ ನಂಬಿಕೆಲೋರ್ ಪೆರಿಯ ನಂಬಿಕೆ.

ಕೊಡವಡ ಐನ್‌ಮನೆ ಕೊಡವ ವಕ್ಕಕ್ ಓರ್ ಪವಿತ್ರವಾನ ಸ್ಥಾನ. ಕೊಡವ, ಪೆರಿಯಯಿನ ಎದ್‌ಮುಟ್ಟ್‌ನನಕೆ, ಎಳಿಯವು ಬಗ್ಗಿತ್ ಮೂಂದ್ ಕುರಿ ಕಾಲ್‌ಪುಡಿಪ. ಚತ್ತ್‌ಪೋನ ಪೆರಿಯಯಿನ ಕಾರಣಂದೆಣ್ಣುವ. ಐನ್ ಮನೆರ ಕನ್ನಿಕೊಂಬರೆ ಚತ್ತ ಪೆರಿಯಯಿಂಡ ನೆಲೆ. ಅಲ್ಲಿ ಎಕ್ಕಲೂ ಬೊಳ್‌ಚ ಬೆಚ್ಚಿತ್ ಗುರು–ಕಾರಣವೂಂಗ್ ಮೀದಿ ಬೆಪ್ಪ. ಮುಂದ್ ಮನೆಲ್ ಮುಂದ್‌ರ ನಾಲ್ ಕಂಬತ್‌ಲ್, ನೈರುತ್ಯತುಳ್ಳ ಕಂಬತ್‌ನ ಕನ್ನಿಕಂಬಂದೆಣ್ಣುವ. ನೆಲ್ಲಕ್ಕಿಲಕ್ಕಿ ಇಡುವನೆಕೆ ಕನ್ನಿ ಕೊಂಬರೆ, ಕನ್ನಿಕಂಬ್‌ಕೂ ಅಕ್ಕಿ ಇಟ್ಟಿತ್ತ್ ಚತ್ತ್‌ಪೋನ ಪೆರಿಯಯಿಂಗಳ ತುದಿಪದ್ ಕೊಡವಡ ಪದ್ಧತಿ. ಪೆರಿಯಯಿನ, ಕಾವೇರಮ್ಮೆನ ತುದಿಚಕ ಏದೋರ್ ಕಾರ್‌ಬಾರ್‌ಕೂ ತೊಂದರೆ ಆಪುಲೇಂದೆಣ್ಣುವ ನಂಬಿಕೆಯುಂಡ್ ಕೊಡವಡಲ್ಲಿ. ಪೆರಿಯವು ಇಲ್ಲತೆ ಏದೋರ್ ನಡ್‌ಪೇ ಇಲ್ಲೆ ಕೊಡವಕ್. ಪ್ರತಿಯೋರ್ ಕಾರ್‌ಬಾರ್‌ಲೂ ವಯಸ್ಸ್‌ಲ್ ಪೆರಿಯಯಿಂಗಕ್ಕೇ ಸ್ಥಾನ. ವಕ್ಕತ್ ಪೆರಿಯಂವ ಅವಂಡ ಪೊಣ್ಣ್ ಪೆರಿಯಯಿಂಗ,

Coorg have a keen sense of disciple, which is associated in their minds with leadership and precedence. In their folk songs, not only a group of men but also a herd of cattle and a bunch of flowers have their leaders. And there the usual epithet by which a head man is referred to is 'Mupayanda' which means having precedence. The sense of precedence is ubiquitous. Formerly when caravans from every nad went to Malabar every summer, the senior headman's pack-bullocks marched ahead of the pack bullocks of the others.[42]

ಕೊಡವ ದುಂಬಾ ಕಟ್ಟ್‌ಪಾಡ್ ಉಳ್ಳವು, ನೀತಿ ನಿಯಮ ಉಳ್ಳವು. ಪೆರಿಯಯಿಂಗಕ್ ಎಕ್ಕಲೂ ಎಡ್‌ತ್ ಕಾಂಬಂತ ಮರಿಯಾದಿ ಕೊಡ್‌ಪವು. ಕೊಡವಡ ಪಳಮೆಲ್ ನರಮನುಷ್ಯಂಗ್ ಮಾತ್ರ ಅಲ್ಲ ಅತ್ತಕೂ, ಗಿಡತ್‌ಲುಳ್ಳ ಪೂವ್‌ಕೂ ಕೂಡಿ ಪಟ್ಟೆದಾರ, ಮೂತಂವ ಉಂಡ್‌ೇಂದ್ ಪಾಡುವ. ಮೂಪ/ಮೂತವಂಗ್

ಕೊಡ್‌ಪ ಮರಿಯಾದಿ ಅದ್ ಎಲ್ಲಾ ಜಾಗತೂ ಕೊಡ್‌ಪ ಮರಿಯಾದಿ. ಕೇರಳಕ್ ನೆಲ್ಲ್ ಎಡ್‌ತಂಡ್ ವ್ಯಾಪಾರಕ್ ಪೋಪಕ ಪೆರಯಂವ/ಮೂತಂವಂಡ ಎತ್ತ್ ಗಾಡಿ ಮಿಂಞಲ್ ! ತೆಂಗೆ ಬೊಡಿ ಬೆಪ್ಪಲ್ಲಿ ಆದ್ಯ ಬೊಡಿ ಬೆಪ್ಪೊ ಪೆರಿಯವು ! ಪುತ್ತರಿ ಕೋಲ್‌ಲ್ ಮಂದ್‌ಕಿಳಿವೊ ಆದ್ಯ ಪೆರಿಯವು. ಇನ್ನನೆ ಎಲ್ಲಾ ಕಾರ್‌ಬಾರಲ್‌ಲೂ ಪೆರಿಯಯಿಂಗಕ್ಕೆ ಆದ್ಯತೆ.

ಮಂಗಲ ಕಾರ್-ಬಾರ್‌ಲೂ ಪೆರಿಯಯಿಂಗಕ್ಕೇ ಆದ್ಯತೆ. ಮಂಗಲತ ಕಾರಿಯ ಪೆರಿಯಯಿಂಡ ಮಿಂಞಲ್, ಪೆರಿಯವು ಎಣ್ಣನಕೆ ನಡತುವದಲ್ಲದೆ ಪಟ್ಟಂಗಳ ಕಾಕುಲೆ ! ಬೊಳ್‌ತ ಕುಪ್ಯ, ಮಂಡೆಕ್ ಚೋಪು ರೇಷ್ಮೆ ವಯಿತ್, ಅರೆಕ್ ಚೋಪು ಚ್ಯಾಲೆ, ಪೀಚೆ ಕತ್ತಿ, ಮಂಗಲಕಾರ ಕ್‌ಣ್ಣಂಡ ಊರ್‌ಕೂಡುವ ಪೊರಪಾಡ್. ಪಂಡ್ ನೀಲ ರಂಗ್‌ರ ಚ್ಯಾಲೆಯೂ ಕೊಡವ ಕಟ್ಟುವಯಿಂಜತ್. ಅರೆಲ್ ಪೀಚೆಕತ್ತಿ, ಒಡಿಕತ್ತಿ ಇಲ್ಲತೆ ಪರ್‌ಮೆ ಇಳಿವಯಿಂಜಿಲೆ. ಪೀಚೆಕತ್ತಿನ ಬಲತ ಬರಿ ಅರೆಲ್ ಚಿಕ್ಕಿಚಿಟ್ಟವಕ್ ಕೊಡವ ಚ್ಯಾಲೆನ ಬಳಸ್‌ಚಿ. ಪಂಡ್ ಕೊಡವತಿ ಪೊಣ್ಣಾಳೂ ಬಲತ ಬರಿ ಅರೆಲ್ ಪೀಚೆಕತ್ತಿ ಬೆಚ್ಚವ ಇಂಜತ್. ಕೊಡವತಿ, ಪೊಡಿಯ ಉಡ್‌ತಿತ್ತಾನದು ಮೊಲಕಟ್ಟ್ ಚಿಕ್ಕಿಚಿಡುವ ಜಾಗತ್ ಪೀಚೆಕತ್ತಿ ಬೆಪ್ಪಕ್ ಜಾಗ ಇಪ್ಪ! ಪೆರಿಯ ಕಾರಣಚ್ಚಿಯ ಅರೆಲ್ ಕತ್ತಿ ಬೆಚ್ಚಂಡ್ ಅಕ್ಕಾಕ ಪೀಚೆಕತ್ತಿ ಉಂಡಾಂದ್ ತೊಟ್ಟ್ ನೋಟಯುವ ಇಂಜತೆನ್ನೊ. ಕೊಡವತಿಯ ಇಕ್ಕಲೂ ಮೊಲಕಟ್ಟ್ ಸರಿಮಾಡುವಕ್ ಅಕ್ಕಾಕ ಅರೆಕ್ ಕೈ ಇಟ್ಟಂಡಿಪ್ಪ!

ಬೊಟ್ಟ್ ಪೊಡಿಯ, ಮಂಡೆಕ್ ವಸ್ತ್ರ, ಕೊಕ್ಕೆತಾತಿ ಊರುಕೂಡುವಲ್ಲಿ ಮೂಡಿರ ಪೊರಪಾಡ್. ಮಂಗಲ ಕರ್ತಿನೋ, ಮಂಗಲಕಾರನೋ (ಬೋರೆ-ಬೋರೆ) ಬೋಜಕಾರ್ತಿ, ಬೋಜಕಾರಂಗ ಬಲತ ಕೈ ಪುಡಿಚಂಡ್ ನೆಲ್ಲಕ್ಕಿರಡಿಕ್ ಕೂಟಯ ಬಪ್ಪ ನೆಲ್ಲಕ್ಕಿರಡಿಲ್ ವಕ್ಕತ್‌ರ ಪೆರಿಯವು, ಅರುವ, ಮಂಗಲಕಾರ್ತಿ-ಮಂಗಲಕಾರಂಗೂ ಅಯಿಂಡ ಇಲ್ಲವಂಗೂ, ಬೆಂದುಕೂ ಅಂಗಂಗೂ, ಅರುವಂಗೂ ಓರು ತಟ್ಟ್‌ಮುಟ್ಟ್ ಬಾರತನಕೆ ಕಾರ್‌ಬಾರ್ ಚಾಯಿತೆ ನಡ್‌ತಿತಪ್ಪ ಬಾರ ಕಾವೇರಮ್ಮೆಕೂ ದಂಡ್ ವಕ್ಕಡ ಗುರುಕಾರಣಂಗಕ್ಕೂ ಕೂಡಿತುಂಡ್‌ಂದ್ ನೆಲ್ಲಕ್ಕಿಕ್ ಅಕ್ಕಿ ಕನಿಪ-ಪೆರಿಯವು. ಅಕ್ಕಿ ಕನಿಚಿತಾನನಕೆ, ಬಾಕಿ ಎಲ್ಲಾರೂ ನೆಲ್ಲಕ್ಕಿಕ್ ಅಕ್ಕಿ ಕನಿಪ. ನೆಲ್ಲಕ್ಕಿರ ಕಾಲ್ ಪುಡಿಪ. ಅದಾನದು ಮೂಡಿಕ್, ಮೂಡಿರ ಅವ್ವ ಕ್‌ಣ್ಣಂಗ್, ಕ್‌ಣ್ಣಂಡ ಅವ್ವ ಪಳುವ ಮಾಲೆ ಪೊಮ್ಮಾಲೆ ಇಡುವ. ಅವ್ವ ತಪ್ಪ್‌ಚೆಂಗಿ, ತಮ್ಮಾಯಿಯಳೂ ಪೊಮ್ಮಾಲೆ ಇಡುವ. ಮಂಗಲ ಕರ್ತಿಕ್ ಪೊಮ್ಮಾಲೆ ಇಟ್ಟಿತ್ತಾನ ಪಿಂಞ ಪತ್ತಾಕ್ ಇಡುವ. ಪೊಮ್ಮಾಲೆ ಇಡುವ ಮುತ್ತೈದೆಯ, ತಂಗಡ ಕುಯುಬುರ ಮಧ್ಯಕೂ ಮಂಗಲಕಾರ-

ಮಂಗಲಕರ್ತಿಯಡ ಕುಯುಬುರ ಮಧ್ಯಕೂ ಮೂಂದ್ ಕುರಿ ಅಪ್ಪರ, ಇಪ್ಪರ ಮುಟ್ಟ್‌ಚಿಟ್ಟಂಡ್ ಪೊಮ್ಮಾಲೆನ ಇಡುವ. ಮಂಗಲಕರ್ತಿಕ್ ಪೊಮ್ಮಾಲೆ ಇಟ್ಟಿತಾನದು, ಪತ್ತಾಕ್‌ನೊ-ಕುಯಿಬುರ ಮಧ್ಯಕ್ ಅಪ್ಪರಿಪ್ಪರ ಮುಟ್ಟ್‌ಚಿಟ್ಟಂಡ್ ಇಡುವ. ಮಂಗಲಕಾರಂಗ್ ಪೊಮ್ಮಾಲೆ ಮಾತ್ರ ಇಡುವ. ಪತ್ತಾಕ್, ಪೊಮ್ಮಾಲೆ ಇಟ್ಟಿತಾನದು ಮಂಗಲ ಕೈಯ್ಯುವವು ಪೆರಿಯಯಿಂಡ ಕಾಲ್ ಪುಡಿಪ. ಅಜ್ಞಾಚಕ್ರಕ್ ಅಪ್ಪರಿಪ್ಪರ ಮುಟ್ಟ್‌ಚಿಡುವಾತ್ ವಿಸ್ತಾರವಾನ ಅರ್ಥ ಉಂಡ್‌ಂದ್ ಎಣ್ಣೊಲು.

ಕ್‌ಗ್ಗಟ್ಟ್‌ನಾಡ್‌ಲ್ ಆಚೆಂಗಿ ತೇರಣ ಬೆಪ್ಪ. ನೆಲ್ಲಕ್ಕಿರ ಪಕ್ಕಲ್ ಓರ್ ಸ್ಟೂಲ್ ಬೆಚ್ಚಿತ್ ಮಂಗಲ ಕಯ್ಯುವಯಿನ ಅಳ್‌ಪಿಚಿಟ್ಟಿತ್ತ್ ಅಯಿಂಡ ಅಂಗೈ-ಮೆಂಗಾಲ್‌ಕ್ ಮೂಮ್ಮುಂದ್ ಕುರಿ, ಅರ್‌ತಿತ್ ಅಲ್ಲಿಯೇ ಬೆಚ್ಚ ತೇರಣ ಎಡ್‌ತಂಡ್ ಇಡುವ. ಈ ಎಲ್ಲಾ ಚಡ್‌ಂಗ್ ಕಯಿಂಜಪಿಂಞ ಆ ಮನೆರ ಕೊರವುಕಾರ ನಿಪ್ಪ್‌ಲ್ ಓರ್ ಚಾಲೆಮುಂಡ್ ಇಟ್ಟಂಡ್, ಓರ್ ಚೊಂಬ್ ನೀರ್ ಕೈಲ್ ಪುಡಿಚಂಡ್ ಊರ್ ಕೂಡುವಕ್ ಅಲ್ಲಿ ಕೂಡ್‌ನ ಎಲ್ಲಾರ್‌ಕೂ ಉಂಬಕ್ ಏಳಿಂದೆಣ್ಣುವ. ಪಂಡ್ ಮಂಗಲತ್ ಕೂಳ್ ಬಳ್‌ಂಬುವಿಂಜತ್. ಇಕ್ಕ ಅಯಿಂಗಳೇ ಬಳ್‌ಂಬಿಯಂಡ್ ಉಂಬದ್ ಸುಮಾರ್ ಮಂಗಲತ್ ಕಾಂಗೊಲು. ಕೊಡವ ಪದ್ಧತಿಲ್, ಮೂಡಿರ ಮನೆಲ್ ಮೂಡಿರ ಊರುಕೂಡುವೋ, ಕ್‌ಣ್ಣಂಡ ಮನೆಲ್ ಕ್‌ಣ್ಣಂಡ ಊರುಕೂಡುವೋ. ಪೊಂಬಣ ಕಟ್ಟುವದೂ ಅನ್ನನೆ. ಅದೆಲ್ಲಾ ಆಯಿತ್ ಬೈಟಾಪಕ ಕ್‌ಣ್ಣ, ಮೂಡಿರ ಮನೆಕ್ ಬಂದಿತ್ತ್ ಬಾಳೆ ಮರ್‌ಂಜಿತ್ ಮೂಡಿನ ಕೂಟಿಯಪೋಪ. ಪೊಮ್ಮೂರ್ತಕ್ ಓರ್‌ನಾಳ್‌ಕ್ ಮುಪ್ಪಡೇ ಮಂಗಲ ಕಯ್ಯುವ ಪೊಣ್ಣ್‌ನ ಪೊಮ್ಮಾಲೆ, ಪತ್ತಾಕ್ ಕಟ್ಟಿತ್ ಅಣಿಚಿಡುವದ್ ನೋಟ್ಟಕ ಕೊಡವಡಲ್ಲಿ ಪಂಡ್ ಸ್ವಯಂವರ ಪದ್ಧತಿ ಇಂಜತ್‌ಂದ್ ಎಣ್ಣುವಾತ್ ಸಂಶಯ ಇಲ್ಲೆ. ಊರ್ ಕೂಡುವ ಮಂಗಲತ್ ನಾಲ್ ಕೊಡವ ದುಡಿಕೊಟ್ಟಿಯಂಡ್ ಮಂಗಲ ಪಾಟ್ ಪಾಡುವ. ಮಂಗಲಕಾರ/ ಮಂಗಲಕಾರ್ತಿರ ಅಪ್ಪ-ಅವ್ವ ಅಯಿಂಡ ಪೆರಿಯವು ಬದ್‌ಕ್‌ನಾನ, ಬಾಳ್‌ನಾನ ವಕ್ಕತ್ತ್‌ರ ಕೇಳಿ, ನಾಡ್‌ರ ಕೇಳಿ, ಊರ್‌ರ ಕೇಳಿ ದೇವ, ದೇವಿಯಡ ಕೇಳಿನ ಕೊಂಡಾಡಿಯಂಡ್ ಪಾಡುವ. ಇದಾನದು ಉಂಡಿತ್ತ್-ಕುಡಿಚ್ಚಿತ್ತ್ ಊರ್ ಪತ್ತಿ ಎಡ್‌ತಂಡ್ ಮನೆಕ್ ಪೋಪ. ಊರ್ ಪತ್ತಿ ವಕ್ಕತ್‌ರ ಕೊರವುಕಾರ ಕೊಡ್ ಕೊಂಡುಂದೆಣ್ಣುವ ನಿರ್‌ಕ್ ಉಂಡ್.

ಕೊರವುಕಾರ ಪಟ್ಟೆದಾರಂಗ್ ಕಯ್ಯತ ಪೋಚೆಂಗಿ ಎಳಿಯಯಿಂಗಕ್ ವಹಿಸಿ ಕೊಡ್‌ಪ. ಊರ್‌ರ ಎಲ್ಲಾ ವಕ್ಕಕೂ ಅಂಜಿ ಕೊಡಿಯಲೆ, ಅಂಜಿ ಅಡಿಕೆ, ಅರೆ ಪಾವುರಚ್ಚಕ್ ಪೊರಿ, ಓರ್ ಬಾಳೆ ಪಣ್ಣ್, ಓರ್ ಚೂರ್ ತೆಂಗೆ, ಆಂಗಿಂಜ ಕಮ್ಮಿ

ಇಪ್ಪಕ್ಕಾಗ, ಜಾಸ್ತಿ ಇರೋಲು. ಕೊರವುಕಾರ ಊರ್‌ಕಾರಳ ನೆಲ್ಲಕ್ಕಿ-ಬಾಡೆಲ್ ಕಾಕಿತ್ ಊರ್ ಪತ್ತಿ ಕೊಡ್‌ಪ. ಉಂಬಲ್ಲಿ ಉಂಡಿತಾನದು, ಊರ್‌ಪತ್ತಿ ಕೊಡ್‌ತಿತಾನದು ಕೊರವುಕಾರ "ಎಲ್ಲಾಡ ಕೈಬಾಯಿ, ಒತ್ತಿತಾ, ಎಲ್ಲಾರ್‌ಕೂ ಎತ್ತ್‌ಜಾ"ಂದ್ ಕೇಪದೂ ಓರ್ ಪದ್ಧತಿ. ಊರ್‌ಕಾರ ಪೋನ ಪಿಂಞ ವಕ್ಕಕಾರ ಬೆಂದು ಚಂಜದಿಯ ಕೂಡಿಯಂಡ್. ಮೂಡಿಕ್ ಕೊಡ್‌ಪ ಬಟ್ಟೆ-ಬರಿ ಕಚ್ಚಿ-ಮುಟ್ಟ್ ಪೊನ್ನ್-ಪಣ ಎಲ್ಲಾನೋ ನೆಲ್ಲಕ್ಕಿರಡಿಲ್ ಬೆಚ್ಚಂಡ್ ಪೊಟ್ಟಿದುಂಬ್‌ಚಿಡುವ. ಕ್‌ಣ್ಣಂಡ ವಕ್ಕಕಾರ ಈಡ್ ಬೆಪ್ಪಕ ಎನ್ನೇಂಗಿ ಮಾಲ್, ಪೊನ್ನ್ ಬೆಚ್ಚತಿಂಜಕ ಅದ್‌ನೋ ಪೊಟ್ಟಿಕ್ ಇಡೊಂಡು. ಪಿತ್ಯಾಂದ್ ಪೊಮೂರ್ತತ್‌ರ ದಿವಸ ಪೊಲಾಕ ಮಡಿವಾಳ ಬಂದಿತ್ ಮನೆರ ಎದಿಕೆ ಇಟ್ಟ ಪಂದತಿಂಜ; ನೆಲ್ಲಕ್ಕಿ-ಬಾಡೆರ ತಲೇಕತ್ತಣೆಯೂ ಬೊಳ್‌ತ ಬಟ್ಟೆಲ್ ಮೇಕಟ್ಟ್ ಕಟ್ಟುವ. ಓರೋರ್ ವಕ್ಕಕಾರ ಜಾಸ್ತಿಯೂ ಕಟ್ಟಿಚಿಟ್ಟವದುಂಡ್. ಮೂರ್ತಕ್ ಅಳ್‌ಪ ಮಂಡೆರ ಜಾಗತ್ ಬೊಳ್‌ತ ಮೇಕಟ್ಟ್‌ನ ಚೋಪು ರೇಷ್ಮೆ ವಸ್ತ್ರತಿಂಜ ಮುಚ್ಚುವ. ಈ ಚೋಪು ರೇಷ್ಮೆ ವಸ್ತ್ರತ್‌ರ ಓರ್ ಮೂಲೆಕ್ ಪಣ್ಣ್ ಬಾಳೆಕೊಲೆ, ಇಂಞೋರ್ ಮೂಲೆಕ್ ಓರ್ ತೆಂಗೆ, ಪಿಂಞೋರ್ ಮೂಲೆಕ್ ಬೊಳ್ಳರಿಕಾಯಿ, ನಾಲನೇ ಮೂಲೆಕ್ ಮೂಂದ್ ಕೊಡಿಯಲೆ ಕಟ್ಟಿತ್, ಮಧ್ಯಕ್ ಅಡಿಕೆ ಅಲ್ಲೇಂಗಿ ಅಡಿಕೆ ಪೂವು ಚಿಕ್ಕಿಚಿಡುವ.

ಐನ್ ಮನೆಲ್ ಕ್‌ಣ್ಣ ಊರ್‌ಕೂಡ್‌ನಂಡ ಪಿತ್ಯಾಂದ್-ಊರ್‌ಕೂಡುವಕ ಇಂಜ ಪೊರಪಾಡ್‌ಲ್, ಬೋಜಕಾರಂಡ ಕೈಪುಡ್‌ಚಂಡ್ ಕನ್ನಿಕೋಂಬರೆಕ್ ಪೋಯಿತ್ ಅಲ್ಲಿ ಗುರುಕಾರಣನ ನೆನತಿತ್ ಅಕ್ಕಿ ಇಟ್ಟತ್ತ್, ಬೊಳ್‌ಚ ಕೊಡತ್‌ರ ಕಾಲ್ ಪುಡ್‌ಚಂಡ್, ನೆಲ್ಲಕ್ಕಿ ನಡುಬಾಡೆಕ್ ಬೋಜಕಾರ ಕೈಪುಡಿಚಂಡ್ ಕೂಟಿಯಬಪ್ಪ ಅಲ್ಲಿಂಜ ನೆಲ್ಲಕ್ಕಿ ಬೊಳ್‌ಚಕ್ ಅಕ್ಕಿ ಇಟ್ಟಿತ್ತ್ ನೆಲ್ಲಕ್ಕಿರ ಕಾಲ್‌ಪುಡ್‌ಚಂಡ್. ಅಲ್ಲಿ ಉಳ್ಳ ಪೆರಿಯಯಿಂಗಡ ಕಾಲ್ ಪುಡಿಚಂಡ್, ಚೌರ ಮಾಡುವಕ್ ಅಳ್‌ಪ. ಚೌರ ಮಾಡೋಕ್ ಅಳ್‌ಪೋ ಕೇಕ್‌ಕ್ ಮೂಡ್ ಮಾಡಿತ್ತ್ ಬಿರ್‌ಚ ಪಲ್‌ಂಬ್‌ರ ಮೇಲೆ ಮೂಂದ್ ಕಾಲ್‌ರ ಮುಕ್ಕಾಲಿರ ಕೊಡಿಲ್ ಮಂಗಲಕಾರ ಕ್‌ಣ್ಣ ಅರೆಕ್ ಚ್ಯಾಲೆರ ಬದ್‌ಲ್‌ಕ್ ರೇಷ್ಮೆ ವಸ್ತ್ರ (ವಯಿತ್) ಕಟ್ಟಿಯವ. ಮುಕ್ಕಾಲಿರ ಪಕ್ಕತ್ ಪುತ್ತರಿ ಪಚ್ಚೆಯತ್ ಓರ್ ಸೇರ್ ಅಕ್ಕಿ, ಬಾಳೆ ಪಣ್ಣ್, ತೆಂಗೆ, ಕೊಡಿಯಲೆ, ಅಡಿಕೆ ಬೆಚ್ಚಿತಿಪ್ಪ. ಆಂಡ ಕೂಡ ಬೊಳ್ಳಿ /ಕಚ್ಚಿ ತಳಿಯತ್ ಪಾಲ್, ಆ ಪಾಲ್‌ಕ್ ಗರಿಕೆ ಪಿಲ್ಲ್ ಇಟ್ಟಿತಿಪ್ಪ. ಮುಕ್ಕಾಲಿಲ್ ಅಳ್‌ತಿತ್ತ್ ಮಡ್‌ಕ್ ಚೋಂದ ಬಟ್ಟೆ ಬಿರ್‌ಚವ. ಪೊಮ್ಮೂರ್ತಕ್ ಮುಪ್ಪಡೆ ಕೊಂಬಂಜವರ ಮಾಡುವದ್ ಕೊಡವಡ ಪದ್ಧತಿ. ಕೊಂಬಂಜವರ ಎಣ್ಣಕ ಕೊಂಬ್‌ರನಕೆ ಮಂಡೆರ ತಲ್‌ಮಿನ ಕೀಚುವೊ! (Shape

of horns ) ಹಜಾಮು ಚೌರ ಮಾಡುವಕ ಗರಿಕೆ ಪಿಲ್ಲ್‌ನ ಪಾಲ್‌ಕ್ ಮುಕ್ಕಿಯಂಡ್ ಗಡ್ಡತ್‌ನ ಪುಂಡೆ ಮಾಡಿಯುವ. ನೀರ್ ಕೂಟುಲೆ. ಮಂಗಲಕಾರ ಕ್‌ಣ್ಣಂಡ ಚವುರ ಆನದು ದಂಡಾಳೋ, ನಾಲಾಳೋ ಚೌರ ಮಾಡಿಚಿಟ್ಟವದ್ ಪದ್ಧತಿ. ಮಂಗಲಕಾರ ಕ್‌ಣ್ಣಂಡ ಮಡ್‌ಕ್ ಬಿರ್‌ಚ ಚೋಂದ ಬಟ್ಟೆಲುಳ್ಳ ತಲ್‌ಮಿ. ಕಚ್ಚಿ ತಳಿಯತ್‌ರ ಪಾಲ್‌ನ ಹಜಾಮು ಕೊಂಡ ಪೋಯಿತ್ ಪಾಲ್ ಬಪ್ಪ ಮರತ್‌ರಡಿಕ್ ಇಟ್ಟಿತ್ತ್ ಬಂದಿತ್, ಚೊಂದ ಬಟ್ಟೆನ ಪಲಂಬ್‌ರ ಕೊಡಿಲ್ ಬೆಚ್ಚಂಡ್, ಪುತ್ತರಿಪಚ್ಚಿಯತ್‌ಲಿಂಜನ ಚೋಂದ ಬಟ್ಟೆಲ್‌ಟ್ಟಂಡ್, ಬೊಳ್ಳಿ/ಕಚ್ಚಿ ತಳಿಯ, ಮಂಗಲಕಾರ ಕ್‌ಣ್ಣ ಕೊಡ್‌ತ ಪಣವೂ ಎಡ್‌ತವ. ಪುತ್ತರಿ ಪಚ್ಚಿಯ ತುಳ್ಳಾನ ಮಾತ್ರ ಕೊಡ್‌ಪೊ-ಪಚ್ಚಿಯ ಕೊಡ್‌ಪುಲೆ ಅಲ್ಲಿಂಜ ಮಂಗಲಕಾರ ಕುಳಿಗುಡ್ಡಕ್ ಕುಳಿಪಕ್ ಪೋಪ.

ಕ್‌ಣ್ಣನ ಚೌರಕ್ ಕೂಟಿಯ ಪೋನನಕೆ, ಮೂಡಿರ ಮನೆಲ್ ಮೂಡಿರ ಜೋಜಕಾರ್ತಿ (ಅರುವಂಡ ಪೊಣ್ಣ್, ಅಣ್ಣಂಡ ಪೊಣ್ಣ್) ಮಂಗಲಕಾರ್ತಿ ಮೂಡಿರ ಕೈಪುಡ್‌ಚಂಡ್ ಕನ್ನಿಕೊಂಬರೆಲಕ್ಕಿ ಇಟ್ಟಿತ್ತ್, ಗುರುಕಾರಣನ ತೊತ್ತಂಡ್ ನೆಲ್ಲಕ್ಕಿಕ್ ಅಕ್ಕಿ ಇಟ್ಟಿತ್ತ್, ನೆಲ್ಲಕ್ಕಿ ಬೊಳ್‌ಕ್‌ರ ಕಾಪುಡಿಚಿ, ಕಾವೇರಮ್ಮೆನ ತೊತ್ತಂಡ್ ಬಳೆ ಇಡ್‌ವಕ್, ಬಿರ್‌ಚ ಪಲ್‌ಂಬ್‌ಲ್ ಕೇಕ್‌ಕ್ ಮೊಗವಾಯಿ ಅಳ್‌ಪಿಚಿಡುವ. ಬಳೆ ಇಡುವಲ್ಲಿಯೂ ಪುತ್ತರಿ ಪಚ್ಚಿಯತ್ ಅಕ್ಕಿ, ಬಾಳೆ ಪಣ್ಣ್, ತೆಂಗೆ, ಕೊಡಿಯಲೆ, ಅಡಿಕೆ ಬೆಚ್ಚಿತಿಪ್ಪ. ಬಳೆ ಕಾರ್ತಿ ಬಳೆ ಎಡ್‌ತಂಡ್ ಅವಡ ಮಿಂಞಲ್ ಅಳ್‌ಪ. ಮೂಂದ್, ಅಂಜಿ, ಏಳ್ ಕರ್‌ತ ಬಳೆ ಇಡುವ. ಮಂಗಲ ಕರ್ತಿರ ಕೂಡ ಇಂಞೂ ದಂಡಾಳ್, ನಾಲಾಳ್ ಆರಾಳ್ ಬಳೆ ಇಡಿಚಿಟ್ಟವ. ಬಳೆ ಕಾರತಿ ಕೊಡ್‌ತ ಪಣ, ಪುತ್ತರಿ ಪಚ್ಚಿಯ-ತುಳ್ಳ ಸಾಮಾನ್‌ನ ಪಲಂಬ್‌ನ ಕೊಂಡಪೋಪ. ಪುತ್ತರಿ ಪಚ್ಚಿಯ ಕೊಡ್‌ಪಕ್ಕಾಗ ಎಣ್ಣುವ ನಿರ್‌ಕ್-ನಂಬಿಕೆ ಕೊಡವಡಲ್ಲಿ ಉಂಡ್. ಬಳೆ ಇಟ್ಟಿತ್ತಾನದು ಕುಳಿಗುಡ್ಡಕ್ ಕುಳಿಪಕ್ಕ್ ಪೋಪ.

ಮಂಗಲಕಾರ ಕ್‌ಣ್ಣನ, ಕ್‌ಣ್ಣಂಡ ಕಡೆಕಾರ ಮೂಂದ್ ಮುತ್ತೈದೆಯ, ಮೂಂದ್, ಮೂಂದ್ ಚೆಂಬು ನೀರ್ ಬೂಕಿತ್ತ್ ಕುಳಿಪಿಚಿಡುವ. ಅನ್ನನೇ ಮಂಗಲಕರ್ತಿ ಮೂಡಿನ ಮೂಡಿರ ಕಡೆಕಾರ, ಮೂಂದ್, ಮೂಂದ್ ಚೆಂಬು ನೀರ್ ಬೂಕಿತ್ತ್ ಕುಳಿಪಿಚಿಡುವದ್ ಪದ್ಧತಿ.

ದುಡಿಕೊಟ್ಟಿಯಿಂಡ್ ಬಟ್ಟೆಪಾಡ್
ಮಂಗಲ ಪಾಟ್ ಪಾಡಿಯಂಡ್... ಇನ್ನನೆ ಮಿಂಞಕ್ ಪಾಡುವ
ಬಾಳೋ ಕೇಳಿ ಚಂಜದಿ
ಚಂಜದಿ ಮನ ವೇಂಗಿ

ಇಂದಿಯ ದಿನತ್‌ಲ್
ಅಯ್ಯಣ್ಣ ಬೈಂಬನ
ಮಣ್ಣಿರುವ ಬಾಲನ್
ಕೈಪ್ಪಡಿಚಿ ಕೊಂಡಿತ್ತ್
ಕನ್ನಿಮೂಲೆ ಕೊಂಬರೆ
ಅಲ್ಲಿ ಪೋಯಿ ನಿಂದಿತ್ತ್
ಪೊಂಬೊಳಕ್ ಬೆಚ್ಚಾಂಗ್
ಸಣ್ಣಕ್ಕಿ ಕನ್‌ಚಿತ್ತ್
ಕೈಮಲಂಗಿ ತೊತ್ತಿತ್ತ್
ಅಲ್ಲಿಂಜ ಪೊರಟಿತ್
ಕನ್ನಿ ಮೂಲೆ ಕಂಬ್‌ಕ್
ಸಣ್ಣಕ್ಕಿ ಕನ್‌ಚಿತ್
ಕಾತೊಟ್ಟ್ ತೆಲೆ ಬೆಚ್ಚಿ
ಅಲ್ಲಿಂಜ ಪೊರಟಿತ್
ನೆಲ್ಲಕ್ಕಿ ನಡುಬಾಡೆ
ಅಲ್ಲಿ ಬಂದ್ ನಿಂದಿತ್ತ್
ಕಾರಣೋರ ತೊತ್ತಿತ್ತ್
ಪೊಂಬೊಳಕ್ ನಲ್ಲಾಂಗ್
ಸಣ್ಣಕ್ಕಿ ಕನಿಚಿತ್
ತನ್ನ ಪೆತ್ತ ಅವ್ವಂಡ
ಕಾತೊಟ್ಟ್ ತಲೆ ಬೆಚ್ಚಿ
ಅಲ್ಲಿಂಜ ಪೊರಟಿತ್
ಕೊಂಬಂಚೌರ ಮಾಡ್‌ನ
ಅಕ್ಕಣೆಕ್ ಚಂಜದಿ
ಮಣ್ಣಿರುವ ಪೊಂಗಳೊ
ಕೆತ್ತ್‌ಕಲ್ಲ್ ಗುಡ್ಡತ್
ಕುಟ್ಟುವತ್ ನೀಕಾಚಿ
ಪಾತ್‌ರ ತಳುವಾಯಿ
ಅಚ್ಚು ತಾಳಿ ನಲ್ಲಾನ

ಎಲ್ಲಾ ಜೋಡು ಕೂಟಿಂಜ
ಅಕ್ಕಣೆಕ್ ಅಯ್ಯಣ್ಣ
ಅಯ್ಯಣ್ಣಂಡ ಚಂಜದಿ
ಅಲ್ಲಿ ಬಂದಿತೆತ್‌ನ
ಈನಂಗುಂಡ್ ಪೋರಾಂದ್
ಮೂವರುಳ್ಳ ಪೊಂಗಳೊ
ಅಯ್ಯಣ್ಣ ಬಯಿಂಬನ
ಪೊಂಗುಳಿ ಕುಳಿಪಿಚಿ
ಮಾಜುತ್ತಿ ಮಡಿಪಾಂದ
ಈನಂಗುಂಡ್ ಪೋರಾಂದ್
ಬೋಜಕಾರ ಬಾಲನೊ
ಅಯ್ಯಣ್ಣ ಬಯಿಂಬಂಗ್
ನೇರಪೋಲೆ ಕುಪ್ಪಾಯ
ನೆತ್ತಪೋಲೆ ತೊಪ್ಪಾಯ
ಪಾನಿಮಂಡೆ ಕೆಟ್ಟಾಯಿ
ಬಳ್ಳಿಯನಡುವುಕ್
ಕನ್ನಡಿ ತೊಡಂಗ್‌ನ
ಪಾಂಗೋಡೆ ಕೊಳತಿತ್
ಚೂರಿಯ ಚಳ ಕತ್ತಿ (ಚೂರಿಯ ಕತ್ತಿ–ಒಡಿಕತ್ತಿ, ಚಳಕತ್ತಿ–ಪೀಚೆಕತ್ತಿ)
ಶೀಲರಿಂಜಿ ಕೆಟ್ಟಿತ್
ಕಟ್ಟಿ ಬಳೆ ನಲ್ಲಾನ
ಪಾಂಗರಿಂಜಿತ್‌ಟ್ಟಿತ್
ಕೈಬೆರನಲ್ಲಾಂಗ್
ವಜ್ಜರತ್‌ಡಿಬೆಚ್ಚ
ಪೊಮ್ಮೋದಿರಲ್‌ಟ್ಟಿತ್ತ್
ಕೋಳಿ ಕೊರ ನಲ್ಲಾಂಗ್
ಏಳ್ ತೊರೆ ಪೊಮ್ಮಾಲೆ
ಬೋಜತ್ತೋಡೆ ಚೂಡಿತ್ತ್
ಬೋಜಂಗೊಂಡಣೆಂಜಿತ್

ಗೆಜ್ಜೆ ತಂಡ್ ಕೈಲಾಯಿ
ಮಿಂಞಬಯ್ಯ ಆಳಾಯಿ..... [43]

ಮಂಗಲಕಾರಂಗೂ ಪಲಂಬು ಬಿರ್‌ಚಿತ್ತ್ ಅಳ್‌ತವಕ್ ಪಲಂಬುರ ಮೇಲೆ ಸ್ಟೂಲ್ ಬೆಚ್ಚಿತಿಪ್ಪ, ಕ್‌ಣ್ಣ ಬೊಳ್‌ತಕುಪ್ಪಿಯ ಪುದಿಯದ್ ಇಡುವ. ಒಳಿಯ ಬೊಳ್‌ತ ಬಟ್ಟೆ ಇಡುವ ಪಂಡ್ "ನೇರ ಪೋಲೆ ಕುಪ್ಪಾಯ" ಎಣ್ಣಕ ಚೂರಿಯಂಡ ಪೋಲೆ ಚೋವು ಕುಪ್ಪಿಯ "ನೆತ್ತ ಪೋಲೆ ತೊಪ್ಪಾಯ" ಚೊಂದ ಚೋರೆ ಪೋಲೆ ಮಂಡೆಕ್ ಪಾನಿಮಂಡೆ ಕಟ್ಟ್‌ನ-ಮಂಡೆತುಣಿ ಮಂಗಲಕಾರ ಇಡುವಯಿಂಜತ್‌ಎಂದ್ ಬಾಳೋಪಾಟ್‌ಲ್ ಪಾಡುವ. ಪಂಡ್ ಕೊಡವ ಮಂಗಲಕಾರ ಚೋಪು, ಆರೇಂಜ್ ಕುಪ್ಯ, ಚೋಪು ಮಂಡತುಣಿ ಇಡುವಂಜಿಯೆ. ಮಂಗಲಕ್ ಪೋಪವು ಪಟ್ಟ್ ಪೊಡಿಯತ ಮಾದರಿ ಇಪ್ಪ ನೀಲಿ, ಚೋಪು, ಪೊನ್ನ್‌ರ ರಂಗ್ ಇಪ್ಪ ಪಟ್ಟ್ ಕುಪ್ಯ (ರೇಶ್ಮೆ ಕುಪ್ಯ). ಮಂಗಲತ್‌ನಂತ ನಲ್ಲ ಕಾರ್‌ಬಾರ್‌ಕೂ, ಮನೆಲಿಪ್ಪಕ ನೀಲಿ-ಕಾಟನ್‌ರ ಕುಪ್ಯ ಚ್ಯಾಲೆ ಇಡುವಇಂಜತ್.

Red colour Seems to have greater ritual value than white and silk greater ritual value than cotton. For instance, at a wedding the ceiling of the Sacred Central hall is Covered with White Cloths, except for the past Just above the bridal seat which is Covered with red Clothes. All the bride's Clothes are of red silk, and according to the ancient marriage song the groom wore a red silk gown & red silk turben[44].

ಚುರ್‌ಂಗ್‌ನ ನಡುಕ್ ಬಳ್ಳಿರನಕೆ ಕಟ್ಟ್‌ನ ಚ್ಯಾಲೆಕ್ ತೊಡಂಗ್‌ನ ಕೊಳತಿತ್, ಒಡಿಕತ್ತಿ ಬೆನ್ನ್‌ರ ಬರಿಕ್ ಕೆಟ್ಟುವ. ಅರೆಕ್ ಪೀಚೆಕತ್ತಿ ಚಿಕ್ಕಿಚಿಡುವ. ಅರೆಕ್ ಇಡುವ ತೊಡಂಗ್, ಒಡಿಕತ್ತಿ, ಪೀಚೆಕತ್ತಿ, ಅರೆ ಚಂಜೋಲೆ ಎಲ್ಲಾ ಬೊಳ್ಳಿರದೇ ಆಯಿತಿಪ್ಪ. ಕೈಕ್ ಪೊನ್ನ್‌ರ ಕಟ್ಟಿ ಬಳೆ, 'ಕಡಕ್' ಕೆಮಿಕ್. ಮಂಡೆತುಣಿರ ಮೇಲೆ ಚೋಪು ಮುಸ್‌ಕೊಲ್ಲಿ. ಇದೆಲ್ಲಾ ಆನದು ಬೋಜಕ್ಕಾರ ಕ್‌ಣ್ಣಂಡ ಕೈಲ್ ಗೆಜ್ಜೆ ತಂಡ್ ಕೊಡ್‌ಪ. ಇಚ್ಚಕ್ ಆನದು ಕ್‌ಣ್ಣಂಡ ಪೆತ್ತ ಅವ್ವನೋ, ತಮ್ಮಾಯಿಯೋ ಮುತ್ತೈದೆ ಬಂದಿತ್, ಕ್‌ಣ್ಣಂಡ ಬೋಳೆಕ್ ಕೊಕ್ಕೆತಾತಿ ಇಟ್ಟಿತ್ ಪೂಮಾಲೆ ಇಡುವ. ಕೊಕ್ಕೆತಾತಿ, ಪೂಮಾಲೆ ಇಟ್ಟಯಿಂಡ ಕಾಲ್‌ನ ಮಂಗಲಕಾರ ಕ್‌ಣ್ಣ ಮೂಂದ್‌ಕುರಿ ಪುಡಿವ,

43 ಪಟ್ಟೋಲೆ ಪಳಮೆ – ನಡಿಕೇರಿಯಂಡ ಚಿಣ್ಣಪ್ಪ P.No.113
42,44 Religion & Society among Coorgs. M.N. Srinias

ಪೊರಮೆ ಕಾಲ್ಇಡ್‌ವಾಂಗ್ ಮುಪ್ಪಡೇ ಕೊಡಿಯಲೆ ಅಡಿಕೆತಿಂಬ. ಕೊಡಿಯಲೆ ಎಚ್ಚಕೋ ಕಾಯಿಲೆಕ್ ಮದ್ದ್ ಆಯುರ್ವೇದತ್. ಕೂಟ್‌ಕ್ ಮಂಗಲಕಾರ–ಮಂಗಲಕಾರ್ತಿ ಕೊಡಿಯಲೆ–ಅಡಿಕೆ ತಿಂದಕ ಅಯಿಂಡ ತಡಿ ಉಷ್ಣತ್ ಇಪ್ಪಾಂದ್ ಎಣ್ಣುವ ವೈಜ್ಞಾನಿಕತೆ ಇಲ್ಲಿ ಉಂಡ್‌ಂದ್ ಎಣ್ಣೊಲು.

ಕ್‌ಣ್ಣನೇ ಆಡ್, ಮೂಡಿನೇ ಆಡ್, ಕುಳಿಗುಡ್ಡತಿಂಜ ಪೊಮ್ಮೂರ್ತಕ್ ಅಳ್‌ಪ ಜಾಗಕ್ ಕೂಟಿಯ ಪೋಪಕ ತಳಿಯಕ್ಕಿ ಬೊಳಕಾಯಿ, ದುಡಿಕೊಟ್ಟಾಯಿತ್ ಒಡ್ಡ್ ಓಲಗ ಆಯಿತ್ ಪೋಪೊ ಪಂಡ್ ನಾಲ್ ಪೊಣ್ಣಾಳ್ ತಾಳ ಇಟ್ಟಂಡ್ ಬಟ್ಟೆಪಾಟ್ ಪಾಡುವ ಇಂಜತ್ ದುಡಿಕೊಟ್ಟ್‌ಕಾರ ಆದ್ಯ ಬಟ್ಟೆಪಾಟ್ ಪಾಡುವ, ಪೊಮ್ಮುರ್ತಕ್ ಅಳ್‌ತಲ್ಲಿ ಮಂಗಲ ಪಾಟ್‌ಪಾಡುವ.

ಕ್‌ಣ್ಣಂಗ್, ಕ್‌ಣ್ಣಂಡ ಬೋಜಕಾರನೂ, ಮೂಡಿಕ್ ಮೂಡಿರ ಬೋಜಕಾರ್ತಿಯೂ, ಬೊಳ್‌ತ ಗೌಸ ಇಟ್ಟ ಕೊಡೆ ಪುಡಿಕೊಂಡು. ಮನೆ ರೊಳ್‌ಕ್ ಕೂಡ್ವಕ ಕೊಡೆನ ಮಡ್‌ಕಿಯವ ಪಟ್ಟಂಜ ಮೂರ್ತಕಳ್‌ಪ ಜಾಗಕತ್ತಣೆ ಬೊಳ್‌ತ ಮಡಿ ಬಟ್ಟೆ ಬಿರ್‌ಚಂಡ್ ಪೋಪ ಮಡಿ ಬಟ್ಟೆ ಚವುಟುವಾಂಗ್ ಮುಪ್ಪಡೇ ಮೂಡಿಯಳೋ, ಮುತ್ತೈದೆಯಳೋ ಮಂಗಕಲಕಾರ–ಕರ್ತಿರ ಕಾಲ್ ಕತ್ತುವ.

ಮಂಗಲಕಾರ್ತಿ ಮೂಡಿಕ್ ಅವಡ ಚೋಜಕಾರ್ತಿಯೂ, ಮಂಗಲಕಾರ ಕ್‌ಣ್ಣಂಗ್ ಅವಂಡ ಬೋಜಕಾರ ಪೊರ್‌ಡ್‌ಚಿಡುವದ್ ಪದ್ಧತಿ. ಕುಳಿಗುಡ್ಡತ್ಲ್ಲೇ ಪಲ್‌ಂಬು ಬಿರ್‌ಚಿತ್ತ್ ಮೂಡಿ ಕ್‌ಣ್ಣ ಅಳ್‌ತವಕ್ ಸ್ತೂಲ್ ಚೆಚ್ಚಿತಿಪ್ಪ ಮಂಗಲ ಕರ್ತಿ ಚೋಂದ ಕಳಕುಪ್ಯ ಚೋಂದ ಬೊಟ್ಟ್‌ಪೊಡಿಯ ಉಡ್‌ಪ.

ನೆತ್ತಿಕ್ ಪೊಂಗುರಿ, ಕಣ್ಣ್‌ಕ್ ಕಾಡಿಯ ಇಡುವ.

ಬೋಳೆಕ್–ಏಳ್‌ತೊರ ಪೊಮ್ಮಾಲೆ, ಪತ್ತಾಕ್, ಅಡ್ಡಿಗೆ, ಜೋಮಾಲೆ, ಕೊಕ್ಕೆತಾತಿ, ಚಂಜೋಲೆ

ಕೆಮಿಕ್– ಓಲೆ, ಜುಮುಕಿ, ಬುಗುಡಿ, ಕೊಂಡೊಳ ಇಡುವ

ಕೈಕ್ – ಕಡಗ, ಪಿಂಬಳೆ–ಕೈಪಿಲ್ಲಿ, ಪೊಂಮೊಯಿರ ಇಡುವ

ಕಾಲ್‌ಕ್ – ಪಾಡ್‌ಗ, ಕಾಪಿಲ್ಲಿ, ಕಾಮೊಯಿರ ಇಡುವ

ಜಡೆಕ್ – ಮಂಡೆ ಊಕೊಂಜಿ, ಪೌನ್‌ರ ಏಳ್ ಜಡೆಬಿಲ್ಲೆ ಇಟ್ಟಿತ್ತ್ ಜಡೆನ ಮುರ್‌ಕಿ ಕಟ್ಟುವ. ಪಂಡ್ ಚೂರಿಯ, ಅರೆ ಚಣ್ಣೂರ ಜಡೆ ಎಡ್‌ತ ನಾತಂಡ ಚಿತ್ತ್‌ರ ಉಳ್ಳ ಜಡೆ ಬಿಲ್ಲೆ ಇಪ್ಪಯಿಂಜತ್‌ಂದ್ ನಾಡವ್ವ ಎಣ್ಣುವಯಿಂಜತ್. ಚೂರಿಯ, ಚಣ್ಣೂರ ಜಡೆ ಎಡ್‌ತ ನಾತಂಡ ಮಂಡೆ, ಉಳ್ಳ ಜಡೆ ಬಿಲ್ಲೆನ ಉಟ್ಟಿ ಮಂಡೆಕ್ ಆದ್ಯ ಬೆಪ್ಪಯಿಂಜತ್. ಅಲ್ಲಿಂಜ ಜಡೆಕ್ ತಾವರೆ, ಆಮೆ–ನಕ್ಷತ್ರತ್‌ರ ಚಿತ್ತ್‌ರ ಉಳ್ಳ

ಬಿಲ್ಲೆನ ಜಡೆಕ್ ಬೆಚ್ಚಿತ್, ಜಡೆನ ಮುರ್‌ಕಿತ್ ಕುಚ್ಚಿ ಇಟ್ಟಿತ್ತೇ ಕೆಟ್ಟುವಾನ ನೋಟ್‌ನಕ ಪುರಾಣತ್ ಮಂದರ ಕುಂದ್‌ಕ್ ವಾಸುಕಿನ ಸುತ್ತಿಯಂಡ್ ಮಾಕಡ ಕಡ್‌ಂದ ಕಾಲತ್ ಲೋಪಾಮುದ್ರೆ, ದೇವಕ್ ಅಮೃತಕ್‌ಟ್ಟುವನಕೆ ಸಾಯ ಮಾಡ್‌ನದ್‌ಂಡ ಸೂಚನೆಂದೆಣ್ಣುವನೆಕೆಯೂ, ಅದೇ ಲೋಪಾಮುದ್ರೆರ, ಮೋವಡ ಸಂತಾನ ಕೊಡವಾಂದೂ, ಎಣ್ಣುವ ಸೂಚನೆ ಈ ಪದ್ಧತಿಲ್ ಕಾಂಗೊಲು.

ಕೊಡವಡ ಪತ್ತಾಕ್‌ಲೂ, ಕೊಕ್ಕೆತಾತಿಲೂ ಜಡೆ ಎಡ್‌ತ್‌ನಿಂದ ನಾತನ ಇಕ್ಕಲೂ ನಂಗ ಕಾಂಗೊಲು, ಕೊಕ್ಕೆತಾತಿ ಎಣ್ಣಕ ಅರೆ ಚಣ್ಣೂರಂದೇ ಅರ್ಥ. ಈ ಮಾಲ್‌ಮಟ ಎಲ್ಲಾ ಮಂಗಲಕರ್ತಿ ಅಣೆಂಜಿತಾನದು ಪೆತ್ತವ್ವ ಇಲ್ಲೇಂಗಿ ತಮ್ಮಾಯಿಯ, ಅವ್ವಂಡ ಅಕ್ಕತಂಗೆ–ಮುತ್ತೈದೆಯಾಯಿತುಳ್ಳವು, ಗುರು ಕಾರಣನ, ಕಾವೇರಮ್ಮೆನ ನೆನತಿತ್ ಓರ್ ಪೂಮಾಲೆ ಮಂಗಲ ಕರ್ತಿರ ಬೋಳೆಕ್ ಇಡುವ. ಮಂಗಲಕರ್ತಿ ಪೂಮಾಲೆ ಇಟ್ಟ ಅವ್ವಂಡ ಕಾಲ್ ಪುಡಿಚಿತ್ ಮೂರ್ತಕ್ ಪೊರಡುವಾಂಗ್ ಮುಪ್ಪಡೇ ಕೊಡಿಯಲೆ ಅಡಿಕೆ ತಿಂಬ. ಇದೇ ಸಮಯತ್ ಅರುವಂಡ ಪೊಣ್ಣ್ ಅಲ್ಲೇಂಗಿ ಅಯಿಂಡ ವಕ್ಕಕಾರ ಪೊಮ್ಮೂರ್ತಕ್ ಅಳ್‌ಪ ಜಾಗತ್ ತೆಕ್ಕ್ (South) ಂಜ, ಬಡ್‌ಕ್‌ಕ್ (NORTH) ದಂಡ್ ಅಲ್ಲೇಂಗಿ ಮೂಂದ್ ಪಲ್‌ಂಬ್ ಬಿರಿಪ. ಆಂಡ ಮೇಲೆ ಮಡಿವಾಳ ಜಮ್‌ಖಾನ ಬಿರಿಪ. ಆಂಡ ಮಧ್ಯತ್ ಅರುವಂಡ ಪೊಣ್ಣ್ ಮುಕ್ಕಾಲಿಯೊಂದ್ ಬೆಪ್ಪ. ಆಂಡ ಮೇಲೆ ಮಡಿವಾಳ ಚೋಂದ ವಸ್ತ್ರ ಬಿರಿಪ. ಅರುವಂಡ ಪೊಣ್ಣ್ ಮಧ್ಯತ್ ಬೆಚ್ಚ ಮುಕ್ಕಾಲಿರ ದಂಡೂ ಬರಿಲ್ ದಂಡ್ ಮೂಕ್ಕಾಲಿ ಬೆಚ್ಚಿತ್ತ್ ಆಂಡ ಮೇಲೆ ಓರೊಂದ್ ಬೊಳ್ಳಿರ ಇಲ್ಲೇಂಗಿ ಕಚ್ಚಿರ ತಳಿಯಕ್, ಆಪಚ್ಚಕ್ ದುಂಬ ಸಣ್ಣಕ್ಕಿ ಇಟ್ಟಿತ್ತ್ ಆಂಡ ಮೇಲೆ ಪಾಲ್‌ದುಂಬ್‌ನ ಕ್‌ಂಡಿನ ಬೆಪ್ಪ. ತಳಿಯಕ್ಕಿ ಬೊಳ್‌ಚ ಕತ್ತಿಯಂಡಿರೊಂಡು. ಕುತ್ತ್‌ಬೊಳಕ್ ಕತ್ತಿಚಿಡುವ. ಕ್‌ಣ್ಣಂಡ ಬೋಜಕಾರ ಬೊಳ್‌ತ ಕೊಡೆ ಗೌಸ ಇಟ್ಟ ಕೊಡೆನ ಬೀತಿ ಪುಡ್‌ಚಂಡ್ ಕ್‌ಣ್ಣಂಡ ಕೈನೋ ಪುಡ್‌ಚಂಡ್, ಮಡಿಯೋಳ ನಡ್‌ಪ ಬಟ್ಟೆಕ್ ಇಟ್ಟ ಮಡಿಬಟ್ಟೆರ ಮೇಲೆ ಮನೆರ ಮೊಟ್ಟ್‌ಕತ್ತಣೆ ಪೋಪ. ಮನೆರ ಮೊಟ್ಟ್ ಪತ್ತುವಕ ಓರ್ ಚೆರಿಯ ಮೂಡಿ ಕುಂಞಿ ಮಂಗಲಕಾರಂಡ ಕಾಲ್‌ಕ್ ನೀರ್ ಬೂಕುವ. ಮಂಗಲ ಕರ್ತಿಕೂ, ಬೋಜಕಾರ್ತಿ ಇನ್ನನೇ ಮಾಡುವ. ಕೊಡವ ಮಡಿಮಾಡ್ವಕೋ, ಹೋಮ ಇಡ್ವಕೋ ಮಂಗಲಕಾರಿಯತ್ ಪಟ್ಟಮಳ ಕಾಕುಲೆ ಮಡಿವಾಳ ಚೌಳ್ ತಳ್‌ಚಿತ್ ಮಡಿ ಮಾಡುವದೇ ಮಡಿ.

ನೆಲಕ್ಕಿ ನಡುಬಾಡೆಕ್ ಬಂದದು ನೆಲ್ಲಕ್ಕಿ ಬೊಳ್‌ಚಕ್ ಅಕ್ಕಿ ಇಟ್ಟಿತ್ತ್, ನೆಲ್ಲಕ್ಕಿರ ಕಾಲ್ ಪುಡಿಚಿತ್ತ್ ಮೂರ್ತಕ್ ಅಳ್‌ಪ ಜಾಗತ್‌ರ ಸುತ್ತ ಮೂಂದ್ ಕುರಿ ಸುತ್ತಿತ್

ಮುಕ್ಕಾಲಿಲ್ ಅಳ್‌ಪಾಂಗ್ ಮುಪ್ಪಡೇ ಮುಕ್ಕಾಲಿರ ಬಯ್ಯತ್ ಕೇಕ್‌ಕ್ ಮೊಗವಾಯಿ ನಿಂದಂಡ್, ಮುಕ್ಕಾಲಿಕ್ ಮೂಂದ್ ಕುರಿ ಅಕ್ಕಿ ಇಟ್ಟಿತ್ತ್ ಮುಕ್ಕಾಲಿರ ಕಾಲ್ ಪುಡ್‌ಚಂಡ್, ಬಲತ ಕಾಲ್‌ನ ಮುಕ್ಕಾಲಿರ ಕೊಡಿಯ ಅಬರಿ–ಈಬರಿ ದಂಡ್ ಕುರಿ ದಾಟ್‌ಚಿಡುವಂಜಿ, ಮೂಂದನೆ ಕುರಿಕ್ ದಂಡೂ ಕಾಲ್‌ನ ಮುಕ್ಕಾಲಿರ ಅಬರಿಕಿಟ್ಟಿತ್ತ್ ಅಳ್‌ಪಕ ಕ್‌ಣ್ಣ–ಮಂಗಲಕಾರನಾಚೆಂಗಿ ಅವಂಡ ಬಯ್ಯಕ್ಕ್ ಚಿಕ್ಕಿಚಿಟ್ಟಿತ್ತ್ ಉಳ್ಳ ಒಡಿಕತ್ತಿನ ಬೋಜಕಾರ ಎಡ್‌ತಿತ್ತ್ ಓರ್ ಬರಿಲ್ ಬೆಪ್ಪ. ಮಡ್‌ಕ್ ಚೋಂದ ರೇಷ್ಮೆ ವಸ್ತ್ರ ಬಿರಿಪ, ಪಣ, ಪೊನ್ನ್, ಎಚ್ಚರ ಮಾಡಿಯವಕ್ ಮೂಡಿರ ಅಲ್ಲೇಂಗಿ ಕ್‌ಣ್ಣಂಡ ತಮ್ಮಾವಂಗ ಪಣ–ಪೂನ್ನ್‌ರ ಪಕ್ಕ ಅಳ್‌ಪ.

ಐನ್‌ಮೆನರ, ಮುಂದ್‌ಲ್ ಪೊಮ್ಮೂರ್ತ ಮಾಡ್ವದಾಚೇಂಗಿ ಮಂಗಲ ಆಪಯಿನ ಮೂಡಿ ಅಲ್ಲೇಂಗಿ ಕ್‌ಣ್ಣನ ಎಡ್‌ತಂಡ್ ಐಮರ ದಾಟ್‌ಚಿಡೊಂಡು. ಪಣ ಕೆಟ್ಟುವತ್ ಆದ್ಯ ಹಕ್ಕ್ ಪೊಣ್ಣಾಳ್‌ಕೇ! ಪೆತ್ತವ್ವಂಗ್! ಪೆತ್ತವ್ವ ಪೊಂಬಣ/ ಪೊನ್ನುಳ್ಳ ಚೇಲಪಣ ಮೂಡಿಕ್ ಕೆಟ್ಟುವ. ಪೊಂಬಣ ಕಟ್ಟುವಕ ದಂಡ್‌ಕೈಲ್ ಅಕ್ಕಿ ಎಡ್‌ತಂಡ್, ಕೇಕ್‌ಕ್ ಮೊಗವಾಯಿ ನಿಂದಂಡ್ ಚೂರಿಯನ ತೊತ್ತಿತ್ತ್ ಚೂರಿಯಂಗ್ ಮೂಂದ್ ಕುರಿ ಅಕ್ಕಿ ಇಟ್ಟಿತ್ತ್, ಅಯಿಂಡ ಬಲತ ಬರಿಕಾಯಿತೆ ಬಯ್ಯಕ್ ತಿರಿಕ್ (Clock Wise) ಕೈಲ್ ಬಾಕಿ ಉಳ್ಳ ಅಕ್ಕಿಕ್ ಇಂಞೂ ಚೆನ್ನ ಅಕ್ಕಿ ಕೂಟಿಯಂಡ್ ಮಂಗಲ ಕಾರ–ಕರ್ತಿರ ಮೊಣಕಾಲ್, ನಡು, ನಿಪ್ಪುನ–ಅಕ್ಕಿಯೋಡೆ ತ್‌ಂಡಿಯಂಡ್, ಕೈಯಿಲುಳ್ಳ ಅಕ್ಕಿ ಚೆಲ್ಲಿಯಂಡೆ ಇಪ್ಪ. ಮಂಡೆಕ್ ಅಕ್ಕಿ ಇಡುವಂಜಿ, ಕ್‌ಂಡಿಲ್ ಬೆಚ್ಚ ಪಾಲ್‌ನೆಡ್‌ತಂಡ್, ಬಲತಕೈರ ಮೊಣಕೈಕ್, ಎಡ್‌ತ ಕೈನೋ ಕೂಟಿಯಂಡ್, ಮಂಗಲಕಾರ–ಕರ್ತಿರ ಬಾಯಿಕ್ ಕ್‌ಂಡಿಪಾಲ್ ಕೊಡ್‌ಪೂ. ಪಾಲ್ ಕೊಡ್‌ತಿತ್ತಾನದು ಪೊಂಬಣ/ಚೇಲಪಣಕ್ ಅಕ್ಕಿಕೂಟಿಯಂಡ್ ಮಂಗಲಾಪಯಿಂಡ, ದಂಡ್ ಕೈಕ್ ಪುಡಿಪಿಚಿಡುವ. ಮಂಗಲ ಆಪವು ಪೊಂಬಣ ಕೆಟ್ಟ್‌ನವಂಡ ಮೂಂದ್‌ಕುರಿ ಕಾಲ್ ಪುಡಿಪ. ಪೊಂಬಣತ್‌ನ ಪದ್ಧತಿ ಪೋಲೆ ಮೂಂದಾಳ್, ಅಂಜಾಳ್, ಏಳಾಳ್ ಕಟ್ಟುವ.

ಮೂಡಿ ಕುಂಞಿರ, ಮಂಗಲ ಆಚೇಂಗಿ ಪೊಂಬಣ ಚೇಲತ್‌ನ ಮಂಗಲ ಕರ್ತಿರ ಮೊಲ್ ಕಟ್ಟ್‌ಕ್ ಅವ್ವನೇ ಕೆಟ್ಟುವ, ಕ್‌ಣ್ಣಕುಂಞಿ ಮಂಗಲಕಾರನಾಚೆಂಗಿ, ಅಳ್ಳ ಮಡ್‌ಲ್ ಕುಪ್ಪಿಯತ್‌ರ ಒಳ್‌ಲ್ ಎದೆರ ಪಕ್ಕ ಬೆಚ್ಚವ. ಮಂಗಲಕ್ ಬಂದವು ಎಲ್ಲಾ ಮಂಗಲಾಪಯಿಂಡ ಮಂಡೆಕ್ ಅಕ್ಕಿ ಇಟ್ಟಿತ್ ಪಣ ಕಟ್ಟುವದ್ ಕೊಡವಡ ಪದ್ಧತಿ, ಮಂಗಲಾಪವು ಬಗ್ಗಿತ್ ಪಣ ಕಟ್ಟ್‌ನಯಿಂಡ ಕಾಲ್ ಪುಡಿಪ. ಎಲ್ಲಡ ಪಣ ಕಟ್ಟಿತಾನದು, ಬೋಜಕಾರ–ಕರ್ತಿ, ಮಂಗಲಕಾರ–ಕರ್ತಿರ ಕೈಪುಡ್‌ಚಿತ್

ಎಪ್ಪಿಯಂಡ್ ಅಯಿಂಡಂಡ ಕೊಂಬರೆಕ್ ಕೂಟಿಯಂಡ್ ಪೋಪ. ಈಂಡ ಎಡೆಲ್ ಕೂರ್‌ಂಗೊದಿ ಮುರಿಪ ಪದ್ಧತಿಯೂ ಉಂಡ್. ಇದ್‌ಮೂಡಿ ಕುಂಞಿಯಡ ತಾಮನೆಲುಳ್ಳ ಹಕ್ಕ್‌ನ ಎಣ್ಣುವ.

ಪಣಕಟ್ಟುವದ್ ಮಂಗಲಕೈಪಯಿಂಗಕ್ ಊರ್-ನಾಡ್ಕಾರ ಒರ್ ತರತ್ ಪಣತ್‌ರ ಸಾಯ ಮಾಡ್‌ನನಕೆ! ಅರುವನೂ ವಕ್ಕಕಾರಳೂ ಮಂಗಲತ್‌ನಂತ ಬಲ್ಯ ಕಾರ್‌ಬಾರ್‌ಲ್ ಒರ್ ಬಲ್ಯ ಸಾಯಂದೇ ಎಣ್ಣೊಲು! ಕೊಡವ ಪೆರಿಯಯಿಂಡ ಪ್ರತೀಯೋರ್ ಚಡ್‌ಂಗ್‌ಲು ಸಮಾಜಿಕ ಜೀವನತ್‌ಲುಳ್ಳ ನಂಬಿಕೆ, ಸಮಾಜಕೋರ್ ಸಾಯ ಆಪದಲ್ಲತೇ ಕೇಡ್‌ವುಳ್ಳ ಸಂಪ್ರಾದಾಯ, ಒಬ್ಬಂಗ್ ಕೇಡ್‌ಮಾಡುವ ಸಂಸ್ಕೃತಿ ಕೊಡವಡಲ್ಲಿ ಇಲ್ಲೇಂದ್ ಎಣ್ಣೊಲು. ಮೂರ್ತತ್‌ಂಜ ಎದ್ದ ಪಿಂಞ ಒಕ್ಕತ್‌ರ ಕೋರುವುಕಾರನೋ, ಪಟ್ಟೇದಾರನೋ, ನಿಪ್ಪುಲ್ ಚಾಲೆಮುಂಡ್ ಕೈಲ್ ನೀರ್ ಚೊಂಬು ಪುಡ್‌ಚಂಡ್ ಮಂಗಲಕ್ ಬಂದ ಬೆಂದು, ಚಂಜದಿಯಳ ಉಂಬಕ್ ಏಳೀಂದ್ ಎಣ್ಣುವ. ಮಂಗಲಕಾರ-ಕರ್ತಿರ ಕೂಟ್‌ಕ್ ಕೊಂಬರೆಲ್ ಇಂಞ ದಂಡಾಳ್ ಕೂಡಿಯಂಡ್ ಒರೇ ತಳಿಯತ್ ಉಂಬ. ಪಂಡ್ ಮನೆಲ್ಲೇ ಜಾಕ್‌ನ ಕೋಳಿ, ಪಂದಿಕರಿ ಮಂಗಲತ್‌ಲ್! ಬೇಲ್‌ಲ್-ಬೊಳ್ಳರಿ ತೋಟತ್ ಬೊಳ್‌ತ್‌ನ ಬೊಳ್ಳರಿ, ಚೌತೆ, ಗೋಸ್ ಮುಟ್ಟೆ, ಬಯಿನೆ, ಚೆಟ್ಟ್! ಕಾಡ್‌ಲ್ ಕ್‌ಟ್ಟ್‌ನ ಮಾಂಗೆ, ಬೈಂಬಳೆ! ಕೂಟ್‌ಕ್ ಬೋಟೆಲ್ ಕ್‌ಟ್ಟ್‌ನ ಬೋಟೆ ಯರ್ಚಿ.

